ಜನಪದ ವಿಚಾರ

ಬೆಲೆ : ರೂ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೧೪ ಮೇ-೨೦೧೪ ಸಂಚಿಕೆ-೧೦

ಪ್ರದರ್ಶಿತಗೊಂಡ ಭಾರತ ಪ್ರಜಾಪ್ರಭುತ್ವದ ನಗ್ನಚಿತ್ರ

*

ಶಿಕ್ಷಣದ ಸಮಸ್ಯೆ

*

ಸ್ನೇಹಿತರೆ, ಭ್ರಷ್ಟಾಚಾರವನ್ನು ಕೊನೆಗಾಣಿಸೋಣ ಬನ್ನಿ!

*

ಪರಿಸರ ವಿನಾಶರಹಿತ ಸರ್ವಹಿತ ಅರ್ಥಶಾಸ್ತ್ರ

ಜನಪದ ವಿಚಾರದಲ್ಲಿ

ಮೇ - ೨೦೧೪

೧) ಪ್ರದರ್ಶಿತಗೊಂಡ ಭಾರತ ಪ್ರಜಾಪ್ರಭುತ್ವದ ನಗ್ನಚಿತ್ರ

- ಸುರೇಂದ್ರ ಕೌಲಗಿ ಪುಟ-೩

ಈಗ ತಾನೆ ಮುಗಿದ ಲೋಕಸಭಾ ಚುನಾವಣೆ ಕುರಿತಾದ ಕೆಲ ವಿಸಂಗತಿಗಳ ಚಿತ್ರಣ ಇಲ್ಲಿದೆ.

೨) ಶಿಕ್ಷಣದ ಸಮಸ್ಯೆ *- ರವೀಂದ್ರನಾಥ್ ಠಾಕೂರ್* ೭

೩) ಸ್ನೇಹಿತರೇ, ಭ್ರಷ್ಟಾಚಾರವನ್ನು ಕೊನೆಗಾಣಿಸೋಣ ಬನ್ನಿ!

- ಟಿಪ್ಪುಸುಲ್ತಾನ ಜೆ.ನಾಯ್ಕವಾಡಿ ೧೩

೪) ಆದರ್ಶದ ಹುಚ್ಚನೇರಿದ ಹುಚ್ಚೇಗೌಡ ೧೬

- ಜೆ.ಎಸ್.ಜಯದೇವ

೫) ನೆರಳುಗಳ ಬೆನ್ನುಹತ್ತಿ ೨೧

- ಡಾ.ಡಿ.ಬಿ.ರಾಮಚಂದ್ರಾಚಾರ್ಯ

೬) ಪರಿಸರ ವಿನಾಶರಹಿತ ಸರ್ವಹಿತ ಅರ್ಥಶಾಸ್ತ್ರ ೨೪

- ಭರತ್ ಡೋಗ್ರ

ಪರಿಸರನಾಶಕ ಅರ್ಥಶಾಸತ್ರ ಹುಟ್ಟಿದ ದೇಶಗಳಲ್ಲಿಯೇ ಸರ್ವಹಿತ ಅರ್ಥಶಾಸ್ತ್ರ ಹುಟ್ಟಿದ ಸಂಗತಿ ಈ ಲೇಖನದಲ್ಲಿ.

೭) ಗಾಂಧೀಜಿ ಮತ್ತು ಶಾಂತಿ ೨೮

- ಸುರೇಂದ್ರ ಕೌಲಗಿ

೮) ಸರ್ವೋದಯ ಪಕ್ಷದ ನಿರ್ಧಾರ ಸೂಕ್ತವೆ? ೩೧

- ಸುರೇಂದ್ರ ಕೌಲಗಿ

೯) ಜನಪದ ಸೇವಾ ಟ್ರಸ್ಟ್ ಸಮಾಚಾರ ೩೨

೧೦) ಜನಪದ ನಿಲಯದ ಅಂತರಂಗದಲ್ಲಿ - ೧೨೨ ೩೩

೧೧) ಖಾದಿ ವಿಚಾರ ೩೫

೧೨) ಸರ್ವೋದಯ ಆಂದೋಲನದ ಮುನ್ನಡೆ ೩೬

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಮೇ - ೨೦೧೪
ಸಂಪುಟ - ೧೪
ಸಂಚಿಕೆ - ೧೦

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

✆ 08236 316344
✆ 08236 299854
e-mail : janapada@yahoo.com
web: janapada.net

ಆದದ್ದೆಲ್ಲ ಒಳಿತೇ ಆಯಿತು

ಆದದ್ದೆಲ್ಲ ಒಳಿತೇ ಆಯಿತು, ನಮ್ಮ
ಶ್ರೀಧರನ ಸೇವೆ ಮಾಡಲು
ಸಾಧನ ಸಂಪತ್ತಾಯಿತು

ದಂಡಿಗೆ ಬೆತ್ತ ಹಿಡಿಯುವುದಕ್ಕೆ
ಮಂಡೆ ಬಾಗಿ ನಾಚುತಲಿದ್ದೆ
ಹೆಂಡತಿ ಸಂತತಿ ಸಾವಿರವಾಗಲಿ
ದಂಡಿಗೆ ಬೆತ್ತ ಹಿಡಿಸಿದಳಯ್ಯ

ಗೋಪಾಳ ಬುಟ್ಟಿ ಹಿಡಿಯುವುದಕ್ಕೆ
ಭೂಪತಿಯೆಂದು ಗರ್ವಿಸುತ್ತಿದ್ದೆ
ಆ ಪತ್ನೀಕುಲ ಸಾವಿರವಾಗಲಿ
ಗೋಪಾಳ ಬುಟ್ಟಿ ಹಿಡಿಸಿದಳಯ್ಯ

ತುಳಸೀ ಮಾಲೆ ಹಾಕುವುದಕ್ಕೆ
ಅರಸನೆಂದು ತಿರುಗುತಲಿದ್ದೆ
ಸರಸಿಜಾಕ್ಷ ಪುರಂದರವಿಠಲನು
ತುಳಸೀಮಾಲೆ ಹಾಕಿಸಿದನು

– *ಪುರಂದರದಾಸರು*

ಚಿಂತನೆಗೊಂದು ಸಂಗತಿ

ಆಪತ್ತಿನ ಎಚ್ಚರಿಕೆ

ವಿಶ್ವ ಸಂಸ್ಥೆಯಲ್ಲಿ ಪರಿಸರ ವಿಜ್ಞಾನ ಎಂಬ ತಂಡವಿದೆ. ಅದರಲ್ಲಿ ಜಗತ್ತಿನ ಎಲ್ಲ ದೇಶಗಳ ವಿಜ್ಞಾನಿಗಳಿದ್ದಾರೆ. ಇತ್ತೀಚೆಗೆ ಯೋಕೋಹಾಮದಲ್ಲಿ ಜಗತ್ತಿನ ನೂರಹದಿನೈದು ದೇಶಗಳ ಮುನ್ನೂರು ಜನ ಪಾರಂಗತರ ಸಭೆ ಸೇರಿ ಜಾಗತಿಕ ತಾಪಮಾನದ ಏರಿಕೆಯ ವಿರುದ್ಧ ಅತ್ಯಂತ ತೀವ್ರತಮವಾದ ಅಪಾಯದ ಎಚ್ಚರಿಕೆಯನ್ನು ಕೊಟ್ಟಿದೆ. ಇದು ಎರಡನೆಯ ಜಾಗತಿಕ ಸಭೆ. ಈ ಎರಡನೆಯ ಸಭೆ ನಡೆದದ್ದು ಕೆಲವೇ ತಿಂಗಳುಗಳ ನಂತರ. ಈ ಎರಡನೆಯ ಸಭೆಯಲ್ಲಿ ಎಲ್ಲ ದೇಶಗಳ ಪ್ರತಿನಿಧಿಗಳೂ ಇದ್ದರು. ಆದರೆ ಹೆಚ್ಚಾಗುತ್ತಿರುವ ಜೀವ ಭಯಕ್ಕೆ ಮತ್ತು ಎಲ್ಲ ಖಂಡಗಳಲ್ಲಿರುವ ಎಲ್ಲ ಜನರ ಆರೋಗ್ಯಕ್ಕೆ ಉಂಟಾಗುತ್ತಿರುವ ಭಯವನ್ನು ತಪ್ಪಿಸಬಹುದಾದ ಮಾರ್ಗೋಪಾಯಗಳನ್ನು ಕಂಡುಹಿಡಿಯುವ ಕಡೆಗೆ ಜಗತ್ತು ಕಿಂಚಿತ್ತೂ ಮುಂದೆ ಸರಿದಿಲ್ಲ. ಸಸ್ಯ ಮತ್ತು ಪ್ರಾಣಿ ಜೀವನದ ಮೇಲೂ ಕೂಡ ಭೂಮಿ ಮತ್ತು ಸಾಗರದ ಮೇಲಿನ ವಾತಾವರಣದಲ್ಲಿಯ ಪರಿಣಾಮದಿಂದದುಷ್ಪರಿಣಾಮ ಉಂಟಾಗುವುದು. ಅನೇಕ ಪ್ರಕಾರದ ಜೀವಿಗಳು ಪೂರ್ಣವಾಗಿ ನಶಿಸಿಹೋಗುವುವು. ಇತ್ತೀಚೆಗಿನ ಹವಾಮಾನ ಸಂಬಂಧಿ ದುರಂತಗಳಾದ ಕ್ಷಾಮ, ಪ್ರವಾಹ, ಚಂಡಮಾರುತಗಳು ಪದೇ ಪದೇ ದೊಡ್ಡ ಸಂಖ್ಯೆಯಲ್ಲಿ ಉಂಟಾಗುವುವು. ಹಿಮಗಡ್ಡೆಗಳ ಕರಗುವಿಕೆ, ಹೆಚ್ಚುತ್ತಿರುವ ಸಮುದ್ರಮಟ್ಟ ಮತ್ತು ಹೆಚ್ಚುತ್ತಿರುವ ಉಷ್ಣತೆ ಜಗತ್ತು ಇದುವರೆಗೆ ಹೊಂದಿಕೊಂಡು ಬಂದಿರುವ ಎಲ್ಲ ಜೀವನ ಕ್ರಮವನ್ನು ಹಾಗೂ ವಿಷಯಗಳನ್ನು ಬದಲಾಯಿಸುವುದು. ವ್ಯವಸಾಯ, ಕೈಗಾರಿಕೆ ಮತ್ತು ಜೀವನ ಪದ್ಧತಿಗಳನ್ನು ತಿರುಗುಮುರುಗು ಗೊಳಿಸುವುದು. ಕ್ಷೀಣಿಸುವ ಬೆಳೆ ಇಳುವರಿಗಳು, ಮುಖ್ಯವಾಗಿ ಗೋಧಿ ಮತ್ತು ಮುಸುಕಿನ ಜೋಳ ಆಹಾರ ಭದ್ರತೆಯನ್ನು ಅಪಾಯಕ್ಕೆ ಸಿಲುಕಿಸುವುದು. ಅದರಿಂದಾಗಿ ಬೃಹತ್ ಪ್ರಮಾಣದಲ್ಲಿ ಜನರ ವಲಸೆ ಹೋಗುವಿಕೆ ನಡೆಯುವುದು ಹಾಗೂ ಘರ್ಷಣೆಗಳಾಗುವುವು. ಭಾರತದಲ್ಲಿ ಅತಿಯಾದ ಹವಾಮಾನದ ಏರು ಪೇರುಗಳಿಂದಾಗಿ ಇಡೀ ಗಂಗಾನದಿಯ ಬಯಲು ಪ್ರದೇಶ ಮತ್ತು ಏರುವ ಸಮುದ್ರ ಮಟ್ಟದಿಂದಾಗಿ ಕರಾವಳಿ ತೀರ ಮುಖ್ಯವಾಗಿ ಅಪಾಯಕ್ಕೆ ಒಳಗಾಗುವುವು. ಮೀನುಗಾರಿಕೆ ದುರಂತಕೊಳ್ಳಗಾಗುವುದು. ಬರಲಿರುವ ವರ್ಷಗಳಲ್ಲಿ ಆರ್ಥಿಕ ಮತ್ತು ತಾಂತ್ರಿಕ ಬದಲಾವಣೆ ಅಪಾಯವನ್ನು ಕೊಂಚ ಕಡಿಮೆ ಮಾಡಬಹುದಾದರೂ ಋಣಾತ್ಮಕ ಪರಿಣಾಮಗಳು ಎಲ್ಲ ಕಡೆಗೂ ದೊಡ್ಡ ಪ್ರಮಾಣದಲ್ಲಿ ಉಂಟಾಗುವುದು. ಸದ್ಯದ ಗತಿಯಲ್ಲಿಯೇ ಇಂಗಾಲದ ಹೊರಹೊಮ್ಮುವಿಕೆಗೆ ಅವಕಾಶ ಮಾಡಿಕೊಟ್ಟಲ್ಲಿ ಅವಿತುಕೊಂಡು ಕುಳಿತುಕೊಳ್ಳಲು ಸ್ಥಳವೇ ಇರುವುದಿಲ್ಲ. ಯಾರೂ ಕೂಡ ಅಪಾಯದಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಅಧ್ಯಯನ ವರದಿಯ ಸಂಗತಿಗಳು ಮತ್ತು ನಿಷ್ಕರ್ಷಗಳು ಅತಿಶಯೋಕ್ತಿತವೆಂದಾಗಲೀ ಅಥವಾ ಕರಾರುವಕ್ಕಾಗಿ ಸಿದ್ಧವಾಗಿಲ್ಲವೆಂದಾಗಲೀ ಭಾವಿಸಿ ಅದನ್ನು ತಳ್ಳಿಹಾಕುವುದು ದಡ್ಡತನವಾಗುತ್ತದೆ. ಜಗತ್ತು ಈಗಾಗಲೇ ತನ್ನ ಉದಾಸೀನತೆ ಮತ್ತು ಕ್ರಿಯಾ ಹೀನತೆಯಿಂದ ಅಕಾಲಿಕ ಪ್ರಾಕೃತಿಕ ವಿಪತ್ತುಗಳಿಂದಾಗಿ ಬೆಲೆ ತೆತ್ತಿದೆ.

– ವಿವಿಧ ಮೂಲಗಳಿಂದ

ಪ್ರದರ್ಶಿತಗೊಂಡ ಭಾರತ ಪ್ರಜಾಪ್ರಭುತ್ವದ ನಗ್ನಚಿತ್ರ

– ಸುರೇಂದ್ರ ಕೌಲಗಿ

ಈಗ ತಾನೆ ಮುಕ್ತಾಯಗೊಂಡ ಹದಿನೈದನೇ ಲೋಕಸಭಾ ಚುನಾವಣೆ ಬೃಹತ್ ಸಮರವಾಗಿತ್ತು. ಈ ಸಮರದಲ್ಲಿ ಶಸ್ತ್ರಾಸ್ತ್ರಗಳ ಪ್ರಯೋಗದಷ್ಟೇ ಹರಿತವಾದ ಮತ್ತು ವಿನಾಶಕಾರಿಯಾದ ವಾಗ್ದಾಳಿಗಳು ನಡೆದವು. ವಾಗ್ದಾಳಿಗಳಿಂದ ದೇಶದ ಪ್ರಭುಗಳಾದ ಜನರ ಮಾನಸ ಅತ್ಯಂತ ಕ್ಷೋಭೆಯನ್ನು ಅನುಭವಿಸಿತು. ಎಂಬತ್ತೊಂದು ಕೋಟಿ ಮತದಾರರು ಯಾವ ಪಕ್ಷಕ್ಕೆ ಮತಕೊಡಬೇಕೆಂದು ತಿಳಿಯಲಾಗದೆ ಮೂರ್ಛೆ ಹೋದರು. ಅವರು ಮೂರ್ಛೆಯಿಂದ ಎದ್ದೇಳುವವೇಳೆಗೆ ಹೊಸ ಸರ್ಕಾರದ ರಚನೆಯಾದರೂ ರಾಜಕೀಯ ಅತಂತ್ರತೆ ಉಂಟಾಗಿರುವುದನ್ನು ನೋಡಿ ಗಾಬರಿಗೊಳ್ಳುವರು. ಈ ಮೊದಲಿದ್ದ ಯು.ಪಿ.ಎ ಸರ್ಕಾರ ಇಪ್ಪತ್ತನಾಲ್ಕು ಮಿತ್ರಪಕ್ಷಗಳ ಸಮೂಹವಾಗಿತ್ತು. ಈ ಮಿತ್ರಪಕ್ಷಗಳ ಸಮೂಹದ ಸರ್ಕಾರ ಕಳೆದ ಐದು ವರ್ಷಗಳ ತನ್ನ ರಾಜ್ಯಭಾರದಲ್ಲಿ ಏನೆಲ್ಲ ರಂಪಮಾಡಿತು ಜನತೆಗೆ ತಿಳಿದಿದೆ. ಅದಕ್ಕೂ ಮೊದಲಿದ್ದ ಎನ್.ಡಿ.ಎ ಸರ್ಕಾರ ಹದಿನೆಂಟು ಮಿತ್ರ ಪಕ್ಷಗಳ ಸಮೂಹವಾಗಿತ್ತು. ಆ ಸರ್ಕಾರದ ಅವಧಿಯಲ್ಲಿಯೂ ಕೂಡ ಅನೇಕ ಏರು ಪೇರುಗಳಾದವು. ಹೀಗೆ ಮಿತ್ರಪಕ್ಷಗಳ ಸಮೂಹದ ಹತ್ತು ವರ್ಷಗಳ ಆಡಳಿತದಿಂದ ಬೇಸತ್ತ ಪ್ರಜೆಗಳು ಈ ಸಲದ ಸರ್ಕಾರ ಸಮ್ಮಿಶ್ರ ಸರ್ಕಾರವಾಗದೆ ಒಂದು ಸುಸ್ಥಿರ ಸರ್ಕಾರ ರಚಿತವಾಗಲೆಂದು ಬಯಸಿದ್ದರು. ಆದರೆ ಚುನಾವಣಾ ಸಮರದಲ್ಲಿ ತೊಡಗಿದ್ದಂತ ರಾಜಕಾರಣಿಗಳಿಗೆ ಹಾಗೂ ಜನರಿಗೆ ಚುನಾವಣೋತ್ತರ ಸರ್ಕಾರ ಸುಸ್ಥಿರವಾದುದಂತಾಗಿರಬೇಕೆಂಬ ಕಲ್ಪನೆ ಇದ್ದಂತೆ ಕಾಣಲಿಲ್ಲ. ಕೇವಲ ತಕ್ಷಣದ ಗೆಲುವಿನ ಬಗ್ಗೆ ಆಲೋಚನೆ ಮಾಡಿದರೆ ಹೊರತು ದೀರ್ಘ ಕಾಲೀನ ವ್ಯವಸ್ಥೆಯ ಬಗ್ಗೆ ಆಲೋಚನೆ ಮಾಡಲಿಲ್ಲ. ತತ್‌ಪರಿಣಾಮವಾಗಿ ಈಗ ಮೂರನೆಯ ಬಾರಿಗೆ ಅತಂತ್ರ ಅಥವಾ ಪಕ್ಷಗಳ ಮಿಶ್ರ ಸರ್ಕಾರವನ್ನು ಪಡೆಯುವಂತಹ ದುಸ್ಥಿತಿ ಉಂಟಾಯಿತು. ಚುನಾವಣೆಯ ಫಲಿತಾಂಶವನ್ನು ನೋಡಿದರೆ ಸಮ್ಮಿಶ್ರ ಸರ್ಕಾರಗಳ ಯುಗವೆ ಪ್ರಾರಂಭವಾಯಿತೆಂದು ಅನಿಸುತ್ತದೆ. ಆದರೆ ಸಮ್ಮಿಶ್ರ ಸರ್ಕಾರಗಳ ಆಡಳಿತ ಶಿಥಿಲವಾಗಿರುತ್ತದೆ ಮತ್ತು ಅದರಿಂದ ರಚಿತವಾಗಿರುವ ಶಾಸನಗಳು ಬಲಹೀನವಾಗಿರುತ್ತವೆ. ಸಂಸತ್ತಿಗೆ ಆಯ್ಕೆಯಾಗಿ ಬಂದಿರುವ ಹೊಸ ಸದಸ್ಯರು ಯಾವ ರೀತಿ ಲೋಕಸಭೆಯಲ್ಲಿ ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಾರೆ ಎಂಬುದನ್ನು ಕಾದು ನೋಡಬೇಕಾಗಿದೆ. ಕಳೆದು ಹೋದ ಲೋಕಸಭೆಯಲ್ಲಿ ಸಂಸದರು ಕೇಳಿದ್ದ ಪ್ರಶ್ನೆಗಳ ಸಂಖ್ಯೆಯಲ್ಲಿ

ಹೆಚ್ಚಳವಾಗಿದ್ದರೂ ಕೂಡ ಅವುಗಳ ಗುಣಮಟ್ಟದಲ್ಲಿ ಕುಸಿತ ಕಂಡುಬಂದಿತ್ತು. ತಾವು ಕೇಳುವ ಪ್ರಶ್ನೆಗಳಿಂದ ದೊರೆಯುವ ಉತ್ತರ ಸಾರ್ವಜನಿಕರಿಗೆ ಎಷ್ಟೊಂದು ಉಪಯುಕ್ತವಾಗುವುದೆಂದು ಗಮನಿಸುತ್ತಿರಲಿಲ್ಲ. ಎಷ್ಟೋ ಸಲ ಅವರು ಹಾಕಿದ ಪ್ರಶ್ನೆಗಳು ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ನಡೆಸಲಾಗುವ ರಸಮಂಜರಿ ಕಾರ್ಯಕ್ರಮದಲ್ಲಿ ಕೇಳಲಾಗುವಂತಹ ಪ್ರಶ್ನೆಗಳಾಗಿರುತ್ತಿದ್ದವು. ಇನ್ನು ಅನೇಕ ಲೋಕಸಭಾ ಸದಸ್ಯರು ತಮ್ಮ ಐದು ವರ್ಷಗಳ ಅವಧಿಯಲ್ಲಿ ಒಂದು ಪ್ರಶ್ನೆಯನ್ನೂ ಕೇಳದೆ ತಮ್ಮ ಭತ್ಯೆ ಪಡೆದುದುಂಟು. ಇತ್ತೀಚೆಗೆ ಪತ್ರಿಕೆಗಳಲ್ಲಿ ವರದಿಯಾಗಿರುವಂತೆ ಲೋಕಸಭಾ ಸದಸ್ಯರಾದ ಹೆಚ್.ವಿಶ್ವನಾಥ್, ರಮೇಶ್ ಜಿಗಜಿಣಗಿ ಒಂದು ಪ್ರಶ್ನೆಯನ್ನೂ ಕೇಳಿಲ್ಲ. ಹೆಚ್.ಡಿ.ಕುಮಾರಸ್ವಾಮಿ, ಸಿ.ಎನ್. ಮೋಹನ್ ಒಂದೊಂದು ಪ್ರಶ್ನೆ ಕೇಳಿದ್ದರೆ, ಬಿ.ವೈ.ರಾಘವೇಂದ್ರ ಎರಡು ಪ್ರಶ್ನೆಗಳನ್ನು ಕೇಳಿದ್ದಾರೆ. ಚುನಾವಣಾ ಸಮಯದಲ್ಲೂ ಕೂಡ ಯಾವುದೇ ಪಕ್ಷದ ರಾಷ್ಟ್ರೀಯ ಮುಖಂಡ ಜ್ವಲಂತ ಆರ್ಥಿಕ, ಕೈಗಾರಿಕಾ ಮತ್ತು ಇತರ ಸಾಮಾಜಿಕ ಸಮಸ್ಯೆಗಳ ಬಗ್ಗೆ ಆಗಲೀ ಮತ್ತು ಅತ್ಯಂತ ಪ್ರಮುಖ ಸಮಸ್ಯೆಯಾದ ಹವಾಮಾನದ ಬದಲಾವಣೆಯ ವಿಷಯವನ್ನಾಗಲೀ, ಪರಿಸರ ನಾಶದ ವಿಷಯವನ್ನಾಗಲೀ ವೈಚಾರಿಕ ನೆಲೆಯಲ್ಲಿ ಮತ್ತು ತಾತ್ವಿಕ ನೆಲೆಯಲ್ಲಿ ಪ್ರಸ್ತಾಪಿಸಲಿಲ್ಲ. ಅವರ ಭಾಷಣಗಳೇನಿದ್ದರೂ ಪರಸ್ಪರ ಎದುರಾಳಿಯ ಲೋಪದೋಷಗಳನ್ನು ಎತ್ತಿ ಜನರಿಗೆ ತೋರಿಸುವುದೇ ಆಗಿತ್ತು. ಕೋಮು ದ್ವೇಷದ ಕಿಚ್ಚನ್ನು ಹಚ್ಚುವ ಭಾಷಣಗಳಾಗಿದ್ದವು. ಉದಾಹರಣೆಗೆ ನರೇಂದ್ರ ಮೋದಿಯನ್ನು ಕೊಚ್ಚಿ ಹಾಕುವುದಾಗಿ ಒಬ್ಬ ನಾಯಕ ಹೇಳಿದರೆ ವಿದೇಶಾಂಗ ಮಂತ್ರಿ ಸಲ್ಮಾನ್ ಖುರ್ಷಿದ್ ನಪುಂಸಕ ಎಂದು ಕರೆದರು. ಯಶವಂತ ಸಿನ್ಹಾ ಮನಮೋಹನ ಸಿಂಗರನ್ನು ಶಿಖಂಡಿ ಎಂದು ಕರೆದರು. ಬಾಬಾ ರಾಮದೇವ್‌ರವರನ್ನು ನಾಮರ್ದ್ ಎಂದು ಟೀಕಿಸಿದರು. ಮೋದಿಯವರು ಸುನಂದಾ ಪುಷ್ಕರ್‌ರವರನ್ನು ಶಶಿ ತರೂರ್‌ರವರ ಐವತ್ತು ಕೋಟಿ ಬೆಲೆ ಬಾಳುವ ಗರ್ಲ್ ಫ್ರೆಂಡ್ ಎಂದು ಕರೆದರು. ಸಿ.ಪಿ.ಎಂ ಸದಸ್ಯರು ಮಮತಾ ಬ್ಯಾನರ್ಜಿಯವರನ್ನು ಲೈಂಗಿಕ ಕಾರ್ಯಕರ್ತೆಯರೊಂದಿಗೆ ಹೋಲಿಸಿದರು. ಹೀಗೆ ಪುಂಖಾನು ಪುಂಖವಾಗಿ ಅಸಭ್ಯವಾಚಕ ಪದಗಳನ್ನು ಪರಸ್ಪರ ತೇಜೋವಧೆಗೆ ಬಳಸಲಾಯಿತು. ಚುನಾವಣಾ ಸಮಯದಲ್ಲಿ ಜಾತಿ ಸಮಾವೇಶಗಳ ಭರಾಟೆ ನಡೆಯಿತು. ಕರ್ನಾಟಕ ರಾಜ್ಯ ಸರ್ಕಾರ ಕಳೆದ ಆರ್ಥಿಕ ವರ್ಷಗಳಲ್ಲಿ ನೂರ ಎಪ್ಪತ್ತು ಮಠಗಳು, ವಿವಿಧ ಜಾತಿ/ಜನಾಂಗಗಳ ಸಂಸ್ಥೆಗಳಿಗೆ ಅರವತ್ತಾರು ಕೋಟಿ ಬಿಡುಗಡೆ ಮಾಡಿದೆ. ಮೋದಿಗೆ ಮತ ಹಾಕದೇ ಇದ್ದವರು ಪಾಕಿಸ್ತಾನಕ್ಕೆ ಹೋಗಲಿ ಎಂಬ ಹೇಳಿಕೆಯೂ ಕೇಳಿಬಂತು. ಹಿಂದುಗಳಿರುವ ಪರಿಸರದಲ್ಲಿ ಮುಸ್ಲಿಂರಿಗೆ ಸ್ಥಳಾವಕಾಶಕೊಡಬಾರದೆಂಬ ಸಲಹೆಯು ಕೇಳಿಬಂತು. ಮೋದಿ ಅಧಿಕಾರಕ್ಕೆ ಬಂದರೆ ಪಾಕಿಸ್ತಾನವನ್ನು ಧ್ವಂಸ ಮಾಡಲಾಗುವುದೆಂಬ ಮಾತೂ ಕೇಳಿಬಂತು. ಮುಸ್ಲಿಂರು ಹೆಚ್ಚು ಧರ್ಮಿಷ್ಠರಾಗಬೇಕೆಂಬ ಸೂಚನೆಯು

ಪ್ರತಿಧ್ವನಿಸಿತು. ಕಾಂಗ್ರೆಸ್ಸಿನ ನಾಯಕರು ದೆಹಲಿಯಲ್ಲಿರುವ ಜಮಾ ಮಸ್ಜಿತ್‌ನ ಇಮಾಮ್ ಬುಖಾರಿಯವರನ್ನು ಕಂಡು ಮಾತನಾಡಿದ್ದರ ಫಲಿತಾಂಶವಾಗಿ ಇಮಾಮ್ ಸಾಹೇಬರು ಎಲ್ಲ ಮುಸ್ಲಿಂರು ಕಾಂಗ್ರೆಸ್ಸಿಗೆ ಮತ ಕೊಡಬೇಕೆಂದು ಅಪ್ಪಣೆಕೊಟ್ಟರು. ಹೀಗೆ ಬೆಳೆಯುತ್ತಾ ಹೋಗುತ್ತದೆ ಕೋಮುವಾದದ ಕಿಚ್ಚನ್ನು ಪ್ರಜ್ವಲಿಸುವ ಕ್ರಿಯೆ.

ಚುನಾವಣೆಯಲ್ಲಿ ಗೆಲ್ಲಬೇಕೆಂಬ ಏಕೈಕ ಉದ್ದೇಶದಿಂದ ಇಡಿಯಾಗಿ ಇದ್ದ ಆಂಧ್ರಪ್ರದೇಶವನ್ನು ಎರಡು-ಮೂರು ಭಾಗಗಳಲ್ಲಿ ವಿಭಜಿಸಲಾಯಿತು. ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ಆರ್ಥಿಕವಾಗಿ ಇದೊಂದು ದೊಡ್ಡ ದುರಂತವೇ ಸರಿ. ಮತವನ್ನು ಗಳಿಸುವುದಕ್ಕಾಗಿ ರಾಜಕೀಯದಿಂದ ದೂರವಿದ್ದ ಜನಪ್ರಿಯ ಸಿನಿಮಾ ತಾರೆಯರನ್ನು, ನಿವೃತ್ತ ಕ್ರಿಕೆಟಿಗರನ್ನು ಬರಮಾಡಿಕೊಂಡಿದ್ದಾರೆ. ಎಲ್ಲ ಪಕ್ಷಗಳೂ ಇವರಿಗೆ ಟಿಕೇಟ್ ಕೊಟ್ಟಿವೆ. ಜೊತೆಗೆ ಮತದಾರರಿಗೆ ಟಿ.ವಿ ಕೊಡುವುದು, ಲ್ಯಾಪ್‌ಟಾಪ್ ಕೊಡುವುದು ಮುಂತಾದ ಆಮಿಷಗಳನ್ನು ಒಡ್ಡುವ ಕೆಲಸವು ನಡೆಯಿತು. ಚುನಾವಣಾ ಸಮಯದಲ್ಲಿ ನೀತಿ ಸಂಹಿತೆಯ ವ್ಯವಸ್ಥೆಯನ್ನು ಮೀರಿ ಕೋಟಿ ಗಟ್ಟಲೆ ಹಣ ಕಳ್ಳ ಸಾಗಾಣಿಕೆಯಲ್ಲಿ ಹರಿದಾಡಿತು. ಚುನಾವಣೆಗೆ ನಿಂತ ಎಲ್ಲ ಪಕ್ಷಗಳ ಎಲ್ಲ ಉಮೇದುವಾರರು ಕೋಟ್ಯಾಧೀಶ್ವರರೇ ಆಗಿದ್ದಾರೆ. ಇದಕ್ಕೆ ಒಂದೆರಡು ಅಪವಾದ ಮಾತ್ರ ಇದೆ. ಇನ್ನೊಂದು ರಾಜಕೀಯ ಅಪ್ರಬುದ್ಧತೆ, ತತ್ವಹೀನತೆಗೆ ಸಂಗತಿ ಏನೆಂದರೆ ಕೆಲ ಹಿರಿಯ ಮತ್ತು ಪಕ್ವ ರಾಜಕಾರಣಿಗಳು ತಮಗೆ ಇಷ್ಟವಾದ ಕ್ಷೇತ್ರದಲ್ಲಿ ಸ್ಪರ್ಧಿಸಲು ಪಕ್ಷ ಟಿಕೇಟ್ ಕೊಡದೆ ಇದ್ದುದರಿಂದ ಬೇರೆ ಪಕ್ಷಗಳಿಗೆ ಮತಾಂತರಗೊಂಡು ಸ್ಪರ್ಧಿಸಿದ್ದು. ಇವರಲ್ಲಿ ಪ್ರಮುಖರಾಗಿ ಕಾಣುವುದು ರಾಷ್ಟ್ರಮಟ್ಟದಲ್ಲಿ ಯಶವಂತ್ ಸಿನ್ಹಾ ಮತ್ತು ರಾಜ್ಯ ಮಟ್ಟದಲ್ಲಿ ತೇಜಸ್ವಿನಿ ರಮೇಶ್ ಇಂಥ ಘಟನೆಗಳು ಯಾವುದೇ ರಾಜಕೀಯ ಪಕ್ಷ ಬೆಳೆಯಲು ಮತ್ತು ಪ್ರಜಾಪ್ರಭುತ್ವ ಹೊರಹೊಮ್ಮಲು ಸಹಾಯಕವಾಗುವುದಿಲ್ಲ.

ದೇಶದ ಇನ್ನೊಂದು ಸಮಸ್ಯೆಯಾದ ನಕ್ಸಲೀಯರ ಬಗ್ಗೆ ಯಾವ ಪಕ್ಷಗಳ ಮುಖಂಡರೂ ಮಾತನಾಡದಿದ್ದುದು ಗಮನಿಸಬೇಕಾಗಿದೆ. ದೇಶದ ಒಂಭತ್ತು ರಾಜ್ಯಗಳಲ್ಲಿ ಕಳೆದ ಇಪ್ಪತ್ತು ವರ್ಷಗಳಲ್ಲಿ ಹನ್ನೆರಡು ಸಾವಿರದ ನೂರ ಎಂಭತ್ತ ಮೂರು ಮಂದಿ ನಕ್ಸಲೀಯರ ದಾಳಿಗೆ ತುತ್ತಾಗಿದ್ದಾರೆ. ಇನ್ನೂ ಆ ಸಂಖ್ಯೆ ಹೆಚ್ಚುತ್ತಲೇ ಇದೆ. ಈ ಸಮಸ್ಯೆ ಯಾವ ಪಕ್ಷಕ್ಕೂ ಸಮಸ್ಯೆಯಾಗಿ ಕಾಣದೇ ಇರುವುದು ಹಾಗೂ ಅದರ ಬಗ್ಗೆ ಚುನಾವಣಾ ಕಾಲದಲ್ಲಿ ಪ್ರಸ್ತಾಪಿಸದೇ ಇರುವುದು ಆಶ್ಚರ್ಯವನ್ನುಂಟು ಮಾಡುತ್ತದೆ. ಚುನಾವಣಾ ಸಮಯದಲ್ಲಿ ಎಲ್ಲ ರಾಜಕೀಯ ಪಕ್ಷಗಳ ಧುರೀಣರು ನೀತಿ ಸಂಹಿತೆಯನ್ನು ಮುರಿದಿದ್ದಕ್ಕಾಗಿ ಚುನಾವಣಾ ಆಯೋಗದಿಂದ ಎಚ್ಚರಿಕೆ ಪಡೆದಿದ್ದಾರೆ ಮತ್ತು ಕೆಲವರಿಗೆ ಶಿಕ್ಷೆಯನ್ನು ಕೊಟ್ಟಿದೆ. ಚುನಾವಣಾ ನಂತರ ಅಧಿಕಾರದ ಗದ್ದುಗೆ ಏರಲಿರುವ ಈ ಧುರೀಣರಿಗೆ ಚುನಾವಣಾ ಆಯೋಗದ ನೀತಿ ಸಂಹಿತೆಯನ್ನು ಪಾಲಿಸಲಾಗಿಲ್ಲವೆಂಬುದು

ಖೇದಕರ ಸಂಗತಿ. ಪಶ್ಚಿಮ ಬಂಗಾಳದ ಮಮತಾ ಬ್ಯಾನರ್ಜಿಯಂತೂ ಅಧಿಕಾರಿಗಳ ವರ್ಗಾವಣೆ ವಿಷಯದಲ್ಲಿ ಚುನಾವಣಾ ಆಯೋಗದೊಂದಿಗೆ ಸಂಘರ್ಷಕ್ಕೆ ಇಳಿದಿದ್ದು ಅವರ ರಾಜಕೀಯ ಪ್ರೌಢಿಮೆ ಬಗ್ಗೆ ಸಂಶಯ ಮೂಡಿಸುತ್ತದೆ. ಚುನಾವಣೆಯ ಸಂದರ್ಭದಲ್ಲಿ ಎಲ್ಲ ಪ್ರಕಾರದ ಮಾಧ್ಯಮಗಳ ಪಾತ್ರ ಬಹಳ ಮುಖ್ಯವಾದುದು. ಯಾವ ದಿಕ್ಕಿಗಾದರೂ ಚುನಾವಣಾ ಗಾಳಿ ಬೀಸುವಂತೆ ಅದು ಮಾಡಬಹುದು. ಇಂಥ ಪ್ರಭಾವಶಾಲಿ ಮಾಧ್ಯಮ ಸುದ್ದಿಗಾಗಿ ಹಣ ಮಾಡುವ ಪ್ರವೃತ್ತಿಯನ್ನು ಬೆಳೆಸಿಕೊಂಡದ್ದು ತುಂಬಾ ಆಘಾತಕಾರಿಯಾದ ಸಂಗತಿ. ಮಾಧ್ಯಮಗಳು ತಮ್ಮ ಕೆಲ ರಾಜಕೀಯ ಪಕ್ಷಗಳಿಗೆ ಮಾರಿಕೊಂಡಿವೆ ಎಂಬ ಆಪಾದನೆಗೂ ಗುರಿಯಾಗಿವೆ.

ಇನ್ನೊಂದು ಮಹತ್ವದ ವಿಷಯವೆಂದರೆ ಭಾರತದ ಸೇನೆ ದೇಶದ ರಾಜಕೀಯ ಬೆಳವಣಿಗೆಯನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಿದೆ. ದೇಶದ ಇಂದಿನ ಕಲುಷಿತ ರಾಜಕೀಯ ಬೆಳವಣಿಗೆಗಳನ್ನು ನೋಡಿರುವ ಸೇನೆ ಚುನಾವಣೆಯ ಅಂತಿಮ ಫಲಿತಾಂಶದ ಬಗ್ಗೆಯೂ ಕುತೂಹಲದಿಂದ ನೋಡುತ್ತಿರಬಹುದು. ಚುನಾವಣೋತ್ತರ ಭಾರತದಲ್ಲಿ ತನಗೆ ಯಾವುದಾದರೂ ಪಾತ್ರ ನಿರ್ವಹಿಸಬೇಕಾದೀತೆ ಎಂಬ ಪ್ರಶ್ನೆ ಅದರ ಮನದಲ್ಲಿ ಬಂದಿರಲು ಸಾಕು. ೨೦೧೪ರ ಲೋಕಸಭಾ ಚುನಾವಣೆಯ ಎರಡು ವರ್ಷ ಮೊದಲು ಸೇನೆಯ ಎರಡು ತುಕಡಿಗಳು ಆಗ್ರಾದಿಂದ ದಿಲ್ಲಿಯತ್ತ ಸಾಗಿದ್ದವು. ಸೇನೆಯ ಈ ಚಲನ ವಲನದ ಬಗ್ಗೆ ಅನೇಕ ಪ್ರಕಾರದ ಊಹಾ ಪೋಹಗಳು ಎದ್ದವು. ಇದೊಂದು ಸಾಮಾನ್ಯ ಸೈನಿಕ ಕವಾಯತು ಎಂದು ಹೇಳಲಾಯಿತು. ಇದರ ಬಗ್ಗೆ ತನಿಖೆ ನಡೆದಿದ್ದರೆ "ನಿತ್ಯದ ಸೈನಿಕ ತರಬೇತಿಯ ಪ್ರಕ್ರಿಯೆಯ" ಬಣ್ಣ ಬಯಲಾಗುತ್ತಿತ್ತು. ರಾಜಕೀಯ ಪಕ್ಷಗಳ ಪ್ರಣಾಳಿಕೆಗಳು ನಂಬಲರ್ಹವಾಗಿಲ್ಲ. ಗಾಳಿ ಬೀಸಿದೆಡೆ ಕೊಡೆ ಹಿಡಿಯುವ ಸ್ವಭಾವ ಪಕ್ಷಗಳದಾದ್ದರಿಂದ ಪ್ರಣಾಳಿಕೆಗೆ ಬೆಲೆಯಿಲ್ಲ. ಚುನವಣೆ ಮುಗಿದ ನಂತರ ಪ್ರಣಾಳಿಕೆಗಳು ಪಕ್ಷಗಳ ಕಪಾಟಿನಲ್ಲಿ ದೂಳು ತಿನ್ನುತ್ತಾ ಇರುತ್ತವೆ.

೨೦೧೪ರ ಲೋಕಸಭಾ ಚುನಾವಣೆ ಭಾರತದ ಪ್ರಜಾಪ್ರಭುತ್ವದ ನಗ್ನ ಚಿತ್ರವನ್ನು ಪ್ರದರ್ಶಿತಗೊಳಿಸಿದೆ. ಸುಮಾರು ಒಂಬೈನೂರು ಕೋಟಿಯಷ್ಟು ಹಣ ಈ ಚುನಾವಣೆಗೆ ಖರ್ಚಾಗಿರಬಹುದು. ಅತಂತ್ರ ಸರ್ಕಾರವೇನಾದರೂ ಏರ್ಪಟ್ಟು ಮತ್ತೊಂದು ಚುನಾವಣೆಗೆ ದಾರಿ ಮಾಡಿಕೊಟ್ಟರೆ ಪುನಃ ಸಾವಿರಕೋಟಿಯಷ್ಟು ಹಣ ಖರ್ಚಾಗುವುದು. ಈ ಚುನಾವಣೆಯಲ್ಲಿ ಕಲಿತ ಪಾಠಗಳಿಂದ ದೇಶದ ಪ್ರಜಾಪ್ರಭುತ್ವ ಶುದ್ಧವೂ, ಸದೃಢವೂ ಆಗಿ ಹೊರಹೊಮ್ಮುವುದಾದರೆ ದೇಶಕ್ಕೆ ಶುಭವಾದೀತು.

* * *

ಶಿಕ್ಷಣದ ಸಮಸ್ಯೆ

- ಮೂಲ: ರವೀಂದ್ರನಾಥ ಠಾಕೂರ್;
ಅನು: ಚೆನ್ನವೀರ ಕಣವಿ

ಈಗ ನಮ್ಮ ದೇಶದಲ್ಲಿ ಶಾಲೆಯೆಂದು ಕರೆಯಿಸಿಕೊಳ್ಳುವ ಸಂಸ್ಥೆ ನಿಜವಾಗಿಯೂ ಒಂದು ಕಾರ್ಖಾನೆಯೇ ಸರಿ. ಶಿಕ್ಷಕರು ಆ ಕಾರ್ಖಾನೆಯ ಒಂದು ಭಾಗವಾಗಿದ್ದಾರೆ. ಮುಂಜಾವ ಹತ್ತೂವರೆ ಗಂಟೆಗೆ ಗಂಟೆ ಬಾರಿಸಿದೊಡನೆ ಕಾರ್ಖಾನೆಯು ತೆರೆಯುತ್ತದೆ. ಆಮೇಲೆ ಇತ್ತ ಶಿಕ್ಷಕರು ಮಾತನಾಡತೊಡಗಿದರೆಂದರೆ ಅತ್ತ ಯಂತ್ರಗಳು ತಮ್ಮ ಕೆಲಸವನ್ನು ಪ್ರಾರಂಭಿಸುತ್ತವೆ. ಅಪರಾಹ್ನ ನಾಲ್ಕು ಗಂಟೆಗೆ ಕಾರ್ಖಾನೆ ಮುಚ್ಚುವ ಹೊತ್ತಿಗೆ ಶಿಕ್ಷಕರು ತಮ್ಮ ಸಂಭಾಷಣೆಯನ್ನು ನಿಲ್ಲಿಸುತ್ತಾರೆ. ವಿದ್ಯಾರ್ಥಿಗಳು ತಾವು ಯಾಂತ್ರಿಕವಾಗಿ ಕಲಿತ ಕೆಲವು ಪುಟಗಳೊಂದಿಗೆ ಮನೆಯ ಹಾದಿ ಹಿಡಿಯುತ್ತಾರೆ. ಕೆಲ ದಿನಗಳ ತರುವಾಯ ಬಿಲ್ಲೆಯನ್ನು ಅವರ ಹಣೆಗೆ ಹಚ್ಚಲಾಗುತ್ತದೆ.

ಕಾರ್ಖಾನೆಯ ಒಂದು ಸೌಲಭ್ಯವೆಂದರೆ, ನಾವು ಮಾಡಲು ಹೇಳಿದ ರೀತಿಯಲ್ಲಯೇ ಸಾಮಾನುಗಳನ್ನು ತಯಾರಿಸಿಕೊಡುವುದು. ಅದೂ ಅಲ್ಲದೆ ಈ ಸಾಮಾನುಗಳಿಗೆ ಚೀಟಿ ಅಂಟಿಸುವುದು ಇನ್ನೂ ಸುಲಭ. ಯಾಕೆಂದರೆ, ಬೇರೆ ಬೇರೆ ಯಂತ್ರಗಳು ತಯಾರಿಸಿದ ಈ ವಸ್ತುವಿನಲ್ಲಿ ಹೇಳಿಕೊಳ್ಳುವಂಥ ವ್ಯತ್ಯಾಸವೇನೂ ಇರುವುದಿಲ್ಲ.

ಆದರೆ ಒಬ್ಬ ಮನುಷ್ಯನಿಗೂ ಮತ್ತೊಬ್ಬ ಮನುಷ್ಯನಿಗೂ ಎಷ್ಟೋ ಅಂತರವಿರುತ್ತದೆ. ಅಷ್ಟೇಕೆ, ಅದೇ ಮನುಷ್ಯನನ್ನು ಬೇರೆ ಬೇರೆ ದಿನಗಳಲ್ಲಿ ಕಂಡಾಗಲೂ ವ್ಯತ್ಯಾಸವಿದ್ದೇ ಇರುತ್ತದೆ.

ಅದೇನೇ ಇರಲಿ, ಮನುಷ್ಯಪ್ರಾಣಿಗಳಿಂದ ನಮಗೆ ದೊರೆಯುವುದನ್ನು ಯಂತ್ರಗಳಿಂದ ಎಂದೂ ಪಡೆಯಲಾರೆವು. ಯಂತ್ರವು ಒಂದು ವಸ್ತುವನ್ನು ನಮ್ಮೆದುರು ಹಿಡಿಯಬಲ್ಲದು. ಆದರೆ ಅದನ್ನು ನಮ್ಮ ಕೈಯಲ್ಲಿ ಕೊಡಲಾರದು. ದೀಪವನ್ನು ಹೊತ್ತಿಸಲು ಅದು ನಮಗೆ ಎಣ್ಣೆಯನ್ನು ಕೊಡಬಹುದು;
ಆದರೆ ಅದೇ ದೀಪವನ್ನು ಹಚ್ಚಲಾರದು.

ಯೂರೋಪ್ ಖಂಡದ ಹುಡುಗನ ಮಾನಸಿಕ ಬೆಳವಣಿಗೆಯಲ್ಲಿ ಅಲ್ಲಿಯ ಶಾಲೆಯ ಪಾತ್ರ ಅಷ್ಟು ಮುಖ್ಯವಾಗಿಲ್ಲ. ಅವನು ಬೆಳೆದು ದೊಡ್ಡವನಾಗುತ್ತಿರುವ ಆ ದೇಶದ ಜೀವನ ಅದರಲ್ಲಿ ಹಿರಿಯ ಪಾತ್ರವನ್ನು ವಹಿಸುತ್ತದೆ. ಯೂರೋಪಿನ ಶಿಕ್ಷಣ ಕ್ರಮವು ಜೀವನದಿಂದ ದೂರವಿರದೆ ಅದರ ಸಮಗ್ರತೆಯ ಭಾಗವಾಗಿದೆ. ಅದು ಸಮಾಜದಲ್ಲಿಯೇ ಬೆಳೆದು ವಿಕಾಸಹೊಂದಿ ಪ್ರಸಾರಗೊಳ್ಳುತ್ತಿರುತ್ತದೆ. ಜನರು ತಮ್ಮ ನಿತ್ಯ ಜೀವನದಲ್ಲಿ ಆಡುವ ಮಾತು, ವಿಚಾರಿಸುವ ಸಂಗತಿ ಮಾಡುವ ಕಾರ್ಯ

ಎಲ್ಲದರ ಮೇಲೂ ತನ್ನ ಮುದ್ರೆಯನ್ನು ಒತ್ತಿರುತ್ತದೆ. ಸಮಾಜವು ತನ್ನ ದೀರ್ಘ ಚರಿತ್ರೆಯಿಂದ, ಅನೇಕ ಜನರ ನಾನಾ ಬಗೆಯ ಕಾರ್ಯಚಟುವಟಿಕೆಗಳಿಂದ, ತನ್ನದನ್ನಾಗಿ ಮಾಡಿಕೊಂಡಿರುವ ಸಂಸ್ಕೃತಿಯ ಮಾಧ್ಯಮ ಮಾತ್ರ ಆಗಿದೆ ಶಾಲೆಯೆಂಬುದು

ಆದರೆ ನಮ್ಮ ದೇಶದಲ್ಲಿಯ ಶಾಲೆಗಳು ಸಮಾಜದ ಸಮಗ್ರತೆಯ ಅಂಶವಾಗಿರದೆ ಹೊರಗಿನಿಂದ ಅದರ ಮೇಲೆ ತಂದು ಹೇರಿದವುಗಳಾಗಿವೆ. ಅವು ಕಲಿಸುವ ಅಭ್ಯಾಸ ಕ್ರಮಗಳು ರಸಹೀನವೂ ಕಲಿಯಲು ಕಷ್ಟಕರವೂ ಆಗಿದ್ದು ಕಲಿತಮೇಲೆಯೂ ನಿರುಪಯೋಗಿಯಾಗಿವೆ. ದಿವಸದಲ್ಲಿ ಹತ್ತರಿಂದ ನಾಲ್ಕು ಗಂಟೆಯವರೆಗೆ ವಿದ್ಯಾರ್ಥಿಗಳು ಉರು ಹೊಡೆಯುವ ಪಾಠಗಳಿಗೂ ಅವರು ಜೀವಿಸುತ್ತಿರುವ ದೇಶಕ್ಕೂ ಏನೂ ಸಂಬಂಧವೇ ಇರುವುದಿಲ್ಲ. ಅವರ ತಂದೆ ತಾಯಿಗಳು,ಬಂಧುಬಳಗದವರು, ಮನೆಯಲ್ಲಿ ಮಾತನಾಡಿಕೊಳ್ಳುವ ವಿಷಯಗಳಿಗೂ ಪರಸ್ಪರ ಹೊಂದಿಕೆಯೇ ಇರುವುದಿಲ್ಲ; ಇಷ್ಟೇ ಅಲ್ಲ, ಅವುಗಳಲ್ಲಿ ವಿರೋಧಾಂಶಗಳೇ ಹೆಚ್ಚಿರುತ್ತವೆ. ಶಾಲೆಗಳು ಕಾರ್ಖಾನೆಗಳಿಗಿಂತ ಉತ್ತಮವಾಗಿ ಮನುಷ್ಯ ಯಂತ್ರಗಳನ್ನು ತಯಾರಿಸಬಲ್ಲುವಾಗಿವೆ.

ಆದ್ದರಿಂದ ಇಷ್ಟು ಮಾತ್ರ ಸ್ಪಷ್ಟ : ಯೂರೋಪಿನ ಶಾಲೆಗಳ ಬಾಹ್ಯ ಸಂಗತಿಗಳನ್ನು ತದ್ವತ್ತಾಗಿ ಅನುಕರಿಸುವುದರಲ್ಲಿ ನಾವು ಯಶಸ್ವಿಯಾದರೂ ಆದರೆ ನಿಜವಾದ ತಿರುಳನ್ನು ನಾವು ಎಂದಿಗೂ ಪಡೆಯಲಾರೆವು. ಹಾಗೆ ಮಾಡುವುದರಿಂದ ಮೇಜು ಕುರ್ಚಿಗಳ, ನಿಯಮ ಪಾಠ ಕ್ರಮಗಳ ಭಾರವನ್ನು ವ್ಯರ್ಥ ಹೊತ್ತುಕೊಂಡಂತಾಗುತ್ತದೆ, ಅಷ್ಟೇ. ಯೂರೋಪಿನ ಶಾಲೆಗಳು ಎಷ್ಟೇ ನಿರ್ದೋಷವಾಗಿದ್ದರೂ, ಅವು ನಮಗೆ ಮಾತ್ರ ಬರೀ ಅನುಕರಣೆಯಾಗಿ ಸಂಭವಿಸುತ್ತವೆ.

ಪ್ರಾಚೀನ ಭಾರತದಲ್ಲಿ ಶಿಕ್ಷಣವು ನೈತಿಕ ಹಾಗೂ ಆಧ್ಯಾತ್ಮಿಕ ಉಪದೇಶಕರಾಗಿದ್ದ ಗುರುಗಳ ಕೈಯಲ್ಲಿರುತ್ತಿದ್ದಿತು. ಆ ಬೋಧಕರು ಮನುಷ್ಯರಾಗಿದ್ದರಲ್ಲದೆ ಯಂತ್ರಗಳಾಗಿರಲಿಲ್ಲ. ಆಗಿನ ಶಿಕ್ಷಣವು ತೀರ ಸುತ್ತು ಬಳಸಾದ ವಿಸ್ತಾರ ವ್ಯಾಪ್ತಿಯುಳ್ಳದ್ದಾಗಿರಲಿಲ್ಲ; ಸಮಾಜದಲ್ಲಿಯ ಪ್ರಚಲಿತ ವಿಚಾರ ಮತ್ತು ಅಭಿಪ್ರಾಯಗಳಿಗೆ ವ್ಯತಿರಿಕ್ತವೂ ಆಗಿರಲಿಲ್ಲ. ಆದರೆ ಅದನ್ನು ಈಗ ಪುನಃ ತಂದುಕೊಳ್ಳಲು ಪ್ರಯತ್ನಿಸಿದರೆ ಆ ಪದ್ಧತಿಗಳನ್ನು ವ್ಯರ್ಥವಾಗಿ ಪುನರುಜ್ಜೀವನಗೊಳಿಸಿದಂತಾಗುತ್ತದಲ್ಲದೆ, ಕೊನೆಯಲ್ಲಿ ಅದೇ ಒಂದು ಹೊರೆಯಾಗಿ ಪರಿಣಮಿಸುತ್ತದೆ.

ಇಂದಿನ ಅವಶ್ಯಕತೆಗಳನ್ನು ನಾವು ತಿಳಿದುಕೊಂಡದ್ದೇ ಆದಲ್ಲಿ, ನಾವು ಸ್ಥಾಪಿಸುವ ಯಾವುದೇ ಹೊಸ ಶಾಲೆಗಳು ಮುಂದೆ ಕಾಣಿಸಿದ ನಿಯಮಗಳನ್ನು ಈಡೇರಿಸುವಂತಿವೆಯೇ ಎಂಬುದನ್ನು ನೋಡಬೇಕು. ಅಭ್ಯಾಸಕ್ರಮಗಳು ಉಲ್ಲಾಸಮಯವೂ ವೈವಿಧ್ಯಪೂರ್ಣವೂ ಆಗಿರಬೇಕು. ಹೃದಯಕ್ಕೂ ಬುದ್ಧಿಗೂ ಕೂಡಿಯೇ ಅವು ಪೋಷಕವಾಗಿರಬೇಕು. ಯಾವುದೇ ಬಗೆಯ ಅನೈತಿಕತೆ ವಿಸಂಗತಿಗಳು ನಮ್ಮ ಯುವಕರ ಮನಸ್ಸನ್ನು ಬಲವಂತದಿಂದ ಬೇರ್ಪಡಿಸುವಂತಿರಕೂಡದು.

ಶಿಕ್ಷಣವು ಯಾವುದೋ ಅವಾಸ್ತವ ಸಂಗತಿಯಾಗಿರಬಾರದು. ಶಾಲೆಯಲ್ಲಿ ಕೆಲವು ಗಳಿಗೆ ಇರುವ ವಿದ್ಯಾರ್ಥಿಗಳಿಗೆ ಅದು ಭಾರವೂ ಗಹನವೂ ಆಗಿರಕೂಡದು. ಶಾಲೆಗಳನ್ನು ಮನೆಗಳನ್ನಾಗಿ ಪರಿವರ್ತಿಸಿದರೆ ಅವು ಬೋರ್ಡಿಂಗ್ ಸ್ಕೂಲು(ಹಣಕ್ಕೆ ಊಟ ಹಾಕಿ ವಿದ್ಯೆ ಕಲಿಸುವ ಪಾಠಶಾಲೆ)ಗಳಾಗಿ ಪರಿಣಮಿಸುತ್ತವೆ. ಇಂಥ ಶಾಲೆಗಳು ಸಂತೋಷವರಿಯದ ಕನಸು ನೋಟಗಳ ಮಾಟವಾಗಿರುವುದಲ್ಲದೆ ಅವು ದಂಡಿನ ಪಾಳೆಯಗಳಿಗೆ, ಹುಚ್ಚಾಸ್ಪತ್ರೆಗಳಿಗೆ, ದವಾಖಾನೆಗಳಿಗೆ ಮತ್ತು ಜೈಲುಗಳಿಗೆ ಸಮಾನವಾಗಿರುತ್ತವೆ.

ಯೂರೋಪಿನ ಮಾದರುಯನ್ನು ನಾವು ನಮ್ಮ ಮನಸ್ಸಿನಿಂದ ಸಂಪೂರ್ಣ ಕಿತ್ತೊಗೆಯಬೇಕು. ಇದಕ್ಕಿರುವ ಒಂದೇ ಕಾರಣವೆಂದರೆ ಯೂರೋಪಿನ ಇತಿಹಾಸ ಮತ್ತು ಅಲ್ಲಿಯ ಸಮಾಜ ನಮ್ಮ ಇತಿಹಾಸ ಹಾಗೂ ಸಮಾಜಗಳಿಂದ ತೀರ ಭಿನ್ನವಾಗಿರುವುದು. ಹಿಂದೆ ನಮ್ಮ ದೇಶದ ಮನಸ್ಸನ್ನು ಆಕರ್ಷಿಸಿ ಉತ್ತೇಜನಗೊಳಿಸಿದ ಆದರ್ಶಗಳನ್ನು ನಾವಿಂದು ಸರಿಯಾಗಿ ತಿಳಿದುಕೊಳ್ಳಲು ಪ್ರಯತ್ನಿಸಬೇಕು.

ಇದರಿಂದ ಅನೇಕ ತೊಂದರೆಗಳು ಉದ್ಭವಿಸುತ್ತವೆ, ಯಾಕೆಂದರೆ, ನಾವು ಕಲಿತದ್ದು ಇಂಗ್ಲೀಷ್ ಶಿಕ್ಷಣವನ್ನು. ಇಂಗ್ಲೀಷ್ ಮಾದರಿಗಳು ನಮ್ಮ ದೃಷ್ಟಿ ವಿಸ್ತಾರವನ್ನೆಲ್ಲ ಅಪಹರಿಸುವುದಲ್ಲದೆ ನಮ್ಮ ದೇಶ ಪಡೆದ ಸಿದ್ಧಿಗಳನ್ನೂ ಮಂಕುಗೊಳಿಸುತ್ತವೆ. ಬ್ರಿಟಿಷ್ ಆಡಳಿತದಿಂದ ಬಿಡುಗಡೆ ಹೊಂದಲು ಹೂಡಿದ ನಮ್ಮ ತೀಕ್ಷ್ಣ ಹೋರಾಟಗಳಲ್ಲೂ ಕೂಡ ನಾವು ಬ್ರಿಟಿಷ್ ರಾಜಕೀಯ ಮಾದರಿಯನ್ನೇ ಅನುಸರಿಸಿದ್ದರಿಂದ ಅವರ ಬಂಧನದಲ್ಲಿಯೇ ಉಳಿದೆವು.

ಇಲ್ಲಿಯೂ ನಮಗೊಂದು ತೊಂದರೆಯಿದೆ. ಬ್ರಿಟನ್ನಿನ ಸರಿಯಾದ ಜ್ಞಾನವಿಲ್ಲದೆ ಇಂಗ್ಲೀಷ್ ಶಿಕ್ಷಣವನ್ನು ಅದರ ಸರಿಯಾದ ಹಿನ್ನೆಲೆಯಲ್ಲಿ ಇಡಲಾರದಾಗಿದ್ದೇವೆ. ಅಲ್ಲಿಯ ಸಮಾಜಕ್ಕೆ ಅನ್ವಯಿಸಿ ನಾವು ಅದನ್ನು ಎಂದೂ ನೋಡಿಲ್ಲವಾದುದರಿಂದ ಅದರ ಭಾರತೀಯ ಪ್ರತಿರೂಪ, ಭಾರತೀಯ ಜೀವನದೊಡನೆ ಹೊಂದಿಕೊಳ್ಳುವ ಹಾದಿಯನ್ನು ನಾವು ಕಾಣದಾಗಿದ್ದೇವೆ. ಆದಾಗ್ಯೂ ಇದು ಅತ್ಯಂತ ಮಹತ್ವದ ಪ್ರಶ್ನೆ. ಕೆಲವೊಂದು ಇಂಗ್ಲೀಷ್ ಶಾಲೆ ಇಲ್ಲದೆ ಕಾಲೇಜುಗಳಲ್ಲಿ ಗೊತ್ತುಪಡಿಸಿದ ಪಠ್ಯಪುಸ್ತಕಗಳ ಮತ್ತು ಅಲ್ಲಿ ಪಾಲಿಸುತ್ತಿರುವ ನಿಯಮಗಳ ಮೇಲಿಂದ ಇಂಥ ಪ್ರಶ್ನೆಗಳನ್ನು ಚರ್ಚಿಸುವುದು ವೇಳೆಯ ದುರುಪಯೋಗವೇ ಸರಿ.

ಒಂದು ಸಂಘವನ್ನು ಕಟ್ಟುವುದರಿಂದ, ಒಂದು ಸಮಿತಿಯನ್ನು ನಿಯಮಿಸುವುದರಿಂದ, ಏನಾದರೂ ಸಾಧಿಸಬಹುದೆಂಬ ವಿಚಾರ ನಮ್ಮಲ್ಲಿ ಗಟ್ಟಿಯಾಗಿ ಬೇರೂರಿದಂತೆ ತೋರುತ್ತದೆ. ತಮ್ಮ ಪರವಾಗಿ ಪ್ರಾರ್ಥನಾಚಕ್ರವನ್ನು ತಿರುಗಿಸಲು ಲಾಮಾನಿಗೆ ಬಾಡಿಗೆ ಕೊಟ್ಟು ಹಚ್ಚಿ, ಅದರಿಂದ ಸ್ವರ್ಗದಲ್ಲಿ ತಮಗೆ ಪುಣ್ಯ ದೊರೆಯುವುದೆಂದು ನಂಬಿರುವ ಟಿಬೇಟಿನ ಜನರನ್ನು ನಾವು ಈ ವಿಷಯದಲ್ಲಿ ಹೋಲುತ್ತೇವೆ. ಬಹಳ ದಿವಸದ ಹಿಂದೆಯೇ ವಿಜ್ಞಾನ ಸಂಘವನ್ನು ಸ್ಥಾಪಿಸಿ, ಈಗ ನಮ್ಮ ದೇಶ ವಿಜ್ಞಾನದಲ್ಲಿ ಆಸ್ಥೆವಹಿಸುತ್ತಿಲ್ಲವೆಂದು ವರುಷವರುಷವೂ ನಾವು ಗೋಳಿಡುತ್ತಿದ್ದೇವೆ. ವಿಜ್ಞಾನ ಸಂಘವನ್ನು ಸ್ಥಾಪಿಸಿಬಿಟ್ಟರೆ, ಜನರನ್ನು ವಿಜ್ಞಾನದಲ್ಲಿ ಆಸಕ್ತಿವಹಿಸಲು ಹಚ್ಚಿದಂತಯೇ ಎಂದು ನಾವು ತಿಳಿದಿದ್ದೇವೆ. ಅದರ ಸ್ಥಾಪನೆಯಾದ

ಕೂಡಲೇ ದೇಶ ಸಾವಿರಾರು ವಿಜ್ಞಾನಿಗಳನ್ನು ತಯಾರಿಸುತ್ತದೆಯೆಂದು ಭಾವಿಸುವುದು, ಈ ಯುಗದಲ್ಲಿ ಯಂತ್ರಪೂಜೆಗೆ ನಾವು ಎಷ್ಟು ಅಂಟಿಕೊಂಡಿದ್ದೇವೆಂಬುದನ್ನು ತೋರಿಸುತ್ತದೆ.

ಜನತೆ ಆಸ್ಥೆ ವಹಿಸುವಂತೆ ಮಡುವುದು ಮುಖ್ಯ ಕೆಲಸ. ಅದಿಷ್ಟಾದರೆ, ನಮ್ಮ ಪ್ರಯತ್ನಕ್ಕೆ ಸಂಪೂರ್ಣ ಫಲ ದೊರೆಯುತ್ತದೆ. ಹಿಂದಿನ ಕಾಲದ ನಮ್ಮ ಜನ ತಾವು ಕಲಿತ ವಿದ್ಯೆಯಲ್ಲಿ ಸಂಪೂರ್ಣ ಆಸಕ್ತಿ ವಹಿಸುತ್ತಿದ್ದರಲ್ಲ,ಅದು ಹೇಗೆ? ಈ ಪ್ರಶ್ನೆಯನ್ನು ನಾವು ಸ್ವಲ್ಪ ಗಂಭೀರವಾಗಿಯೇ ವಿಚಾರಿಸಬೇಕಾಗಿದೆ. ಕೆಲವರು ವಿದೇಶೀ ವಿಶ್ವವಿದ್ಯಾಲಯದ ಕ್ಯಾಲೆಂಡರು(ದಾಖಲೆಯ ಪುಸ್ತಕ)ಗಳನ್ನು ಅವು ನಿಜಕ್ಕೂ ಸಂತೋಷದಾಯಕವಾಗಿವೆಯೆಂಬುದನ್ನು ತೋರಿಸಲಿಕ್ಕೆ ಎಷ್ಟೊಂದು ತತ್ವನಿಷ್ಠೆಯಿಂದ ಅಭ್ಯಾಸ ಮಾಡುತ್ತಾರೆಂಬುದನ್ನು ನಾನು ಬಲ್ಲೆ. ಅವರ ಸಂತೋಷವನ್ನು ಹಾಳು ಮಾಡುವ ಇಚ್ಛೆ ನನಗಿಲ್ಲ. ನಮ್ಮ ಶಾಲೆಗಳಲ್ಲಿ ಕಲಿಸ ಬೇಕಾದ ವಿಷಯಗಳ ಬಗ್ಗೆ ವಿಚಾರಿಸುವುದು ನಿಜಕ್ಕೂ ಮಹತ್ವದ್ದಾಗಿದೆ. ಆದರೆ ವಿದ್ಯಾರ್ಥಿಗಳನ್ನು ತಮ್ಮ ಕಾರ್ಯದಲ್ಲಿ ಸಂಪೂರ್ಣ ಆಸ್ಥೆವಹಿಸುವಂತೆ ಮಾಡುವ ಪ್ರಶ್ನೆಯೂ ಅಷ್ಟೇ ಮಹತ್ವದ್ದಾಗಿದೆ.

ನಮ್ಮ ಸಂಪ್ರದಾಯ ತಿಳಿಸುವಂತೆ ಪ್ರಾಚೀನ ಭಾರತದ ಗುರುಗಳು ಆಶ್ರಮಗಳಲ್ಲಿ ಇರುತ್ತಿದ್ದರು. ಅವರು ನಜವಾಗಿಯೂ ಎಂಥವರಾಗಿದ್ದರೆಂಬುವುದರ ನಿಚ್ಚಳ ಚಿತ್ರವನ್ನು ನಾವು ರೂಪಿಸಲಾರೆವು. ಆದರೆ ಇಷ್ಟು ಮಾತ್ರ ನಿಜ. ಗುರು ಕೌಟುಂಬಿಕ ವ್ಯಕ್ತಿಯಾಗಿದ್ದನು ಮತ್ತು ವಿದ್ಯಾರ್ಥಿಗಳು ಅವನೊಂದಿಗೆ ಮನೆಯವರಾಗಿಯೇ ಇರುತ್ತಿದ್ದರು. ಶಿಕ್ಷಕನೂ ಅವನ ವಿದ್ಯಾರ್ಥಿಗಳೂ ಕೂಡಿಯೇ ಇರಬೇಕೆಂಬ ವಿಚಾರ ಇಂದಿನವರೆಗೂ ನಡೆದುಬಂದಿದೆ. ಧಾರ್ಮಿಕ ಹಿಂದೂ ವಿದ್ಯೆಯನ್ನು ನೀಡುತ್ತಿರುವ ತೋಲ್ ಚತುಷ್ಪಾಠಿ (ಶಾಲೆ ಕಾಲೇಜು) ಗಳಲ್ಲಿ ಕೆಲವು ಸಲ ಈ ರೀತಿಯನ್ನು ಕಾಣುತ್ತೇವೆ.

ಈ ತೋಲ್ ಮತ್ತು ಚತುಷ್ಪಾಠಿಗಳನ್ನು ನೋಡಿದಾಗಲೂ ಪುಸ್ತಕೀಯ ಜ್ಞಾನಕ್ಕೆ ಅವು ಶಿಕ್ಷಣದಲ್ಲಿ ಮಹತ್ವದ ಸ್ಥಾನವನ್ನು ಕೊಟ್ಟಿಲ್ಲದಿರುವುದು ಕಂಡುಬರುತ್ತದೆ. ಅವರ ಸುತ್ತಮುತ್ತ ಸಂಸ್ಕೃತಿಯ ವಾತಾವರಣ ವ್ಯಾಪಿಸಿಕೊಂಡಿರುತ್ತದೆ ಮತ್ತು ಶಿಕ್ಷಕರು ತಮ್ಮ ವೃತ್ತಿಯಲ್ಲಿ ಸಂಪೂರ್ಣ ಮಗ್ನರಾಗಿರುತ್ತಾರೆ. ಮನಸ್ಸನ್ನು ಚಂಚಲಗೊಳಿಸುವ ಯಾವುದೇ ಐಷಾರಾಮವಾಗಲೀ, ಆಸೆ ಆಮಿಷಗಳಾಗಲೀ ಇಲ್ಲದೆ ಅವರು ಸರಳ ಜೀವನವನ್ನು ನಡೆಸುತ್ತಾರೆ. ತಾವು ಕಲಿತದ್ದನ್ನು ಅರಗಿಸಿಕೊಳ್ಳಲು ಅವರಿಗೆ ಸಾಕಾದಷ್ಟು ವೇಳೆ ಹಾಗೂ ಅವಕಾಶವಿರುತ್ತದೆ. ಯೂರೋಪಿನ ದೊಡ್ಡ ದೊಡ್ಡ ವಿದ್ಯಾಪೀಠಗಳಲ್ಲಿಯೂ ಈ ವಿಚಾರ ಕಂಡು ಬರುತ್ತದೆಂಬ ಸಂಗತಿಯನ್ನು ನಾನಿಲ್ಲಿ ಹೇಳಬಯಸುತ್ತೇನೆ.

ಪ್ರಾಚೀನ ಭಾರತದಲ್ಲಿ ವಿದ್ಯಾರ್ಥಿಯು ತನ್ನ ಗುರುವಿನ ಮನೆಯಲ್ಲಿಯೇ ಇದ್ದು ಬ್ರಹ್ಮಚರ್ಯ ಪಾಲಿಸುವುದು ಅಗತ್ಯವೆಂದು ಗಣಿಸಲಾಗಿದ್ದಿತು.

ಬ್ರಹ್ಮಚರ್ಯವೆಂದರೆ ಕಠಿಣವ್ರತವೆಂದು ಅರ್ಥಮಾಡಬಾರದು. ಅನೇಕ ಜನರ ಹಾಗೂ ಸಂಗತಿಗಳ ಪ್ರಭಾವದಿಂದ, ಸಮಾಜಮಧ್ಯದಲ್ಲಿ ಬೆಳೆಯುವ

ಹುಡುಗ ಚಂಚಲಗೊಳ್ಳುತ್ತಾನೆ ಮತ್ತು ಅವನ ನೈಸರ್ಗಿಕ ಬೆಳವಣಿಗೆಗೆ ಅದರಿಂದ ಆತಂಕವೊದಗುತ್ತದೆ. ಅವನ ಭಾವನೆಗಳನ್ನು ಇನ್ನೂ ರೂಪುಗೊಳ್ಳುವ ಕಾಲದಲ್ಲಿಯೇ, ಸುಳ್ಳು ಉತ್ತೇಜನೆಯಿಂದ ಉದ್ರೇಕಗೊಳಿಸಲಾಗುತ್ತದೆ. ಆಮೇಲೆ ಶಾರೀರಿಕ ಹಾಗೂ ಮಾನಸಿಕ ಶಕ್ತಿಯ ಹ್ರಾಸಕ್ಕೆ ಪ್ರಾರಂಭವಾಗುತ್ತದೆ. ಎಳೆಯತನದ ಸ್ವಭಾವವನ್ನು ಅಡ್ಡಹಾದಿ ಹಿಡಿಯುವ ಎಲ್ಲ ಶಕ್ತಿಗಳಿಂದ ಬೇರ್ಪಡಿಸಬೇಕು. ಬೆಳೆಯುತ್ತಿರುವ ಪುರುಷತ್ವವನ್ನು ಅಪಕ್ವವಾದ ಆಸೆಗಳಿಂದ ಮತ್ತು ಅದರ ಆರೋಗ್ಯಕರವಲ್ಲದ ತೃಪ್ತಿಯಿಂದ ತಿದ್ದುಪಾಟುಗೊಳಿಸಿ ಕಾಪಾಡುವುದೇ ಬ್ರಹ್ಮಚರ್ಯದ ಉದ್ದೇಶವಾಗಿದೆ.

ನಿಜವಾದ ಸಂಗತಿಯೆಂದರೆ, ಹುಡುಗರು ನಿಸರ್ಗದ ಶಿಕ್ಷಣೆಯಲ್ಲಿರಲು ಸಂತೋಷಪಡುತ್ತಾರೆ. ಪೂರ್ಣ ವಿಕಾಸಹೊಂದಲು ಮತ್ತು ಸ್ವಾತಂತ್ರ್ಯದ ನಿಜವಾದ ಆನಂದವನ್ನು ಸವಿಯಲು ಈ ನೇಮ ಅವರಿಗೆ ಸಹಾಯ ಮಾಡುತ್ತದೆ; ಅಲ್ಲದೆ, ಚಿಗುರುತ್ತಿರುವ ಅವರ ಮನಸ್ಸುಗಳ ಬಲದಿಂದ ದೇಹವನ್ನು ಕಾಂತಿಗೊಳಿಸುತ್ತದೆ.

ನಮ್ಮ ಶಾಲೆಗಳಲ್ಲಿ ಈಗ ಬ್ರಹ್ಮಚರ್ಯದ ಸ್ಥಾನವನ್ನು ನೈತಿಕ ಶಿಕ್ಷಣವು ಆಕ್ರಮಿಸಿದ್ದು ಅದನ್ನು ಯಾವುದೇ ಸಂಭಾವ್ಯ ನೆಪದಲ್ಲಾದರೂ ಕೊಡಬೇಕೆಂದು ಪಾಲಕರು ಬಯಸುತ್ತಾರೆ. ಶಕ್ತಿಗುಂದಿದವರಿಗೆ ದಿನವೂ ಸಾರ್ಸಪರಿಲಾ ಕುಡಿಯಲು ಕೊಟ್ಟಂತೆ ಇಲ್ಲವೆ ಕೂಸುಗಳನ್ನು ಬಲಿಷ್ಠಗೊಳಿಸಲು ಕೊಡುವ, ಗೊತ್ತುಪಡಿಸಿದ ಅಳತೆಯ ಆಹಾರದಂತೆ ಇದೂ ಯಾಂತ್ರಿಕವಾಗಿದೆ. ಇದರಿಂದ ಅನೇಕ ತೊಂದರೆಗಳು ಉದ್ಭವಿಸುತ್ತವೆ. ಈ ಬಗೆಯ ನೈತಿಕ ಶಿಕ್ಷಣವನ್ನು ಹುಡುಗರಿಗೆ ಆಕರ್ಷಕವಾಗುವಂತೆ ಮಾಡುವುದು ಸಾಧ್ಯವಿಲ್ಲ. ಇದು ಅವರನ್ನು ನೋಯಿಸುತ್ತದೆ; ಇಲ್ಲವೆ, ಅವರ ಬುದ್ಧಿಗೆ ಮೀರಿದ್ದಾಗಿರುತ್ತದೆ. ಮತ್ತು ನಾವು ಅಪರಾಧಿಗಳೆಂಬ ಭಾವನೆಯನ್ನು ಅವರಲ್ಲಿ ಮೂಡಿಸುತ್ತದೆ. ನೈತಿಕಶಿಕ್ಷಣದಿಂದವೇಳೆ ಹಾಗೂ ಪ್ರಯತ್ನಗಳೆರಡನ್ನೂವ್ಯರ್ಥ ಹಾಳುಮಾಡಿದಂತಾಗುತ್ತದೆಂದು ನಾನು ಭಾವಿಸಿದ್ದೇನೆ. ಒಳ್ಳೆಯ ಜನರೂ ಅದರ ಬಗ್ಗೆ ಆತುರವಾಗಿರುವುದನ್ನು ಕಂಡು ನನಗೆ ಭೀತಿಯೆನಿಸಿದೆ ಅದು ಅನನುಕೂಲವಾಗಿರುವಷ್ಟೇ ನಿರುಪಯೋಗಿಯೂ ಆಗಿದೆ. ಸಮಾಜಕ್ಕೆ ಇದಕ್ಕೂ ಹೆಚ್ಚಿನ ಹಾನಿಯುಂಟು ಮಾಡುವ ಸಂಗತಿ ಬೇರಾವುದೂ ಇರಲಾರದು.

ಇಂದಿನ ಜಗತ್ತಿನಲ್ಲಿ ನಮ್ಮ ಮಟ್ಟವು ಅಸತ್ಯ ಮತ್ತು ಅಪಾರ್ಥಗಳಿಂದ ದಿನದಿನವೂ ಕೆಳಗಿಳಿಯುತ್ತಿದೆ. ಹೀಗಿರುವಾಗ ಶಾಲೆಯಲ್ಲಿ ಹತ್ತರಿಂದ ನಾಲ್ಕು ಗಂಟೆಯವರೆಗೆ ಕಾಪಿ ಪುಸ್ತಕಗಳಲ್ಲಿಯ ಸೂಕ್ತಿಗಳನ್ನು ಗಿಳಿ ಪಾಠಮಾಡುವುದರಿಂದ ಎಲ್ಲವೂ ಸರಿಹೋಗುತ್ತದೆಂದು ಆಸೆ ಹಿಡಿಯುವುದು ಎಷ್ಟೂ ಸಲ್ಲದು. ಇಂಥ ಭಾವನೆಗಳು ಡಂಭಾಚಾರ ದುರಭಿಮಾನಗಳ ಘೋರ ಮೊಟ್ಟೆಯನ್ನೇ ಹುಟ್ಟಿಸುತ್ತವೆ ಮತ್ತು ಎಳೆಯ ಮನಸ್ಸುಗಳ ಸ್ವಾಭಾವಿಕತೆ ಹಾಗೂ ಚುರುಕುಗಳನ್ನು ನಾಶಮಾಡುತ್ತವೆ.

ಬ್ರಹ್ಮಚರ್ಯವು ಬರಿಯ ಶಿಕ್ಷಣವನ್ನಷ್ಟೇ ಅಲ್ಲದೆ ಶಕ್ತಿಯನ್ನೂ ನೀಡುತ್ತದೆ. ಅದು ನೈತಿಕತೆಯನ್ನು ಜೀವನದ ಬಾಹ್ಯಾಲಂಕಾರವೆಂದು ತಿಳಿಯದೆ ಅದರ ಮುಖ್ಯ ಘಟಕವೆಂದೇ ಭಾವಿಸುತ್ತದೆ. ಬ್ರಹ್ಮಚರ್ಯವನ್ನು ಪಾಲಿಸುವ ವ್ಯಕ್ತಿ ಧರ್ಮವನ್ನು

ಅನ್ಯ ವಿಷಯವೆಂದು ಎಂದೂ ಭಾವಿಸದೆ ಸಹಜವಾಗಿಯೇ ಗೆಳೆಯನಂತೆ ಅದಕ್ಕೆ ಅಂಟಿಕೊಳ್ಳುತ್ತಾನೆ ಮತ್ತು ತನ್ನ ಹೃದಯಕ್ಕೆ ಅದನ್ನು ಹತ್ತಿರವಾಗಿಸುತ್ತಾನೆ. ಹುಡುಗರ ಮನಸ್ಸು ಮತ್ತು ಶೀಲವನ್ನು ರೂಪಿಸುವಲ್ಲಿ ಬೇಕಾದುದು ನೈತಿಕ ಶಿಕ್ಷಣವಲ್ಲ; ಸ್ನೇಹದಿಂದ ಕೂಡಿದ ಮಾರ್ಗದರ್ಶನ ಹಾಗೂ ಹಿತವಾದ ವಾತಾವರಣ.

ಬ್ರಹ್ಮಚರ್ಯವನ್ನು ಆಚರಿಸುವುದರ ಜೊತೆಗೆ ವ್ಯಕ್ತಿ ನಿಸರ್ಗದ ಮಡಿಲಲ್ಲಿ ಜೀವಿಸಬೇಕು. ಪಟ್ಟಣಗಳು ನಮ್ಮ ಸ್ವಾಭಾವಿಕ ವಾಸಸ್ಥಳಗಳಲ್ಲ. ನಮ್ಮ ಭೌತಿಕ ಅವಶ್ಯಕತೆಗಳನ್ನು ಪೂರೈಸಲು ಅವುಗಳನ್ನು ಕಟ್ಟಲಾಗಿದೆ. ನಾವೂ ಪಟ್ಟಣಗಳಲ್ಲಿ ಹುಟ್ಟಿ ಕಲ್ಲು ಇಟ್ಟಿಗೆಗಳ ಹಾಸಿನಲ್ಲಿ ಬೆಳೆಯಬೇಕೆಂದು ದೇವರು ಎಂದೂ ಇಚ್ಛಿಸಿರಲಿಲ್ಲ. ಪಟ್ಟಣಗಳು ನಮ್ಮನ್ನು ನಿಸರ್ಗದ ಮಡಿಲಿನಿಂದ ಎಳೆದೊಯ್ದು, ತಮ್ಮ ಹಸಿವೆಯ ಹಂಚಿನಲ್ಲಿ ಬೇಯಿಸಿ ತಿಂದುಬಿಡುತ್ತವೆ. ನಗರಗಳಲ್ಲಿ ವಾಸಿಸುವ ಜನರು ತಮ್ಮ ಕೆಲಸದಲ್ಲಿಯೇ ಮುಳುಗಿ,ತಮ್ಮ ಬಾಳಿನಲ್ಲಿ ಏನನ್ನೋ ಕಳೆಲುಕೊಳ್ಳುತ್ತಿದ್ದೇವೆಂಬ ಭಾವನೆಯೂ ಅವರಿಗೆ ಬರದೆ ಹೋಗುತ್ತದೆ. ಮೊದಲೇ ನಿಸರ್ಗದಿಂದ ದೂರ ಸರಿದಿರುವುದಲ್ಲದೆ, ಅವರು ಬೃಹದ್ ವಿಶ್ವದಿಂದ ದಿನದಿನವೂ ಇನ್ನಿಷ್ಟು ಇನ್ನಿಷ್ಟು ದೂರವಾಗುತ್ತಾರೆ.

ಆದರೆ, ನಾವಿನ್ನೂ ಬೆಳೆಯುವ ದಿಸೆಯಲ್ಲಿರುವಾಗ, ಇನ್ನೂ ಕಲಿಯುತ್ತಿರುವಾಗ, ಹಾಗೂ ಜೀವನದ ನಾನಾ ಸುಳಿಗಳ ತಿರುಗಣಿ ಮಡುವಿನಲ್ಲಿ ಬೀಳುವ ಮೊದಲು, ನಿಸರ್ಗದ ಸಹಾಯ ನಮಗೆ ಅತ್ಯಗತ್ಯ. ಗಿಡಮರಗಳು, ಹಳ್ಳಹೊಳೆಗಳು, ನೀಲಾಕಾಶ ಮತ್ತು ಸುಂದರ ದೃಶ್ಯಗಳು, ಇವು ಕರಿಯಹಲಗೆ, ಬೆಂಚು, ಪುಸ್ತಕಗಳು ಮತ್ತು ಪರೀಕ್ಷೆಗಳಷ್ಟೇ ಅವಶ್ಯಕ ವಸ್ತುಗಳಾಗಿವೆ.

ಪುರಾತನ ಕಾಲದಿಂದಲೂ ಭಾರತೀಯನ ಮನಸ್ಸು ನಿಸರ್ಗದೊಡನೆ ನಿರಂತರ ಸಂಬಂಧವಿಟ್ಟುಕೊಂಡೇ ವಿಕಾಸಗೊಳ್ಳುತ್ತ ಬಂದಿದೆ. ಪ್ರಾಣಿ ಹಾಗೂ ವನಸ್ಪತಿ ಜೀವನದೊಡನೆ ಒಂದಾಗಿ ಬಾಳಬೇಕೆಂಬ ಬಯಕೆ ಭಾರತೀಯ ಚೇತನದಲ್ಲಿ ಪರಂಪರಾಗತವಾಗಿ ಬಂದಿದೆ. ಪ್ರಾಚೀನ ಭಾರತದ ವಟುಗಳು ಹೀಗೆ ಮಂತ್ರಪಠನ ಮಾಡುತ್ತಿದ್ದರು.

ಬೆಂಕಿಯಲಿ,ನೀರಿನಲಿ,ಗಿಡವನಸ್ಪತಿಗಳಲಿ
ಜಗದಲ್ಲಿ,ವಿಶ್ವದಲಿ ಅಂತಸ್ಥನೇ
ನಮಿಸುವೆವು,ಮನಿಸುವೆವು,ಓ ದೇವನೆ!

ನೆಲ, ನೀರು, ಗಾಳಿ, ಬೆಂಕಿ, ಈ ನಾಲ್ಕು ಮೂಲಭೂತಗಳು ಕೂಡಿ ಒಂದು ಇಡಿಯಾಗಿದ್ದು ಅವು ವಿಶ್ವಾತ್ಮನ ಅಂತಃಸ್ಫೂರ್ತಿಯಾಗಿವೆ. ಪಶ್ಚಿಮದಲ್ಲಿ ಕಲಿಯುವ ಹುಡುಗರಿಗೆ ಈ ಜ್ಞಾನ ದೊರೆಯಲಾರದು. ಅವರು ಕಲಿಯುವ ಶಾಲೆ ಒಂದು ಕಾರ್ಖಾನೆ; ಜಗತ್ತನ್ನು ಒಂದು ಯಂತ್ರದಂತೆ ಭಾವಿಸಲು ಮಾತ್ರ ಅದು ಕಲಿಸಬಲ್ಲದು.

* * *

ಸ್ನೇಹಿತರೆ, ಭ್ರಷ್ಟಾಚಾರವನ್ನು ಕೊನೆಗಾಣಿಸೋಣ ಬನ್ನಿ!

– ಟಿಪ್ಪುಸುಲ್ತಾನ ಜೆ.ನಾಯ್ಕವಾಡಿ

ಎಲ್ಲಿಗೆ ಬಂತು, ಯಾರಿಗೆ ಬಂತು ನಲವತ್ತೇಳರ ಸ್ವಾತಂತ್ರ್ಯ? ಭ್ರಷ್ಟ ರಾಜಕಾರಣಿಗಳ ಜೇಬಿಗೆ ಬಂತು, ಲಂಚಬಾಕರ ಹಣದ ದಾಹಕ್ಕೆ ಬಂತು ನಲವತ್ತೇಳರ ಸ್ವಾತಂತ್ರ್ಯ! ಭಾರತ ಸ್ವಾತ್ಂತ್ರ್ಯ ಪಡೆದು ೬೫ವರ್ಷಗಳು ಸಂದಿವೆ. ಹೀಗಿರುವಾಗ ಭಾರತದ ಸಾಧನೆ ಏನು ಎಂಬುದನ್ನು ಅವಲೋಕಿಸಿದಾಗ ಕೇವಲ ಭ್ರಷ್ಟಾಚಾರ, ಭಯೋತ್ಪಾದನೆಯಂತಹ ಪೆಡಂಭೂತಗಳು ನಮ್ಮ ಕಣ್ಣಿಗೆ ರಾಚುತ್ತವೆ. ಜಾಗತಿಕವಾಗಿ ತಲೆಯೆತ್ತುತ್ತಿರುವಾಗಲೇ ಭಾರತ ಇಂತಹ ದುಷ್ಟ ಶಕ್ತಿಗಳ ವ್ಯೂಹಕ್ಕೆ ಸಿಲುಕಿ ಒದ್ದಾಡುತ್ತಿರುವುದು ತುಂಬಾ ಶೋಚನೀಯ. ಭಾರತದ ಸದ್ಯದ ಪರಿಸ್ಥಿತಿಯನ್ನು ಸ್ಪಷ್ಟವಾಗಿ ನೋಡಿದಾಗ ಇಂದು ಭ್ರಷ್ಟಾಚಾರವು ಭಯೋತ್ಪಾದನೆಗಿಂತಲೂ ದೊಡ್ಡ ತಲೆನೋವಾಗಿ ಸಂಭವಿಸಿದೆಯೇನೋ ಎನಿಸುತ್ತದೆ.

ಭ್ರಷ್ಟಾಚಾರದ ಈ ಗೆದ್ದಲುಹುಳು ಭಾರತದ ಎಲ್ಲಾ ಕ್ಷೇತ್ರಗಳನ್ನೂ ಪ್ರವೇಶಿಸಿ, ಭಾರತೀಯರ ನೈತಿಕತೆಯನ್ನು ನಾಶಮಾಡಿ ಇಡೀ ವ್ಯವಸ್ಥೆಯನ್ನೇ ಪೊಳ್ಳುಮಾಡಿದೆ. ಭಯೋತ್ಪಾದಕರ ದಾಳಿಯಾದರೆ ಅದನ್ನು ಮಿಲಿಟರಿ ಪಡೆಯಿಂದ ತಡೆಗಟ್ಟಬಹುದು. ಆದರೆ ಭ್ರಷ್ಟಾಚಾರದ ಇಂತಹ ಭಯಾನಕ ದಾಳಿಯನ್ನು ತಡೆಗಟ್ಟಲು ಯಾವ ಪಡೆಯಿದೆ? ಲೋಕಾಯುಕ್ತ ಸಂಸ್ಥೆ ಇದೆ ನಿಜ. ಆದರೆ ಲೋಕಾಯುಕ್ತ ಸಂಸ್ಥೆಯೊಂದೇ ಎಷ್ಟು ತಾನೇ ಭ್ರಷ್ಟಾಚಾರವನ್ನು ತಡೆಗಟ್ಟಬಹುದು? ಭಯೋತ್ಪಾದಕರು ದಾಳಿ ಮಾಡಬೇಕಾದರೆ ನಿರ್ದಿಷ್ಟ ಗುರಿಯೊಂದನ್ನು ಇಟ್ಟುಕೊಂಡು ನಿರ್ದಿಷ್ಟ ಪ್ರದೇಶದ ಮೇಲೆ ದಾಳಿಮಾಡುತ್ತಾರೆ. ಆದರೆ ಭ್ರಷ್ಟಾಚಾರದ ವಿರಾಟ್ ಸ್ವರೂಪವೇ ಬೇರೆ. ಇದಕ್ಕೆ ನಿರ್ದಿಷ್ಟ ಗುರಿ, ನಿರ್ದಿಷ್ಟ ಸ್ಥಳವೆಂಬ ಪರಿಕಲ್ಪನೆಯೇನೂ ಇಲ್ಲ. ಇಡೀ ವ್ಯವಸ್ಥೆಯೇ ಇದರ ಗುರಿ. ಹೀಗೆ ವ್ಯಾಪಕವಾಗಿ ಹರಡಿರುವ ಭ್ರಷ್ಟಾಚಾರವೆಂಬ ಹೆಮ್ಮರದ ಬೇರುಗಳನ್ನು ನಿರ್ಮೂಲನ ಮಾಡುವುದಾದರೂ ಹೇಗೆ ಎಂಬುದೇ ನಮ್ಮ ಮುಂದಿರುವ ಯಕ್ಷಪ್ರಶ್ನೆ.ಈ ಕಾರಣದಿಂದಾಗಿಯೇ ಇಂದು ಭ್ರಷ್ಟಾಚಾರವು ಹೆಮ್ಮರವಾಗಿ ಬೆಳೆದು ನಮ್ಮನ್ನೇ ತುಳಿಯುವಷ್ಟರಮಟ್ಟಿಗೆ ತಲುಪಿದೆ.

ಭ್ರಷ್ಟಾಚಾರದ ಕಬಂಧ ಬಾಹುಗಳು ಎಷ್ಟು ವ್ಯಾಪಕವಾಗಿ ಚಾಚಿಕೊಂಡಿವೆ ಎಂದರೆ ಇಂದು ಹಲವಾರು ವೃತ್ತಿಗಳಲ್ಲಿ, ಉದ್ಯಮಗಳಲ್ಲಿ ತೊಡಗಿರುವ ಎಲ್ಲರನ್ನೂ ನಾವಿಂದು ಅನುಮಾನದಿಂದಲೇ ನೋಡುವಂತಹ ಪರಿಸ್ಥಿತಿ ಬಂದೊದಗಿದೆ. ಹಿಂದೊಮ್ಮೆ ಭ್ರಷ್ಟಾಚಾರದಿಂದ ಬಹಳಷ್ಟುಮಟ್ಟಿಗೆ ದೂರವಿದ್ದ ಹಲವಾರು ಕ್ಷೇತ್ರಗಳೂ ಕೂಡ ಇಂದು ಅದರ ತೆಕ್ಕೆಯೊಳಗೆ ಸೇರಿಕೊಳ್ಳತೊಡಗಿವೆ. ಇಂತಹ ಸಂದಿಗ್ಧ ಸ್ಥಿತಿಯಲ್ಲಿ ಭ್ರಷ್ಟಾಚಾರ ನಿರ್ಮೂಲನವೇ ಅಸಾಧ್ಯವೆಂಬ ನಕಾರಾತ್ಮಕ ಮನೋಭಾವನೆ ಎಲ್ಲ ವಲಯಗಳಲ್ಲಿ ಮೂಡಿರುವುದು ಅಸಹ್ಯಕರ. 'ಭ್ರಷ್ಟಾಚಾರ ನಿರ್ಮೂಲನೆ ಸಾಧ್ಯವಿಲ್ಲ' ಎಂದು ಅದನ್ನೊಂದು ಶಾಶ್ವತ ಸಮಸ್ಯೆ ಮಾಡಿಕೊಂಡು, ಪರೋಕ್ಷವಾಗಿ ಅದರ ಬೆಂಬಲಕ್ಕೆ ನಿಂತಿರುವ ರಣಹೇಡಿಗಳನ್ನು ಈಗಲಾದರೂ ಎಚ್ಚರಿಸಬೇಕಾದ ಅಗತ್ಯವಿದೆ. ಅಸಾಧ್ಯವಾದುದನ್ನು ಸಾಧ್ಯವಾಗಿಸುವ ಕರ್ತೃತ್ವ ಶಕ್ತಿ ಮಾನವನಲ್ಲಿದೆ. ಯಾವುದೇ ಒಂದು ಕಾರ್ಯ ಸಾಧನೆಗೂ

ಮುಂಚೆ ನಾವು ಅದರ ಬಗ್ಗೆ ಹೊಂದಿರುವ ಮನೋಭಾವ ಮುಖ್ಯ.

"ಯಾವುದೇ ವಾಸ್ತವತೆಗಿಂತ, ನಾವು ಅದರ ಬಗ್ಗೆ ಹೊಂದಿರುವ ಮನೋಭಾವ ಮುಖ್ಯವಾಗಿದೆ. ಏಕೆಂದರೆ ಅದೇ ನಮ್ಮ ಸಫಲತೆ ಅಥವಾ ವಿಫಲತೆಯನ್ನು ನಿರ್ಣಯಿಸುತ್ತದೆ."ನಾರ್ಮನ್ ವಿನ್ಸೆಂಟ್ ಪೀಲೆ ಹೇಳಿರುವ ಈ ಅದ್ಭುತವಾದ ಸಾಲುಗಳು ಭ್ರಷ್ಟಾಚಾರದ ಬಗ್ಗೆ ನಿರ್ಲಕ್ಷ್ಯ ತಾಳಿರುವ ದುಷ್ಟರ ಮನಸ್ಸನ್ನು ನಿದ್ರಾವಸ್ಥೆಯಿಂದ ಹೊರತರಬೇಕಾಗಿದೆ ಎಂಬುದನ್ನು ಸೂಚಿಸುತ್ತದೆ. ಕಬ್ಬಿಣದ ಮಾಂಸಖಂಡ,ಉಕ್ಕಿನ ನರಮಂಡಲ,ವಿದ್ಯುತ್ತಿನ ಇಚ್ಛಾಶಕ್ತಿಯನ್ನು ಹೊಂದಿರುವ ಬಿಸಿರಕ್ತದ ತರುಣ ಪಡೆ ದೇಶದ ಅರ್ಧದಷ್ಟಿರುವಾಗ ಈ ಪೆಡಂಭೂತವನ್ನು ನಾಶಮಾಡಲಾಗುತ್ತಿಲ್ಲವೇಕೆ ಎಂಬ ಪ್ರಶ್ನೆಗಳು ನಮ್ಮನ್ನು ಕಾಡುತ್ತಿವೆಯೇ ಹೊರತು, ಅವು ನಮ್ಮನ್ನು ಕಾರ್ಯಪ್ರವೃತ್ತರನ್ನಾಗಿ ಮಾಡಲು ಬಿಡುತ್ತಿಲ್ಲ.ಹಲವಾರು ಅಭೂತಪೂರ್ವ ಪ್ರಕರಣಗಳು ದೇಶವನ್ನು ಕಾಡುತ್ತಿರುವಾಗ ಜನರು ತಾಳ್ಮೆಗೆಡುತ್ತಿದ್ದಾರೆ. "ಚುನಾವಣೆಗಳೇ ನಮ್ಮ ದೇಶದ ಉದ್ದಗಲಕ್ಕೂ ಇಂಚು-ಇಂಚನ್ನು ಬಿಡದೇ ಸರ್ವವ್ಯಾಪಕವಾಗಿ ಹರಡಿರುವ ಭ್ರಷ್ಟಾಚಾರದ ದೊಡ್ಡ ಬೇರುಗಳು" ಎಂದು ಮಾಜಿ ಮುಖ್ಯ ಚುನಾವಣಾ ಆಯುಕ್ತ ಎಸ್.ವೈ.ಖುರೇಶಿಯವರು ಆತಂಕ ವ್ಯಕ್ತಪಡಿಸಿದ್ದಾರೆ. ಅದರಂತೆ, ಇಂದು ನಡೆಯುತ್ತಿರುವುದು ಚುನಾವಣೆಗಳಲ್ಲ, ಅವು ಕೇವಲ ಹಣಬಲದ ಸ್ಪರ್ಧೆಗಳು ಎಂಬುದು ಸ್ಪಷ್ಟವಾಗುತ್ತಿದೆ.

ಕೆಲವರ್ಷಗಳ ಹಿಂದೆ, ಐದು ರಾಜ್ಯಗಳಲ್ಲಿ ಚುನಾವಣೆಗಳು ನಡೆದವು. ಆ ಸಂದರ್ಭದಲ್ಲಿ ತಮಿಳುನಾಡು ಒಂದರಲ್ಲಿಯೇ ದಿನಂಪ್ರತಿ ಒಂದು ಕೋಟಿ ರೂಪಾಯಿಯನ್ನು ವಶಪಡಿಸಿಕೊಳ್ಳಲಾಗುತ್ತಿತ್ತು ಎಂದು ಮೂಲಗಳು ತಿಳಿಸಿವೆ. ಇಂತಹ ಹಣದ ಹೊಳೆಗೆ ಭ್ರಷ್ಟಾಚಾರದ ವಿರಾಡ್ರೂಪವೆನ್ನದೇ ಮತ್ತೇನೆನ್ನಬೇಕು! ಇಂದು ವ್ಯಕ್ತಿಯ ಜೀವನ ಕೇವಲ ಸ್ವಾರ್ಥಕ್ಕೆ ಸೀಮಿತವಾಗಿ ಬಿಟ್ಟಿದೆ.ಪ್ರತಿಯೊಂದು ಕಾರ್ಯದ ಹಿಂದೆಯೂ ಕೇವಲ ಸ್ವಾರ್ಥವೇ ಪ್ರಮುಖವಾಗಿದೆ. ಅನೈತಿಕತೆ, ಅರಾಜಕತೆ ಮತ್ತು ಸ್ವಾರ್ಥ ಭಾವನೆಗಳು ಸಮಾಜದಲ್ಲಿ ತಾಂಡವವಾಡುತ್ತಿರುವಾಗ, ಇಡೀ ಸಮಾಜವೇ ಭ್ರಷ್ಟತೆಯಲ್ಲಿ ಮುಳುಗಿಹೋಗಿದೆಯೇನೋ ಎಂದು ಭಾಸವಾಗುತ್ತದೆ. ನಾವೆಲ್ಲರೂ ಕೇವಲ ಘೋಷಣೆಗಳಿಗೆ, ವಾದಗಳಿಗೆ ಬೆಂಬಲ ನೀಡುತ್ತಿದ್ದೇವೆಯೇ ಹೊರತು ಭ್ರಷ್ಟಾಚಾರ ನಿರ್ಮೂಲನೆಗಲ್ಲ ಎಂಬುದು ವೇದ್ಯವಾಗುತ್ತದೆ. ತಮ್ಮ ಕಳ್ಳ ಸಂಪತ್ತನ್ನು ಕತ್ತಲ ಟ್ರೆಜರಿಗಳಲ್ಲಿ ಬಚ್ಚಿಟ್ಟು ಮೇಲ್ನೋಟಕ್ಕೆ ಪ್ರಾಮಾಣಿಕತೆಯ ನಾಟಕವಾಡುತ್ತಿರುವ ಭ್ರಷ್ಟ ಪುಡಾರಿಗಳಿಗೆ ತಕ್ಕ ಶಾಸ್ತಿ ಮಾಡಬೇಕಾಗಿದೆ.

ಭ್ರಷ್ಟಾಚಾರ ನಿರ್ಮೂಲನೆ ನಮ್ಮಿಂದಲೇ ಪ್ರಾರಂಭವಾಗಬೇಕು. ಭ್ರಷ್ಟಾಚಾರವು ಭಾರತಕ್ಕೆ ಅಂಟಿರುವ ಭಯಾನಕ ರೋಗದಂತೆ, ಬೆನ್ನುಹತ್ತಿದ ಬೇತಾಳದಂತೆ ಜೋತುಬಿದ್ದು ಕಾಡುತ್ತಿದೆ. ಒಂದು ವೇಳೆ ಭಾರತ ಇಂತಹ ಭಯಂಕರ ರೋಗದಿಂದ ಪಾರಾಗಿದ್ದೇ ಆಗಿದ್ದಲ್ಲಿ, ಒಂದಾನೊಂದು ಕಾಲದಲ್ಲಿ 'ಸೋನೆ ಕೀ ಚಿಡಿಯಾ' ('ಚಿನ್ನದ ಹಕ್ಕಿ') ಎಂದು ಕರೆಯಲ್ಪಡುತ್ತಿದ್ದ ಭಾರತ ಮತ್ತೆ ತನ್ನ ಗತ ವೈಭವವನ್ನು ಪಡೆಯುವುದರಲ್ಲಿ ಅನುಮಾನವೇ ಇಲ್ಲ. ಆದರರೆ ಈ ರೀತಿ ಆಗಬಹುದೇ? ನೀವು ಈ ರೀತಿ ಮಾಡಬಲ್ಲಿರ? ನೇರವಾಗಿ ನಾನು ನಿಮ್ಮನ್ನೇ ಪ್ರಶ್ನಿಸುತ್ತಿದ್ದೇನೆ. ಏಕೆಂದರೆ ಕೇವಲ ಕ್ರಾಂತಿಯ ಘೋಷಣೆಗಳನ್ನು ಕೂಗಿದರೆ, ಉಪವಾಸ ಮಾಡಿ ಸರ್ಕಾರವನ್ನು ಬಗ್ಗಿಸಿದರೆ, ಭ್ರಷ್ಟಾಚಾರದ ವಿರುದ್ಧದ ಈ ಯುದ್ಧವನ್ನು ನಾವು ಗೆಲ್ಲಲು ಸಾಧ್ಯವಿಲ್ಲ. ಈ ಯುದ್ಧದಲ್ಲಿ ವಿಜಯಗಳಿಸಬೇಕಾದರೆ ಮೊದಲು ನಾವು ಬದಲಾಗಬೇಕು. 'ನೀನು ಬದಲಾಗುವ ತನಕ ವ್ಯವಸ್ಥೆಯನ್ನು ಬದಲಾಯಿಸಲು ಸಾಧ್ಯವಿಲ್ಲ.' (Unless you change you can't change tha system) ಎಂದು ದೊಡ್ಡವರು ಹೇಳುತ್ತಾರೆ.

ಅಂಕಿ ಅಂಶಗಳ ಪ್ರಕಾರ ೨೦೦೯ರಲ್ಲಿ ಭಾರತದಲ್ಲಿ ತನ್ನ ಕೆಲಸ ಕಾರ್ಯಗಳನ್ನು ಮಾಡಿಸಿಕೊಳ್ಳಲು ೫೪%ರಷ್ಟು ಭಾರತೀಯರು ಲಂಚವನ್ನು ನೀಡಿದ್ದಾರೆ. ಜಗತ್ತಿನ ೧೭೮ ರಾಷ್ಟ್ರಗಳಲ್ಲಿ ಭ್ರಷ್ಟಾಚಾರದ ವಿಷಯದಲ್ಲಿ ನಾವು ೪ನೇ ಸ್ಥಾನದಲ್ಲಿದ್ದೇವೆ. ೧೯೯೨ರಿಂದ ೨೦೧೧ರವರೆಗೆ, ಅಂದರೆ ೧೯ ವರ್ಷಗಳ ಕಾಲಾವಧಿಯಲ್ಲಿ ೭೩ ಲಕ್ಷ ಕೋಟಿ ರೂಪಾಯಿಗಳಷ್ಟು ಭಾರೀ ಮೊತ್ತವುಅಭೂತಪೂರ್ವ ಹಗರಣಗಳು ಮತ್ತು ಲಂಚಾವತಾರಕ್ಕೆ ಬಲಿಯಾಗಿದೆ. ಒಂದು ಅಂದಾಜಿನ ಪ್ರಕಾರ ಇಷ್ಟು ದೊಡ್ಡ ಪ್ರಮಾಣದ ಹಣದಿಂದ ೨,೪೦,೦೦,೦೦೦ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಬಹುದಿತ್ತು! ೧೪,೫೦,೦೦,೦೦೦ ಕಡಿಮೆ ಬಜೆಟ್ಟಿನ ಮನೆಗಳು ನಿರ್ಮಾಣವಾಗುತ್ತಿದ್ದವು! ಪ್ರತಿಯೊಬ್ಬ ಭಾರತೀಯನಿಗೆ ೫೬,೦೦೦ ರೂಪಾಯಿ ಹಾಗೂ ಬಡತನ ರೇಖೆಗಿಂತ ಕೆಳಗಿರುವ ಪ್ರತಿಯೊಬ್ಬನಿಗೂ ೧,೮೨,೦೦೦ ರೂಪಾಯಿ ದೊರಕುತ್ತಿತ್ತು! ಅಂದರೇ ಇಡೀ ದೇಶದ ಚಿತ್ರಣವೇ ಬದಲಾಗುತ್ತಿತ್ತಲ್ಲವೇ!

ಭಾರತವನ್ನು ಒಂದು ಬಡ ರಾಷ್ಟ್ರವೆಂದು ಕರೆಯುತ್ತೇವೆ. ವಿಪರ್ಯಾಸವೆಂದರೆ ಜಗತ್ತಿನ ಅತಿ ಹೆಚ್ಚಿನ ಶ್ರೀಮಂತರು ಇಲ್ಲಿಯೇ ವಾಸವಾಗಿದ್ದಾರೆ. ಇಲ್ಲದಿದ್ದರೆ ಸ್ವಿಸ್ ಬ್ಯಾಂಕಿನಲ್ಲಿ ಭಾರತದ ಅತಿ ದೊಡ್ಡ ಮೊತ್ತದ ಹಣ ಜಮೆಯಾಗುತ್ತಿರಲಿಲ್ಲ. ಅಂಕಿ-ಅಂಶಗಳ ಪ್ರಕಾರ ಸ್ವಿಸ್ ಬ್ಯಾಂಕಿನಲ್ಲಿ ಭಾರತೀಯರ ಒಟ್ಟು ೬೫,೨೨೩ ಶತಕೋಟಿ ರೂಪಾಯಿಗಳು ಜಮಾ ಆಗಿದೆ. ಅದು ನಮ್ಮ ಜಿ.ಡಿ.ಪಿ.ಯ ೬ಪಟ್ಟು ಹೆಚ್ಚಾಗಿದೆಯಂತೆ. ಭಾರತ ತನ್ನ ಪ್ರಜೆಗಳ ಹೊಟ್ಟೆ ತುಂಬಿಸಲು ಮತ್ತು ದೇಶ ಮುನ್ನಡೆಸಲು ೩ ಲಕ್ಷ ಕೋಟಿ ಸಾಲ ತೆಗೆದುಕೊಳ್ಳಬೇಕಾಗುತ್ತದೆ. ಹೀಗಾಗಿ ಪ್ರತಿಯೊಬ್ಬ ವ್ಯಕ್ತಿಯ ಮೇಲಿರುವ ಸಾಲದ ಹೊರೆ ಹೆಚ್ಚಾಗುತ್ತಲೇ ಇದೆ. ಒಂದು ವೇಳೆ ಸ್ವಿಸ್ ಬ್ಯಾಂಕಿನಲ್ಲಿರುವ ಭಾರತೀಯರ ಒಟ್ಟಾರೆ ಕಪ್ಪು ಹಣದಲ್ಲಿ ಶೇ.೩೦ ರಿಂದ ಶೇ.೪೦ರಷ್ಟು ಹಣವನ್ನು ಭಾರತಕ್ಕೆ ತಂದರೆ ನಾವು ಸಾಲಕ್ಕಾಗಿ ವಿಶ್ವಬ್ಯಾಂಕ್ ಮತ್ತು ಐ.ಎಮ್.ಎಫ್ ಮುಂದೆ ಕೈಚಾಚುವ ಅಗತ್ಯವೇ ಬೀಳುವುದಿಲ್ಲ.

ಸರಕಾರ ಎಲ್ಲಾ ಗ್ರಾಮಗಳಿಗೆ ರಸ್ತೆ ಸಂಪರ್ಕ ಕಲ್ಪಿಸುವ ಉದ್ದೇಶ ಹೊಂದಿದೆ. ಇದಕ್ಕೆ ೪೦ ಲಕ್ಷ ಕೋಟಿ ರೂಪಾಯಿಗಳ ಅಗತ್ಯವಿದೆ. ಒಂದು ವೇಳೆ ಸ್ವಿಸ್ ಬ್ಯಾಂಕಿನಲ್ಲಿರುವ ಕಪ್ಪುಹಣವನ್ನು ಭಾರತಕ್ಕೆ ವಾಪಸ್ ತಂದರೆ ಪ್ರತಿ ಗ್ರಾಮಕ್ಕೂ ನಾಲ್ಕು ಲೇನ್ ರಸ್ತೆ ಕಲ್ಪಿಸಬಹುದು. ಇಲ್ಲದಿದ್ದರೆ ಕನಿಷ್ಠಪಕ್ಷ ಆ ಕಪ್ಪು ಹಣದ ಒಟ್ಟು ಮೊತ್ತದಲ್ಲಿ ಅರ್ಧದಷ್ಟಾದರೂ ಭಾರತ ತಲುಪಿದರೆ ಅದರಿಂದ ದೇಶದಲ್ಲಿ ೩೦ ಕೋಟಿ ಹೊಸ ಉದ್ಯೋಗಗಳನ್ನು ಸೃಷ್ಟಿಸಬಹುದು. ಪ್ರತಿಯೊಬ್ಬ ಭಾರತೀಯನಿಗೂ ಉಚಿತವಾಗಿ ೨,೦೦೦ ರೂಪಾಯಿ ಕೊಡಬಹುದು. ಅಲ್ಲದೇ ಈ ರೀತಿ ೩೦ ವರ್ಷಗಳ ತನಕ ಮುಂದುವರಿಸಬಹುದು. ಅಂದರೆ ದೇಶದಲ್ಲಿ ಬಡತನವೇ ಇಲ್ಲದಂತಾಗುತ್ತದೆ.

ಇಷ್ಟೆಲ್ಲಾ ಆಗಲು ಖಂಡಿತ ಸಾಧ್ಯವಿದೆ. ಅದಕ್ಕೆಲ್ಲ ಭಾರತದ ಸಮಸ್ತ ಜನತೆಯ ಕೆಚ್ಚೆದೆಯ ಹೋರಾಟದ ಬೆಂಬಲ ಅವಶ್ಯವಾಗಿದೆ. ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಒಬ್ಬ ಭಗತ್‌ಸಿಂಗ್ ನಂತಹ ಕ್ರಾಂತಿಕಾರಿ ಮನಸ್ಸು, ಗಾಂಧೀಜಿಯಂತಹ ಅಹಿಂಸಾವಾದಿ ಮನಸ್ಸು ಇದೆ ಎಂಬುದನ್ನು ನಾವೆಲ್ಲರೂ ಇವತ್ತು ಮರೆತಂತೆ ಕಾಣುತ್ತಿದೆ. ಅಂಥ ಮನಸ್ಸುಗಳನ್ನು ಎಚ್ಚರಗೊಳಿಸಿ ದೇಶದ ಉದ್ಧಾರಕ್ಕೆ ಅಣಿಗೊಳಿಸುವ ಕಾಲ ಈಗ ಸನ್ನಿಹಿತವಾಗಿದೆ. ಬನ್ನಿ ಸ್ನೇಹಿತರೇ ಬನ್ನಿ, ಭ್ರಷ್ಟಾಚಾರರಹಿತ ರಾಷ್ಟ್ರ ನಿರ್ಮಾಣಕ್ಕೆ ನಾವೆಲ್ಲರೂ ಒಗ್ಗಟ್ಟಾಗೋಣ, ಬನ್ನಿ.

(ಸಾಭಾರ : ವಿವೇಕಪ್ರಭ)

* * *

ಆದರ್ಶದ ಹುಚ್ಚನೇರಿದ ಹುಚ್ಚೇಗೌಡ

- ಜಿ.ಎಸ್.ಜಯದೇವ

ನಾನು ೧೯೭೭ರಲ್ಲಿ ಚಾಮರಾಜನಗರಕ್ಕೆ ಬಂದಾಗ ಇಲ್ಲಿ ಎಲ್ಲರೂ ಅಪರಿಚಿತರೆ. ಇಲ್ಲಿಗೆ ನಾನೊಬ್ಬ ಆಗಂತುಕ. ಇಲ್ಲಿಗೆ ಸೇರಿದವನಲ್ಲವೇನೋ ಎನ್ನುವ ಯಾವುದೋ ವಿಷಾದದ ಭಾವನೆ ನನ್ನ ಮನಸ್ಸನ್ನು ಹೊಕ್ಕು ಕಾಡುತ್ತಿತ್ತು. ನನ್ನ ಮಾತು-ಕತೆ, ರೀತಿ-ನೀತಿಗಳನ್ನು ಎಲ್ಲರೂ ಆಶ್ಚರ್ಯಚಕಿತರಾಗಿ, ಜೊತೆಗೆ ಅಯ್ಯೊ ಪಾಪ! ತಿಳುವಳಿಕೆ ಇಲ್ಲದ ಚಿಕ್ಕ ಹುಡುಗ ಎನ್ನುವ ಅನುಕಂಪ ಬೀರಿ ಸ್ವಾಗತಿಸುತ್ತಿದ್ದುದನ್ನು ಕಂಡು ನನಗೆ ಸ್ವಲ್ಪ ಭಯವೇ ಆಯಿತು. ಆ ದಿನಗಳಲ್ಲೇ ನನಗೆ ಪರಿಚಯವಾದವರು ಹುಚ್ಚೇಗೌಡರು.

ಒಂದು ಬಿಳಿ ಉಲ್ಲನ್ ಟೋಪಿ, ಬಿಳಿ ಪಂಚೆ, ಬಿಳಿ ಶರ್ಟ್ ಸದಾ ಸೈಕಲ್ ಸವಾರಿ. ಹೀಗೆ ಹುಚ್ಚೇಗೌಡರನ್ನು ನೋಡಿದಾಗ ಇವರು ಈ ಊರಿನವರೇ ಆದರೂ ಬೇರೆಯಾಗಿ ಬೆಳೆದಿದ್ದಾರೆ ಎನ್ನಿಸಿತು. ಏಕೆ ಹಾಗೆನ್ನಿಸಿತೊ ನನಗೆ ಗೊತ್ತಿಲ್ಲ. ಕುತೂಹಲದಿಂದ ಒಂದೆರಡು ಬಾರಿ ಮಾತನಾಡಲು ಪ್ರಯತ್ನಿಸಿದೆ. ಆದರೆ ಒಂದೆರಡು ಮಾತನಾಡುವಷ್ಟರಲ್ಲೇ ವೇಗವಾಗಿ ಸೈಕಲ್ ತುಳಿಯುತ್ತ ಹೊರಟುಹೋಗುತ್ತಿದ್ದರು. ಬೆಳಗಿನಿಂದ ಸಂಜೆಯವರೆಗೆ ದುಡಿಯುತ್ತಿದ್ದರೂ ಅವರಿಗೆ ಸಮಯವೇ ಇರುತ್ತಿರಲಿಲ್ಲ. ನನ್ನ ಅವರ ನಡುವೆ ಒಂದು ಸಮಾನ ಅಭಿರುಚಿ ಇತ್ತು. ಅದು ಪುಸ್ತಕ ಪ್ರೀತಿ, ಓದುವ ಹವ್ಯಾಸ, ನನ್ನ ಪುಸ್ತಕ ಪ್ರೀತಿಯನ್ನು ಅರಿತದ್ದೇ ತಡ, ನನ್ನೊಡನೆ ಬಹಳವಾಗಿ ಮಾತನಾಡತೊಡಗಿದರು. ನನಗೋ ಅವರ ಲೈಬ್ರರಿ ಮೇಲೆ ಕಣ್ಣು. ಅವರಿಗೆ ತಮ್ಮ ಪುಸ್ತಕಗಳ ಮೇಲೆ ಬಹಳ ಅಭಿಮಾನ. ಸುಲಭವಾಗಿ, ಪುಸ್ತಕಗಳನ್ನು ಎರವಲು ಕೊಡಲು ಒಪ್ಪುತ್ತಿರಲಿಲ್ಲ. ಕೊನೆಗೆ ನಾನೇ ಗೆದ್ದುಬಿಟ್ಟೆ. ಅವರ ಗ್ರಂಥಾಲಯ ನನ್ನದೇ ಎನ್ನುವಷ್ಟರ ಮಟ್ಟಿಗೆ ಸಲುಗೆ ಬೆಳೆಯಿತು. ನಂತರ ಏನೋ ಕಾರಣಕ್ಕೆ ಹುಚ್ಚೇಗೌಡರು ಮತ್ತು ನಾನು ಒಂದೇ ಮನೆಯಲ್ಲಿ ವಾಸಿಸತೊಡಗಿದೆವು. ಅವರ ಆಧ್ಯಾತ್ಮ ಅಭಿರುಚಿ, ನನ್ನ ಆಧ್ಯಾತ್ಮದಲ್ಲಿನ ಪ್ರೀತಿ ಇದಕ್ಕೆ ಬಹಳ ಮಟ್ಟಿಗೆ ಕಾರಣವಾಗಿತ್ತು.

ಇವರಿಗೆ ಹುಚ್ಚೇಗೌಡ ಎಂಬ ಹೆಸರು ಏಕೆ ಬಂತು ಎಂಬುದರ ಬಗ್ಗೆ ನನಗೆ ಕುತೂಹಲ. ನಾನು ಅವರನ್ನು ಕೇಳಿದೆ. ಅವರು ತಮ್ಮ ಹುಟ್ಟಿನ ಬಗ್ಗೆ ಒಂದು ವಿಶೇಷ ಹೇಳಿದರು. ಹುಟ್ಟಿದಾಗ ಬಡಕಲಾಗಿದ್ದ ಈ ಮಗು ಬದುಕುವುದಿಲ್ಲ ಎಂಬ ಆತಂಕ ಕಾಡಿತ್ತು. ಹುಚ್ಚೇಗೌಡ ಎಂದು ನಾಮಕರಣ ಮಾಡಿದರೆ ಈ ಮಗು ಬದುಕುತ್ತದೆ ಎಂಬ ನಂಬಿಕೆ ಇದ್ದ ಕಾಲ ಅದು. ಹಾಗಾಗಿ ಹೆತ್ತವರು ಹುಚ್ಚೇಗೌಡ ಎಂದು ಹೆಸರಿಟ್ಟರು. ಹುಚ್ಚೇಗೌಡರಿಗೆ ಇರುವ ಹುಚ್ಚು ಎಲ್ಲರಿಗೂ ಬರಲು ಸಾಧ್ಯವಿಲ್ಲ. ಸ್ವಾರ್ಥಮಯ ಪ್ರಪಂಚದಲ್ಲಿ ಎಲ್ಲರಿಗೂ ಒಳ್ಳೆಯದನ್ನು ಮಾಡಬೇಕೆಂಬ ಹುಚ್ಚು ಎಲ್ಲೊ ಕೆಲವರಿಗೆ ಮಾತ್ರ ಬರುತ್ತದೆ. ಇಂತಹ ಹುಚ್ಚು ಬರಲು ಜನ್ಮಾಂತರಗಳ ಸಂಸ್ಕಾರ ಇರಬೇಕು. ಹಾಗಾಗಿ ಈ ಅಸಾಧಾರಣ ಹುಚ್ಚು ಇವರ ಬಾಲ್ಯದ ದಿನಗಳಲ್ಲಿ, ಬಡತನದ ದಿನಗಳಲ್ಲಿ ಪ್ರಬುದ್ಧತೆಯನ್ನು ಪಡೆದ ಮೇಲೂ ಸಹ ಹಾಗೆಯೇ ಉಳಿದುಕೊಂಡಿದೆ. ಇಂದಿಗೂ ಹುಚ್ಚೇಗೌಡರು ಮತ್ತೊಬ್ಬರಿಗೆ ನನ್ನಿಂದ ಏನು ಸಹಾಯ ಆದೀತು ಎಂಬುದನ್ನೇ ಎದುರು ನೋಡುತ್ತಿರುತ್ತಾರೆ.

ಇವರ ಈ ಪರೋಪಕಾರ ಸ್ವಭಾವದಿಂದಾಗಿ ಅನೇಕ ವೇಳೆ ಕಷ್ಟ

ಅನುಭವಿಸಿರುವುದೂ ಉಂಟು. ಬಹುಶಃ ಇವರಿಗೆ ಮೋಸ ಮಾಡಿದವರ ಪಟ್ಟಿಯನ್ನು ಬರೆದರೆ ಅದು ಬಹಳ ದೊಡ್ಡದೇ ಆಗುತ್ತದೆ. ಹಾಗೆಂದು ಇವರೆಂದೂ ತಮ್ಮ ಸಹಾಯ ಹಸ್ತವನ್ನು ಹಿಂದೆಗೆದುಕೊಳ್ಳಲಿಲ್ಲ. ಹಾಗಾಗಿ ಇವರ ಸಭ್ಯತೆಯ, ಸಹಾನುಭೂತಿಯ, ಸುಸಂಸ್ಕೃತ ಸ್ವಭಾವವನ್ನು ನಾನು ಇವರ ಒಡನಾಟದಲ್ಲೇ ಇದ್ದುದರಿಂದ ಇವರ ಔದಾರ್ಯವನ್ನು ಬಹಳವಾಗಿಯೇ ಬಳಸಿಕೊಂಡಿದ್ದೇನೆ.

ನನ್ನ ಮತ್ತು ಡಾ॥ ಸುದರ್ಶನ್ ರವರ ಸಾಮಾಜಿಕ ಚಟುವಟಿಕೆ ಪ್ರಾರಂಭವಾದ ಮೇಲೆ ಹುಚ್ಚೇಗೌಡರು ನಮ್ಮೊಡನೆ ಸೇರಿಬಿಟ್ಟರು. ಅಲ್ಲಿಯವರೆಗೆ ಮನೆಕಟ್ಟುವ ಕೆಲಸ ಎಡಬಿಡದೆ ಮಾಡಿಕೊಂಡು ಬಂದಿದ್ದರು. ಅವರಿಗೆ ಅನ್ನಿಸಿರಬೇಕು. ಈ ಕೆಲಸ ಮಾಡಲು ಬೇಕಾದಷ್ಟು ಜನರು ಇದ್ದಾರೆ. ಇನ್ನು ಮುಂದೆ ಮನ–ಮಂದಿರಗಳನ್ನು ಕಟ್ಟೋಣ ಎಂದು. ಹಾಗಾಗಿ ಅವರ ಕಂಟ್ರಾಕ್ಟ್ ಕೆಲಸವನ್ನು ಸಂಪೂರ್ಣವಾಗಿಯೇ ಕೈಬಿಟ್ಟರು. ಬಿಳಿಗಿರಿರಂಗನ ಬೆಟ್ಟದಲ್ಲಿ ನಾನು, ಸೋಮಸುಂದರಂ ಮತ್ತು ಹುಚ್ಚೇಗೌಡರು ಜೊತೆಯಾಗಿಯೇ ಕಾಲ ಕಳೆಯುತ್ತಿದ್ದೆವು. ಹುಚ್ಚೇಗೌಡರು ಆಗಾಗ ಹಾರಿಸುತ್ತಿದ್ದ ನಗೆ ಚಟಾಕಿಗಳಂತೂ ನಮಗೆಲ್ಲ ಪ್ರಿಯವಾಗಿದ್ದವು. ಹಾಗಾಗಿ ಹುಚ್ಚೇಗೌಡರು ನಮ್ಮ ಜೊತೆ ಇದ್ದಾರೆಂದರೆ ನಗುವಿಗೆ ಬರವಿಲ್ಲ ಎಂದೇ ಲೆಕ್ಕ.

ಸೋಲಿಗರೊಡನೆ ಕೆಲಸ ಮಾಡುವಾಗ ಅನೇಕ ಕಠಿಣ ಸನ್ನಿವೇಶಗಳು ಎದುರಾಗುತ್ತಿದ್ದವು. ಆಗ ನಾವ್ಯಾರೂ ನಿರಾಶರಾಗದಂತೆ ಹುಚ್ಚೇಗೌಡರು ಪ್ರೋತ್ಸಾಹಿಸುತ್ತಿದ್ದರು. ತಾವೇ ದೃಢ ನಿರ್ಧಾರಗಳನ್ನು ತೆಗೆದುಕೊಂಡು ಹೆಗಲುಕೊಡುತ್ತಿದ್ದರು. ಇಂತಹ ಅನೇಕ ಪ್ರಸಂಗಗಳು ನಮ್ಮ ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರದ ಚರಿತ್ರೆಯಲ್ಲಿ ದಾಖಲಾಗಬೇಕಾಗಿತ್ತು. ಆದರೆ ಹಾಗೆ ಆಗದಿರುವುದು ದುರದೃಷ್ಟ.

ಹುಚ್ಚೇಗೌಡರಲ್ಲಿ ಎದ್ದು ಕಾಣುವ ಮತ್ತೊಂದು ಅಂಶವೆಂದರೆ ಅವರ ಮೌಲ್ಯ ಪ್ರೀತಿ. ಅವರ ಇಡೀ ಜೀವನ ಆದರ್ಶ ಪ್ರಿಯತೆಯನ್ನು ಎತ್ತಿ ಹಿಡಿದು ತೋರಿಸುತ್ತದೆ. ಅವರು ಸತ್ಯನಿಷ್ಠೆ, ಸಾಮಾಜಿಕ ನ್ಯಾಯದ ನಿಲುವು ಮತ್ತು ಅಹಿಂಸಾ ತತ್ವವನ್ನು ಯಾವ ಸಂದರ್ಭದಲ್ಲೂ ಕೈ ಬಿಡಲಿಲ್ಲ. ಗಾಂಧೀಜಿಯವರ ಜೀವನ ಅವರ ಮೇಲೆ ಗಾಢ ಪ್ರಭಾವ ಬೀರಿದೆ. ಹಾಗಾಗಿ ಅವರು ಸದಾ ಗಾಂಧೀಜಿಯ ಜೀವನದ ಘಟನೆಗಳನ್ನು ಹೇಳುತ್ತಾ ನಮ್ಮನ್ನೆಲ್ಲಾ ಹುರಿದುಂಬಿಸುತ್ತಿದ್ದರು. ಯಾವದೇ ಒಂದು ಕ್ಲಿಷ್ಟ ಸಂದರ್ಭದಲ್ಲಿ ನಿರ್ಧಾರ ತೆಗೆದುಕೊಳ್ಳುವುದು ಕಷ್ಟವಾದಾಗ ಗಾಂಧೀಜಿಯ ಜೀವನ ಪ್ರಸಂಗವನ್ನು ಉದಾಹರಿಸಿ ದುರ್ಬಲವಾದ ನಮ್ಮ ಮನಸ್ಸಿಗೆ ಶಕ್ತಿ ತುಂಬುತ್ತಿದ್ದರು.

ಕೆಲವು ವಿಷಯಗಳಲ್ಲಿ ಹುಚ್ಚೇಗೌಡರ ಕಟ್ಟು ನಿಟ್ಟು ನಮಗೆ ಸರಿ ಕಾಣುತ್ತಿರಲಿಲ್ಲ. ಗೌಡರು ರಾತ್ರಿ ಅನ್ನ ಊಟ ಮಾಡುವುದಿಲ್ಲ ಎಂಬ ಪ್ರತಿಜ್ಞೆಯನ್ನು ಬಹಳ ಕಾಲದಿಂದಲೂ ಪಾಲಿಸುತ್ತಿದ್ದರು. ಆದರೆ ಚಪಾತಿ ತಿನ್ನುತ್ತಿದ್ದರು. ಒಂದು ವೇಳೆ ಚಪಾತಿ ಸಿಗದಿದ್ದರೆ ಇವರು ಏನನ್ನೂ ತಿನ್ನುತ್ತಿರಲಿಲ್ಲ. ಪ್ರವಾಸದ ಸಮಯದಲ್ಲಿ ಎಷ್ಟೋ ವೇಳೆ ರಾತ್ರಿ ಚಪಾತಿ ಸಿಗದಿದ್ದಾಗ ಇವರು ಊಟವನ್ನೇ ಮಾಡುತ್ತಿರಲಿಲ್ಲ. ನಮಗೋ ಇವರನ್ನು ಬಿಟ್ಟು ಊಟ ಮಾಡುವುದು ಕಷ್ಟವಾಗುತ್ತಿತ್ತು. ನಿಮ್ಮ ನಿಯಮ ಮುರಿಯಿರಿ ಎಂದು ನಾವು ಬಹಳ ಒತ್ತಾಯ ಮಾಡುತ್ತಿದ್ದುದುಂಟು. ಆದರೆ ಇವರು ಎಂದೂ ತಮ್ಮ ನಿಯಮ ಮುರಿದದ್ದು ನನಗೆ ಕಂಡಿಲ್ಲ.

ಭಾರತದಲ್ಲಷ್ಟೇ ಅಲ್ಲ, ಇವರು ಹೊರದೇಶಕ್ಕೆ ಹೋದಾಗಲೂ ತಮ್ಮ ನಿಯಮಗಳನ್ನು ಮುರಿಯಲೇ ಇಲ್ಲ. ಒಮ್ಮೆ ಹುಚ್ಚೇಗೌಡರು ಪ್ರವಾಸಿ ಕಂಪನಿಯ

ಪ್ಯಾಕೇಜ್ ಟೂರ್‌ನಲ್ಲಿ ಯೂರೋಪಿನ ಹಲವು ದೇಶಗಳನ್ನು ಸುತ್ತಿ ಬಂದರು. ಆ ಚಳಿ ದೇಶಗಳಲ್ಲೂ ಸಹ ತಮ್ಮ ಬಿಳಿ ಪಂಚೆ ಮತ್ತು ಶರ್ಟ್‌ನ್ನು ಬದಲಾಯಿಸಲಿಲ್ಲ. ಕ್ರಿಸ್ತನ ಹುಟ್ಟೂರಾದ ಜೆರುಸಲೆಂ ಮುಂತಾದ ಇಸ್ರೇಲ್‌ನ ಭಾಗಗಳನ್ನು, ರೋಮ್, ಇಟಲಿ ಇತ್ಯಾದಿ ದೇಶಗಳನ್ನು ತಮ್ಮ ಪಂಚೆ-ಶರ್ಟುಗಳಲ್ಲೇ ಸುತ್ತಿದರು. ಅದೇ ಸಮಯದಲ್ಲಿ ಇಂಗ್ಲೀಷ್‌ನ 'ಗಾಂಧಿ' ಸಿನಿಮಾ ಬಿಡುಗಡೆಯಾಗಿ ಪ್ರಪಂಚದಾದ್ಯಂತ ಗಾಂಧಿ ಸ್ಮೃತಿ ಮರುಕಳಿಸಿತ್ತು. ಯೂರೋಪಿನ ಅನೇಕ ಕಡೆ ಜನರು ಇವರನ್ನು ಮುತ್ತಿಕೊಂಡು ಂಡಿಜ ಥಿಂಣ ಜಿಡಿಂಟ ಉಚಿಟಿಜ್ಝು' ಭಿಂಣಟಿಣಡಿಥಿ? ಎಂದು ಕೇಳುತ್ತಿದ್ದರು. ಕೆಲವರಂತೂ ಇವರನ್ನು 'ಗಾಂಧಿ' ಎಂದೇ ಸಂಬೋಧಿಸುತ್ತಿದ್ದರು. ಯೂರೋಪ್ ಪ್ರವಾಸದಲ್ಲಂತೂ ಅರೆ ಹೊಟ್ಟೆಯಲ್ಲಿಯೇ ಕಾಲ ಕಳೆಯಬೇಕಾಯಿತು. ಇವರೊಡನೆ ಬಂದವರೆಲ್ಲರೂ ಮಾಂಸಹಾರ, ವೈನ್ ಇತ್ಯಾದಿಗಳನ್ನು ಧಾರಾಳವಾಗಿ ಸೇವಿಸುತ್ತಿದ್ದರು. ಆದರೆ ಗೌಡರಿಗೆ ಶುದ್ಧ ಸಸ್ಯಾಹಾರ ಸಿಕ್ಕಿದ್ದೇ ಕಡಿಮೆ. ಊಟ ಇಲ್ಲದಿದ್ದರೆ ಇರಲಿ, ಕುಡಿಯುವ ನೀರಾದರೂ ದೊರೆಯಬೇಡವೇ? ಗೌಡರು ಯೂರೋಪಿನಿಂದ ಹಿಂದಿರುಗಿದಾಗ ಹೇಳಿದರು. 'ಅಲ್ಲೆಲ್ಲಾ ಬರೀ ಬೀರ್ ಕೊಡುತ್ತಿದ್ದರು. ನಾನು ನೀರ್ ಕೊಡಿ ಅಂತ ಕೇಳ್ತಾ ಇದ್ದೆ. ಅಲ್ಲಿ ನೀರನ್ನೇ ಸರಬರಾಜು ಮಾಡುತ್ತಿರಲಿಲ್ಲ, ಆದರೂ ಯಾವ ಸಂದರ್ಭದಲ್ಲೂ ತಮ್ಮ ಕಟ್ಟು ನಿಟ್ಟಿನ ನಿಯಮವನ್ನು ಸಡಿಲ ಮಾಡಲೇ ಇಲ್ಲ. ಅವರಿಗೆ, ಕ್ರಿಸ್ತನ ಶವ ಇರಿಸಲಾಗಿದ್ದ ಗುಹೆ ಬಹಳ ರೋಮಾಂಚಕಾರಿಯಾಗಿ ಕಂಡಿತಂತೆ. ಹಾಗೆಯೇ ಕ್ರಿಸ್ತ ನಡೆದಾಡಿದ ನೆಲದಲ್ಲಿ ಇವರೂ ನಡೆದಾಡಿ ರೋಮಾಂಚಕಾರಿ ಅನುಭವ ಪಡೆದುಕೊಂಡರು.

ಹುಚ್ಚೇಗೌಡರು ಮತ್ತು ನಾನು ಒಟ್ಟಿಗೆ ಇರುವಾಗ ಸಾಮಾನ್ಯವಾಗಿ ನಾನೇ ಅಡಿಗೆ ಮಾಡುತ್ತಿದ್ದೆ. ನನ್ನ ಅಡಿಗೆ ಬಗ್ಗೆ ಅನೇಕ ವೇಳೆ ಮುಕ್ತವಾಗಿ ಪ್ರಶಂಸಿಸುತ್ತಿದ್ದರು. ಕೆಲವೊಮ್ಮೆ ನಮ್ಮ ಸಮಾಜ ಕಾರ್ಯದ ಗದ್ದಲದಲ್ಲಿ ಹುಚ್ಚೇಗೌಡರ ಮನೆ ದೊಡ್ಡ ಸಂಘಟನಾ ಕೇಂದ್ರವಾಗಿ ಪರಿಣಮಿಸುತ್ತಿತ್ತು. ಆಗ ಸುಮಾರು ೧೦ ರಿಂದ ೩೦ ಜನ ಬಂದು ಗೌಡರ ಸಣ್ಣ ಮನೆಯಲ್ಲಿ ಜಮಾಯಿಸುತ್ತಿದ್ದರು. ಅವರೆಲ್ಲರಿಗೂ ನಾನು ಮತ್ತು ಹುಚ್ಚೇಗೌಡರು ಸೇರಿ ಅಡಿಗೆ ಮಾಡುತ್ತಿದ್ದೆವು. ಗೌಡರು ಶ್ರದ್ಧೆಯಿಂದ ತರಕಾರಿ ಹೆಚ್ಚಿ ಕೊಡುತ್ತಿದ್ದರು. ಅಷ್ಟೇ ಅಲ್ಲ, ಎಷ್ಟು ಬೇಡವೆಂದರೂ ಕೇಳದೆ ತಾವೇ ಮೊದಲು ಹೋಗಿ ಪಾತ್ರೆಗಳನ್ನೆಲ್ಲಾ ತೊಳೆಯುತ್ತಿದ್ದರು.

ನನ್ನ ಮೊದಲ ಕೆಲವು ಲೇಖನಗಳನ್ನು ಗೌಡರು ಓದಿ ಬಹಳವಾಗಿ ಮೆಚ್ಚಿದ್ದು ನನಗೆ ಇನ್ನೂ ನೆನಪಿದೆ. ಕಸ್ತೂರಿ ಮಾಸಪತ್ರಿಕೆಗೆಂದು ನಾನು ಬರೆದ ಒಂದು ಪ್ರತಿಕ್ರಿಯೆ ಗೌಡರಿಗೆ ಬಹಳ ಮೆಚ್ಚುಗೆಯಾಯಿತು. ನಾನು ಅದನ್ನು ಬರೆಯುವಾಗ ಎರಡು ಮೂರು ಬಾರಿ ಬಂದು 'ಮುಂದೇನು ಬರೆದಿದ್ದೀರಿ?' ಎಂದು ಕೇಳುತ್ತಾ ತಮ್ಮ ಸಲಹೆ ಸೂಚನೆ ಕೊಡುತ್ತಿದ್ದರು. ನನ್ನ ಬರವಣಿಗೆಗೆ ಸಿಕ್ಕ ಮೊದಲ ಪ್ರೋತ್ಸಾಹ ಹುಚ್ಚೇಗೌಡರಿಂದ.

ನಾವು ಬೂದಿಪಡಗದ ಸೋಲಿಗರಿಗಾಗಿ ಕೆಲಸ ಮಾಡುವಾಗ ಹುಚ್ಚೇಗೌಡರು ನನಗೆ ನೆರವಾಗಿ ನಿಂತರು. ಮೈಸೂರು ರಾಮಕೃಷ್ಣ ಆಶ್ರಮ ನನಗೆ ಒಂದು ಮೋಟಾರ್ ಸೈಕಲ್ ಕೊಡಿಸಿತ್ತು. ಆದರೆ ಹುಚ್ಚೇಗೌಡರೊ ಕೆಲವೊಮ್ಮೆ ತಮ್ಮ ಸೈಕಲ್ ತುಳಿದುಕೊಂಡೇ ೩೦ ಕಿ.ಮೀ. ದೂರವಿರುವ ಬೂದಿಪಡಗಕ್ಕೆ ಬರುತ್ತಿದ್ದರು. ಆದರೆ ಅವರಿಗೆ ಸೋಲಿಗರ ಅಶಿಸ್ತನ್ನು ಕಂಡರೆ ಮಾತ್ರ ಆಗುತ್ತಿರಲಿಲ್ಲ. ಹಾಗೆ ನೋಡಿದರೆ ಅವರಷ್ಟು ಶಿಸ್ತು ನಮಗ್ಯಾರಿಗೂ ಸಾಧ್ಯವಾಗುತ್ತಿರಲಿಲ್ಲ. ಅವರು ಗಿರಿಜನರಿಗೆ ಸಹಾಯವನ್ನೇನೊ ಮಾಡುತ್ತಿದ್ದರು. ಆದರೆ ಅವರ ಅಶಿಸ್ತಿನ ವರ್ತನೆಯನ್ನು ನಿಷ್ಠುರವಾಗಿ ಖಂಡಿಸದೆ ಬಿಡುತ್ತಿರಲಿಲ್ಲ. ಅಭಿವೃದ್ಧಿ

ಆಗದಿರುವ ಬಗ್ಗೆ ಕೆಲವೊಮ್ಮೆ ಹತಾಶರಾಗಿ ಬಿಡುತ್ತಿದ್ದರು. ನಾವೆಲ್ಲರೂ ಸೇರಿ ಅವರಿಗೆ ಸಮಾಧಾನ ಹೇಳಬೇಕಾಗಿತ್ತು.

ಗಿರಿಜನರೊಡನೆ ಕೆಲಸ ಮಾಡುತ್ತಿದ್ದಂತೆ ನನಗೆ ತಂದೆ-ತಾಯಿ ಇಲ್ಲದ ಮಕ್ಕಳಿಗಾಗಿ ಕೆಲಸ ಮಾಡಬೇಕೆನಿಸಿತ್ತು. ಆ ಸಂದರ್ಭದಲ್ಲಿ ಒಂದು ಸಂಸ್ಥೆಯನ್ನು ಹುಟ್ಟುಹಾಕುವ ಚರ್ಚೆಗಳು ನಡೆದವು. ನಾನು ಸೋಮಸುಂದರಮ್ ಮತ್ತು ಹುಚ್ಚೇಗೌಡರು ಸೇರಿ ಮಕ್ಕಳ ಆಶ್ರಮಕ್ಕೆ ಏನು ಹೆಸರಿಡಬೇಕೆಂದು ಹುಡುಕುತ್ತಿರುವಾಗ ಹುಚ್ಚೇಗೌಡರು 'ದೀನಬಂಧು' ಎಂಬ ಹೆಸರನ್ನು ಆಗ್ರಹ ಪೂರ್ವಕವಾಗಿ ಸೂಚಿಸಿದರು. ಹೀಗೆ ದೀನಬಂಧು ಪ್ರಾರಂಭವಾಯಿತು. ಟ್ರಸ್ಟನ್ನು ರಿಜಿಸ್ಟರ್ ಮಾಡುವ ಬಗ್ಗೆ ನಾವು ಪ್ರಯತ್ನ ಪಡುತ್ತಿದ್ದಾಗ ಹುಚ್ಚೇಗೌಡರು ಒಂದು ದಿನಾಂಕ ನಿಗದಿಪಡಿಸಿ ಅದೇ ದಿನ ರಿಜಿಸ್ಟರ್ ಆಗಬೇಕೆಂದು ಒತ್ತಾಯ ಮಾಡಿದರು. ಆ ದಿನ ಏನು ವಿಶೇಷ ಎಂದು ನಾವು ನೋಡಿದಾಗ ಅದು ೮-೮-೮೮ ಆಗಿತ್ತು. ಸಂಸ್ಥೆ ರಿಜಿಸ್ಟರ್ ಆದರೂ ನಮಗೆ ಮಕ್ಕಳು ಸಿಗದೆ ಕೆಲಸ ಪ್ರಾರಂಭಿಸಲಿಲ್ಲ. ಕೊನೆಗೆ ಹುಚ್ಚೇಗೌಡರು ದೀನಬಂಧು ಕೆಲಸ ಪ್ರಾರಂಭಿಸಲೇಬೇಕೆಂದು ಒತ್ತಾಯ ಹೇರತೊಡಗಿದರು. ಹಾಗಾಗಿ ೧೯೯೨ ರಲ್ಲಿ ೬ ಮಕ್ಕಳ ಮೊದಲ ತಂಡದೊಂದಿಗೆ ಆಶ್ರಮ ಪ್ರಾರಂಭವಾಯಿತು.

ಆಗಲೂ ಸಂಸ್ಥೆಗಾಗಿ ತಾವು ದಾನ ಕೊಟ್ಟಿದ್ದಲ್ಲದೆ ಇತರರಿಂದಲೂ ಸಂಗ್ರಹ ಮಾಡಿಕೊಟ್ಟರು. ಜೊತೆಗೆ ತಮ್ಮದೇ ಒಂದು ನಿವೇಶನವನ್ನೂ ಸಹ ದೀನಬಂಧುವಿಗೆ ದಾನವಾಗಿ ಕೊಟ್ಟರು. ಈ ನಿವೇಶನ ಆಶ್ರಮ ಕಟ್ಟಲು ಸಾಲದು ಎನಿಸಿದಾಗ ತಾವು ದಾನ ಮಾಡಿದ ನಿವೇಶನವನ್ನು ತಾವೇ ಹಣಕೊಟ್ಟು ಕೊಂಡುಕೊಂಡರು. ಹೀಗೆ ದೀನಬಂಧುವಿನ ನಾಮಕರಣದಿಂದ ಹಿಡಿದು ಅದು ಭದ್ರವಾಗಿ ತಳವೂರುವ ತನಕ ಗೌಡರು ಎಲ್ಲ ವಿಧದಲ್ಲೂ ಸಹಾಯ ಹಸ್ತ ಚಾಚುತ್ತಾ ನಮ್ಮ ನೆರವಿಗೆ ನಿಂತರು.

ಹುಚ್ಚೇಗೌಡರ ಆಧ್ಯಾತ್ಮಿಕ ಪ್ರವೃತ್ತಿ ದಿನಕಳೆದಂತೆ ಹೆಚ್ಚಾಗುತ್ತಾ ಹೋಯಿತು. ಈಗ್ಗೆ ಕೆಲವು ವರ್ಷಗಳಿಂದ ಪ್ರತೀವರ್ಷ ಇವರು ಹಿಮಾಲಯಕ್ಕೆ ಹೋಗಿಬರುವುದು ರೂಢಿಯಾಗಿದೆ. ಶ್ರೀಕೃಷ್ಣ ಪ್ರೇಮಾಶ್ರಮ ಎಂಬ ಆಲ್ಮೋರಾದಲ್ಲಿರುವ ಒಂದು ಆಶ್ರಮ ಇವರನ್ನು ಬಹಳವಾಗಿ ಆಕರ್ಷಿಸಿದೆ. ಅಲ್ಲಿಗೆ ಪ್ರತಿ ವರ್ಷ ಹೋಗಿ ಬರುವುದು ಇವರ ರೂಢಿ. ಹುಚ್ಚೇಗೌಡರಿಗೆ ಬಿಳಿಗಿರಿರಂಗನ ಬೆಟ್ಟದ ಸ್ವಾಮಿ ನಿರ್ಮಲಾನಂದರ ಜೊತೆ ದೀರ್ಘಕಾಲದ ಒಡನಾಟವಿತ್ತು. ಗೌಡರೇ ಹೇಳುವಂತೆ ಸ್ವಾಮಿ ನಿರ್ಮಲಾನಂದರು ಪರಿವ್ರಾಜಕರಾಗಿ ಪ್ರಪಂಚವನ್ನೇ ಸುತ್ತಿ ಕಡೆಗೆ ಕೂಟಸ್ಥರಾಗಿ ನೆಲೆಸಲು ಬಿಳಿಗಿರಿರಂಗನ ಬೆಟ್ಟವನ್ನು ಆರಿಸಿಕೊಂಡರಂತೆ. ಮುಖ್ಯವಾಗಿ ತಗಡೂರು ರಾಮಚಂದ್ರರಾಯರು ಬಿಳಿಗಿರಿರಂಗನ ಬೆಟ್ಟದ ಬಗ್ಗೆ ಸಲಹೆ ಇತ್ತು ಹುಚ್ಚೇಗೌಡರನ್ನು ಸ್ವಾಮಿಗಳಿಗೆ ಬೆಟ್ಟ ತೋರಿಸಲು ಹೇಳಿದರಂತೆ. ಹುಚ್ಚೇಗೌಡರು ಮೊದಲಿನಿಂದಲೂ ಸಾಧುಸಂತರ ಬಗ್ಗೆ ಆಸಕ್ತರಾಗಿದ್ದರು. ಇಂಗ್ಲೀಷ್ ಮಾತನಾಡಬಲ್ಲ ಹೊಸ ಮಾದರಿ ಚಿಂತನೆಯ ಸ್ವಾಮಿ ನಿರ್ಮಲಾನಂದರು ಇವರನ್ನು ಸುಲಭವಾಗಿ ಆಕರ್ಷಿಸಿಬಿಟ್ಟರು. ಹಾಗಾಗಿ ಇಡೀ ಬಿಳಿಗಿರಿರಂಗನ ಬೆಟ್ಟದ ಪ್ರಶಸ್ತ ತಾಣಗಳನ್ನು ಸ್ವಾಮೀಜಿಯವರಿಗೆ ತೋರುತ್ತಾ ಕಾಲ್ನಡಿಗೆಯಲ್ಲೇ ಸಂಚರಿಸಿದರು. ಬಿಳಿಗಿರಿರಂಗನ ಬೆಟ್ಟವು ಇತರ ಪ್ರವಾಸಿ ತಾಣಗಳಂತೆ ಮಲಿನವಾಗದೆ ತನ್ನ ಮೂಲ ಸ್ವರೂಪವನ್ನು ಕಾಯ್ದುಕೊಂಡಿದ್ದು ನಿರ್ಮಲಾನಂದರಿಗೆ ಇಷ್ಟವಾಯಿತು. ಕೊನೆಗೆ ಸ್ವಾಮಿ ನಿರ್ಮಲಾನಂದರು ಬೆಟ್ಟದಲ್ಲಿ ಒಂದು ಚಿಕ್ಕ ಕುಟೀರ ಕಟ್ಟಿಕೊಂಡು ನೆಲೆಸಿದರು.

ನಿರ್ಮಲಾನಂದರಿಗೆ ಗೌಡರು ನಾನಾ ಬಗೆಯ ಸೇವೆ ಮಾಡಿದ್ದುಂಟು. ಮೊದಲ ದಿನಗಳಲ್ಲಿ ಆಹಾರ ಧಾನ್ಯ ಇತ್ಯಾದಿ ಸರಬರಾಜು ಎಲ್ಲವನ್ನೂ ಗೌಡರೇ ಮಾಡುತ್ತಿದ್ದರೆಂದು ಕಾಣುತ್ತದೆ. ಹುಚ್ಚೇಗೌಡರಿಂದ ನನಗೆ ನಿರ್ಮಲಾನಂದರ ಪರಿಚಯವೂ ಆಯಿತು. ನಿರ್ಮಲಾನಂದರ ಬಗ್ಗೆ ಅನೇಕ ಅಸಾಧಾರಣ ಪ್ರಸಂಗಗಳನ್ನು ಹುಚ್ಚೇಗೌಡರು ನಮಗೆಲ್ಲ ರಂಜಕವಾಗಿ ಹೇಳುತ್ತಿದ್ದುದುಂಟು. ಒಮ್ಮೆ ಉತ್ತರ ಭಾರತದ ಭಕ್ತರೊಬ್ಬರು ಸ್ವಾಮಿಗಳಿಗೆ ೩೦ಕೆ.ಜಿ. ಒಣದ್ರಾಕ್ಷಿಯನ್ನು ರೈಲ್ವೆ ಪಾರ್ಸ್‌ಲ್ ಮುಖಾಂತರ ಕಳುಹಿಸಿದ್ದರಂತೆ, ಆದರೆ ಈ ದ್ರಾಕ್ಷಿ ಚಾಮರಾಜನಗರ ರೈಲ್ವೆ ನಿಲ್ದಾಣ ತಲುಪುವ ವೇಳೆಗೆ ೨ ಕೆ.ಜಿ.ಗೆ ಇಳಿದಿತ್ತು. ಅದನ್ನು ಬಿಡಿಸಿ ತರಲು ಹೋದ ಹುಚ್ಚೇಗೌಡರು ೨೮ ಕೆ.ಜಿ. ಕಾಣೆಯಾಗಿದ್ದನ್ನು ನೋಡಿ ಗಾಬರಿಯಾಗಿ ಪಾರ್ಸಲ್ ಬಿಡಿಸಿಕೊಳ್ಳಲೇ ಇಲ್ಲ. ನಿರ್ಮಲಾನಂದ ಸ್ವಾಮೀಜಿಯವರಿಗೆ ವಿಷಯ ತಿಳಿಸಿದರು. ಸ್ವಾಮೀಜಿಯವರು ರೈಲ್ವೆ ಮಂತ್ರಿಗೆ ದೂರು ನೀಡಿ ಕಾಗದ ಬರೆದರಂತೆ, ಸ್ವಾಮಿ ನಿರ್ಮಲಾನಂದರ ಬರವಣಿಗೆ ಎಷ್ಟು ಪರಿಣಾಮಕಾರಿಯಾಗಿ ಇತ್ತೆಂದರೆ ರೈಲ್ವೆ ಮಂತ್ರಿಗಳು ತನಿಖಾ ಆಯೋಗವನ್ನು ಆದೇಶಿಸಿ ಯಾವ ಯಾವ ರೈಲ್ವೆ ಸ್ಟೇಷನ್‌ಗಳಲ್ಲಿ ಎಷ್ಟು ಎಷ್ಟು ದ್ರಾಕ್ಷಿ ಕಣ್ಮರೆಯಾಗಿತ್ತೆಂದು ತನಿಖೆ ನಡೆಸಿ ಕಡೆಗೆ ಇಲಾಖೆಯಿಂದ ೩೦ಕೆ.ಜಿ. ಹೊಸ ಒಣದ್ರಾಕ್ಷಿಯನ್ನು ಕೊಡಿಸಿಕೊಟ್ಟರಂತೆ. ಇದೇ ರೀತಿಯ ಕಲಬೆರಕೆ ಸೀಮೆಎಣ್ಣೆಯ ಬಗ್ಗೆಯೂ ಸಹ ಸ್ವಾಮಿ ನಿರ್ಮಲಾನಂದರು ಇಂಧನ ಮಂತ್ರಿಗಳಿಗೆ ದೂರು ನೀಡಿದಾಗ ಅಧಿಕಾರಿಗಳು ಬೆಟ್ಟಕ್ಕೆ ದೌಡಾಯಿಸಿ ೨ ಡಬ್ಬ ಅಪ್ಪಟ ಸೀಮೆಎಣ್ಣೆಯನ್ನು ಸ್ವಾಮಿಗಳ ಪಾದಕ್ಕೆ ಅರ್ಪಿಸಿ ದಯಮಾಡಿ ಇಂತಹ ಪತ್ರ ಬರೆಯಬೇಡಿ ಎಂದು ಅಂಗಲಾಚಿದರಂತೆ. ೧೧ ವರ್ಷಗಳ ಕಾಲ ಮೌನದಲ್ಲಿದ್ದ ನಿರ್ಮಲಾನಂದರು ಯಾರೊಡನೆ ಮಾತನಾಡದಿದ್ದರೂ ಹುಚ್ಚೇಗೌಡರೊಡನೆ ಕೆಲವೊಮ್ಮೆ ಮಾತನಾಡಿದ್ದುಂಟು. ಆಲ್ಮೋರಾದಲ್ಲಿರುವ ಶ್ರೀಕೃಷ್ಣ ಪ್ರೇಮಾಶ್ರಮಕ್ಕೆ ಹುಚ್ಚೇಗೌಡರನ್ನು ಪರಿಚಯಿಸಿದವರು ಸ್ವಾಮಿ ನಿರ್ಮಲಾನಂದರೇ. ಹೀಗೆ ಹುಚ್ಚೇಗೌಡರ ಮೇಲೆ ಸ್ವಾಮಿ ನಿರ್ಮಲಾನಂದರ ಪ್ರಭಾವ ಬಹಳವಾಗಿ ಇದೆ.

ಬಾಲ್ಯದ ದಿನಗಳನ್ನು ನೆನೆದು ಹುಚ್ಚೇಗೌಡರು ತಮ್ಮ ಬಿಳಿಗಿರಿರಂಗನ ಬೆಟ್ಟದ ಸಂಬಂಧ ಕುರಿತಾಗಿ ಅನೇಕ ಕಥೆಗಳನ್ನು ಹೇಳುತ್ತಿದ್ದರು. ಬಸ್ಸುಗಳೇ ಇಲ್ಲದ ಆ ಕಾಲದಲ್ಲಿ ಗೌಡರು ಬೆಟ್ಟದ ಅನೇಕ ಕಾಮಗಾರಿಗಳನ್ನು ಒಪ್ಪಿಕೊಂಡು ಮಾಡಿಕೊಟ್ಟರು. ಒಂದು ಸೈಕಲ್‌ಗೆ ಪೈಂಟಿನ ಡಬ್ಬ ಕಟ್ಟಿಕೊಂಡು ಮೈಲುಗಲ್ಲುಗಳಿಗೆ ಪೈಂಟ್ ಹಚ್ಚುತ್ತಾ ಬಂದಿರುವ ದಿನಗಳನ್ನು ನಮಗೆಲ್ಲಾ ಹೇಳುತ್ತಿದ್ದರು. ಬಿಳಿಗಿರಿರಂಗನ ಬೆಟ್ಟದಲ್ಲಿ ಆಹಾರ ಧಾನ್ಯಗಳು ಕೆಲವೊಮ್ಮೆ ಮುಗಿದೇ ಹೋಗುತ್ತಿತ್ತಂತೆ. ಆಗ ಯಳಂದೂರಿನಿಂದ ಕತ್ತೆಗಳ ಮೇಲೆ ಅಕ್ಕಿ ಮೂಟೆಗಳು ಬರಬೇಕಾಗಿತ್ತು. ಕಮರಿಯ ಮೇಲೆ ನಿಂತು ಅಕ್ಕಿ ಮೂಟೆಗಳನ್ನು ನಿರೀಕ್ಷಿಸುತ್ತಿದ್ದ ಕಾಲವೊಂದಿತ್ತು ಎಂದು ಗೌಡರು ಹೇಳುತ್ತಾರೆ. ಕಷ್ಟ ಸಹಿಷ್ಣುತೆ, ಶಿಸ್ತು ಇವುಗಳನ್ನು ರೂಢಿಸಿಕೊಂಡ ಹುಚ್ಚೇಗೌಡರು ಮೌಲ್ಯಯುತ ಜೀವನವನ್ನು ನಡೆಸಿದ್ದಾರೆ. ಸಂಸಾರದ ಗೊಡವೆ ಬೇಡ ಎಂದು ಮದುವೆಯಾಗದೆ ಉಳಿದರು ಜೊತೆಗೆ ಸಾರ್ಥಕವಾದ ಸಮಾಜ ಸೇವೆಯ ಜೀವನ ನಡೆಸುತ್ತಿದ್ದಾರೆ. ಇವರಿಂದ ಅನೇಕ ಯುವಕರು ಸ್ಫೂರ್ತಿಗೊಳ್ಳಲೆಂದು ಆಶಿಸೋಣ.

* * *

ನೆರಳುಗಳ ಬೆನ್ನುಹತ್ತಿ

- *ಡಾ.ಡಿ.ಬಿ.ರಾಮಚಂದ್ರಾಚಾರ್ಯ*

(ಸಂಸ್ಕೃತ, ಕನ್ನಡ ಮತ್ತು ಇಂಗ್ಲಿಷ್ ಭಾಷೆ-ಸಾಹಿತ್ಯಗಳನ್ನು ಆಳವಾಗಿ, ಆಪ್ತವಾಗಿ ಬಲ್ಲ ಡಾ.ಚಿಲಕುಂದ(ಸಿ) ನಾಗಪ್ಪಶಾಸ್ತ್ರಿ(ಎನ್) ರಾಮಚಂದ್ರನ್ ಅವರು ನಮ್ಮ ನಡುವಿನ ಅಪರೂಪದ ವಿದ್ವಾಂಸರು ಮತ್ತು ವಿಮರ್ಶಕರು. ಅವರು ಬರೆದ 'ನೆರಳುಗಳ ಬೆನ್ನುಹತ್ತಿ' ಪುಸ್ತಕದ ಅನಿಸಿಕೆ ಈ ಲೇಖನದಲ್ಲಿದೆ.)

ನಾಡಿನ ಸುಪ್ರಸಿದ್ಧ ವಿಮರ್ಶಕರಲ್ಲಿ ಒಬ್ಬರಾದ ಸಿ.ಎನ್.ಆರ್. ಅವರು 'ನೆರಳುಗಳ ಬೆನ್ನುಹತ್ತಿ' ಕೃತಿಯಲ್ಲಿ ತಮ್ಮ ಬದುಕನ್ನು ಸಹೃದಯರೆದುರಿಗೆ ಬಿಚ್ಚಿಟ್ಟಿದ್ದಾರೆ. ಬಾಲ್ಯದಿಂದ ಹಿಡಿದು ನಿವೃತ್ತ ಜೀವನದ ಹೊಸ್ತಿಲನ್ನು ತುಳಿಯುವ ತನಕ ಅವರ ಬಾಳು ಉಂಡ ಸಿಹಿ–ಕಹಿಗಳನ್ನು ಈ ಕೃತಿ ಚಿತ್ರಿಸುತ್ತದೆ. ಚಿಲುಕುಂದ ಎಂಬ ಸಣ್ಣ ಹಳ್ಳಿಯ, ಬ್ರಾಹ್ಮಣರಲ್ಲಿ ಸಂಕೇತಿ ಎಂಬ ವರ್ಗದ, ಕಡು ಬಡತನದ ಹಿನ್ನೆಲೆಯ, ಒಬ್ಬ ಹುಡುಗ, ಉನ್ನತ ವ್ಯಾಸಂಗದ ಕನಸು ಹೊತ್ತು, ಆಕ್ಸ್‌ಫರ್ಡ್–ಒಹಾಯೋ ವಿಶ್ವವಿದ್ಯಾನಿಲಯದಲ್ಲಿ ಪಿ.ಎಚ್.ಡಿ. ಪದವಿಯನ್ನು ಪಡೆದ ವ್ಯಕ್ತಿಯೋರ್ವನ ವೈಯಕ್ತಿಕ ಸಾಧನೆಯ ಹೋರಾಟದ ಚಿತ್ರ ಈ ಕೃತಿಯಲ್ಲಿ ಮೂಡಿದೆ.

ಹಣ ಮತ್ತು ಕೀರ್ತಿ ಬದುಕನ್ನು ಉತ್ತೇಜಿಸುವ ಎರಡು ಆಕರ್ಷಣೆಗಳು. ಪ್ರತಿಯೊಬ್ಬ ವ್ಯಕ್ತಿಯೂ ಇದಕ್ಕಾಗಿಯೇ ಶ್ರಮಿಸುತ್ತಾನೆ. ಜೀವನದಲ್ಲಿ ಏನೋ ಆಗಬೇಕೆಂದು ಹಂಬಲಿಸುತ್ತಾನೆ. ಸಿ.ಎನ್.ಆರ್. ಇದಕ್ಕೆ ಹೊರತಲ್ಲ. ಬಯಸಿದ ಎಲ್ಲರಿಗೂ ಬಯಸಿದ್ದು ಸಿಕ್ಕಿಬಿಡುವುದಿಲ್ಲ. ಹೋರಾಟದ ಶ್ರಮ ಅನುಭವದ ರೂಪದಲ್ಲಿ ಅವರದಾಗಬಹುದು. ಬಯಸಿದ್ದು ಕೈಗೆ ಸಿಗದೆ ನುಣುಚಿಕೊಳ್ಳಬಹುದು, ನೆರಳುಗಳ ಬೆನ್ನು ಹತ್ತಿ' ಎನ್ನುವ ಶೀರ್ಷಿಕೆಯೇ ಅರ್ಥವತ್ತಾದುದು. ಸಿ.ಎನ್.ಆರ್ ಬಯಸಿದ್ದು ಏನು, ಪಡೆದದ್ದು ಏನು, ಎನ್ನುವ ವಿವರಣೆ ಈ ಕೃತಿಯ ವಸ್ತು.

ಮೊದಲೆರಡು ಅಧ್ಯಾಯಗಳು ಬಡತನದ ಬವಣೆಯನ್ನು, ಅದರ ಮಧ್ಯದಲ್ಲಿಯೇ ವಿದ್ಯಾಭ್ಯಾಸದ ಪ್ರಯತ್ನವನ್ನು ವಿವರಿಸುತ್ತದೆ. ಬ್ರಾಹ್ಮಣ ವರ್ಗದಲ್ಲಿ ಶ್ರೀಮಂತರು ಬಲು ಕಡಿಮೆ. ಬಡವರೇ ಜಾಸ್ತಿ. ನಾನು ಬಾಲಕನಾಗಿದ್ದಾಗ, ಅನಾಥಾಲಯದ ವಿದ್ಯಾರ್ಥಿಗಳು ಅಗ್ರಹಾರದ ಬೀದಿಗಳಲ್ಲಿ 'ಭವತಿ ಬಿಕ್ಷಾಂದೇಹಿ' ಎಂದು ಹೇಳುತ್ತಾ ಒಂದು ಮುಂಡನ್ನು ಉಟ್ಟಿಕೊಂಡು ಮೇಲೆ ಟವೆಲನ್ನು ಹೊದ್ದುಕೊಂಡು ಹೋಗುತ್ತಿದ್ದುದನ್ನು ಕಂಡಿದ್ದೇನೆ. ಉಳ್ಳವರು ವಿದ್ಯಾರ್ಥಿಗಳಿಗೆ ಒಂದು ದಿನ ಅಥವಾ ಅರ್ಧ ದಿನ ಸರದಿಯಲ್ಲಿ ಊಟ ಹಾಕುತ್ತಿದ್ದುದು ಉಂಟು. ಇದೇ ವಾರಾನ್ನ. ಸಿ.ಎನ್.ಆರ್.ಗೆ ಇಂತಹ ಸ್ಥಿತಿ ಇರಲಿಲ್ಲ. ಆತ್ಮ ಗೌರವಕ್ಕೆ ಕುಂದು ತರುವಂತಹ ಸ್ಥಿತಿಯನ್ನು ಎದುರಿಸಲಿಲ್ಲ. ಊಟ ತಿಂಡಿಗೆ ತೊಂದರೆ ಇಲ್ಲದ ವಿಟ್ಠಲ

ರಾವ್ ಶೇಷಣ್ಣ ವಿದ್ಯಾರ್ಥಿ ನಿಲಯದ ಆಶ್ರಯದಲ್ಲಿ ಮೈಸೂರಿನಂತಹ ವಿದ್ಯಾ ಕೇಂದ್ರದಲ್ಲಿ ವಿದ್ಯೆಯನ್ನು ಪಡೆಯುವ ಅವಕಾಶವನ್ನು ಪಡೆದರು.

ವೃತ್ತಿ ಜೀವನವನ್ನು ಸೊಲ್ಲಾಪುರ, ಸೊಮಾಲಿಯಾ, ನಿಪ್ಪಾಣಿ, ಸೌದಿ ಅರೇಬಿಯಾ ಮುಂತಾದ ಕಡೆ ನಡೆಸಿದರು. ವೃತ್ತಿ ಜೀವನಕ್ಕೆ ಅವರಾಗಿಯೇ ಆಯ್ದುಕೊಂಡ ಜಾಗಗಳು ಇವು. ಈ ಸಂದರ್ಭದಲ್ಲಿ ಒದಗಿದ ಅನೇಕ ಸಿಹಿ–ಕಹಿ ಅನುಭವಗಳನ್ನು ದಾಖಲಿಸಿದ್ದಾರೆ.

ತಾವು ಅನಂತಮೂರ್ತಿಯವರಂತೆ, ಸಿ.ಡಿ.ಎನ್ ಅವರಂತೆ ವಿದೇಶದಲ್ಲಿ ಪ್ರತಿಷ್ಠಿತ ವಿಶ್ವವಿದ್ಯಾನಿಲಯದಲ್ಲಿ ಡಾಕ್ಟರೇಟ್ ಅನ್ನು ಪಡೆಯಬೇಕು, ಆ ಮೂಲಕ ಸಮಾಜದಲ್ಲಿ ಪ್ರತಿಷ್ಠಿತ ವ್ಯಕ್ತಿಯಾಗಬೇಕು ಎಂಬುದು ಅವರ ಹಂಬಲ. ಅದಕ್ಕಾಗಿ ತಮ್ಮ ಮಧ್ಯ ವಯಸ್ಸಿನಲ್ಲಿ ಎರಡು ಮಕ್ಕಳ ಕುಟುಂಬವನ್ನು ತಾತ್ಕಾಲಿಕವಾಗಿ ಬಿಟ್ಟಿರಬೇಕಾದ ಪರಿಸ್ಥಿತಿಯಲ್ಲಿ ಆಕ್ಸ್‌ಫರ್ಡ್ ಒಹಾಯೋ ವಿಶ್ವವಿದ್ಯಾನಿಲಯಕ್ಕೆ ತೆರಳುತ್ತಾರೆ. ಆರು ವರ್ಷಗಳಷ್ಟು ದೀರ್ಘ ಕಾಲ ಕುಟುಂಬದಿಂದ ದೂರ ಉಳಿಯಬೇಕಾಗುತ್ತದೆ. ವಿದೇಶ ವಾಸದ ಸಂದರ್ಭದಲ್ಲಿ ಉಂಟಾದ ಒಂಟಿತನ, ಮಾನಸಿಕ ಖಿನ್ನತೆ ಇವುಗಳ ಹಿನ್ನೆಲೆಯಲ್ಲಿ ತಮ್ಮನ್ನು ತಾವೇ ವಿಮರ್ಶೆಗೆ ಗುರಿಪಡಿಸಿಕೊಂಡಿದ್ದಾರೆ.

ವ್ಯಕ್ತಿಯೋರ್ವ ಅದಮ್ಯವಾದ ದೈಹಿಕ ಬಯಕೆಗಳನ್ನು ಹತ್ತಿಕ್ಕಲು ಯತ್ನಿಸುವ, ನೀತಿಯ ಚೌಕಟ್ಟಿನಲ್ಲಿ ನಿಲ್ಲಲು ಪ್ರಯತ್ನಿಸುವ, ಜಾರಲು ಬೇಕಾದಷ್ಟು ಸಂದರ್ಭಗಳು ಒದಗಿದರೂ ಹುಟ್ಟಿನಿಂದಲೇ ಪ್ರಾಪ್ತವಾದ ನೈತಿಕ ಶಿಸ್ತಿನಲ್ಲಿ ಜಾರದೇ ಉಳಿದುಕೊಂಡ ಆ ಸಂದರ್ಭದಲ್ಲಿ ಅವರ ಮನಸ್ಸಿನ ಒಳತೋಟಿಯನ್ನು ಚಿತ್ರಿಸಿರುವುದು ಕೃತಿಯ ಮೌಲ್ಯವನ್ನು ಹೆಚ್ಚಿಸಿದೆ. ವ್ಯಕ್ತಿ ಗುರಿಯನ್ನು ಸಾಧಿಸುವಲ್ಲಿ ಆರ್ಥಿಕವಾಗಿ, ಬೌಧಿಕವಾಗಿ, ನೈತಿಕವಾಗಿ ಎದುರಿಸಬೇಕಾದ ವಿರೋಧಗಳನ್ನು ಕೃತಿ ಬಿಚ್ಚಿಡುತ್ತದೆ. ಅವರೊಳಗಿನ ಒಳತೋಟಿಯನ್ನು ಬಿಚ್ಚಿಡದಿದ್ದರೆ, ಲೋಕಕ್ಕೆ ಅದು ತಿಳಿಯುವ ಅವಕಾಶವೇ ಇರುತ್ತಿರಲಿಲ್ಲ. ಇದರಿಂದ ಸಿ.ಎನ್.ಆರ್. ಬಿಚ್ಚುಮನದ ತಾಜಾ ವ್ಯಕ್ತಿಯಾಗಿ ಹೊರ ಹೊಮ್ಮಿದ್ದಾರೆ. ಅವರ ವ್ಯಕ್ತಿತ್ವ ಗಟ್ಟಿಗೊಂಡು ಲೋಕದೆದುರು ಆದರ್ಶಪ್ರಾಯವಾಗಿ ಎದ್ದು ನಿಂತಿದೆ.

ಸೌದಿ ಅರೇಬಿಯಾದಂತಹ ಮುಸ್ಲಿಂ ರಾಷ್ಟ್ರವು ಪಾಕಿಸ್ತಾನ, ಬಾಂಗ್ಲಾ, ಭಾರತ ಮುಂತಾದ ದೇಶಗಳ ಮುಸ್ಲಿಂರನ್ನು ತುಚ್ಛ ಭಾವನೆಯಿಂದಲೇ ಕಾಣುತ್ತದೆ ಎಂಬುದನ್ನು ತಮ್ಮ ಧರ್ಮ ಒಂದನ್ನು ಬಿಟ್ಟು ಉಳಿದ ಯಾವುದಕ್ಕೂ ಬೆಲೆ ಕೊಡದ ಆ ದೇಶದಲ್ಲಿ ದುಡ್ಡಿನ ಆಸೆಗಾಗಿ ಕೆಲಸಕ್ಕೆ ಸೇರಿಕೊಂಡ ಬೇರೆ ದೇಶದವರು ಎಷ್ಟು ಎಚ್ಚರಿಕೆಯಿಂದ ಬದುಕಬೇಕಾಗುತ್ತದೆ ಎಂಬುದನ್ನು ವಿವರಿಸಿದ್ದಾರೆ. ‘ಹೊಟ್ಟೆಗಿಲ್ಲದೆ ಇಲ್ಲಿಗೆ ಬರುವ ದರಿದ್ರ ನಾಯಿಗಳು, ಇಲ್ಲಿಯ ಪಾವಿತ್ರವನ್ನು ನಾಶ ಮಾಡುವ ಕಾಫ಼ಿರ್‌ಗಳು ಇದು ಧರ್ಮಾಂಧರ ಆಕ್ರೋಶದ ನುಡಿಗಳು.

ಆಕ್ಸ್‌ಫರ್ಡ್ ಒಹಾಯೋದಲ್ಲಿ ಕೈಗೊಂಡ ವಿದ್ಯಾಭ್ಯಾಸದ ದಿನಗಳನ್ನು ಸ್ವಾರಸ್ಯವಾಗಿ ಚಿತ್ರಿಸಿದ್ದಾರೆ. ಜೀವನ ನಿರ್ವಹಣೆಗಾಗಿ ಕೆಲಸ ಮಾಡುತ್ತಲೇ ತಮ್ಮ

ವ್ಯಾಸಂಗ, ಬರವಣಿಗೆಯನ್ನು ಮುಂದುವರೆಸುವ ಲೇಖಕರು ಅಲ್ಲಿಯ ವಿದ್ಯಾಭ್ಯಾಸದ ಕ್ರಮವನ್ನು ವಿದ್ಯಾರ್ಥಿ ಅಧ್ಯಾಪಕರ ಸಂಬಂಧವನ್ನು ವಿವರವಾಗಿಯೇ ಚಿತ್ರಿಸಿದ್ದಾರೆ.

ಇಡೀ ಕೃತಿಯಲ್ಲಿ ಪುಟ ಪುಟದಲ್ಲೂ ಲೇಖಕರ ತಳಮಳ, ಕೀಳರಿಮೆಯಿಂದ ಹೊರಬರಲು ಅವರು ನಡೆಸುವ ಪ್ರಯತ್ನಗಳು, ಮತ್ತೆ ಮತ್ತೆ ಕಳೆದುಕೊಳ್ಳುವ ಉತ್ಸಾಹ, ಖಿನ್ನತೆಯಿಂದ ಹೊರಬರಲು ಇಸ್ಪೀಟು, ಮಧ್ಯಪಾನ, ಸಿಗರೇಟು ಇತ್ಯಾದಿಗಳ ಮೊರೆ ಹೋಗುವ ಅವರ ದಿನಚರಿಗಳು ಓದುಗರಲ್ಲಿ ಸಹಾನುಭೂತಿಯನ್ನು ಹುಟ್ಟಿಸುತ್ತದೆ.

ಮಂಗಳೂರು ವಿಶ್ವವಿದ್ಯಾನಿಲಯದ, ಇಂಗ್ಲೀಷ್ ವಿಭಾಗದ ಮುಖ್ಯಸ್ಥರಾದ ಮೇಲೆ ಜೀವನಕ್ಕೆ ನೆಲೆಸಿಕ್ಕ ಶಾಂತಿ ಸಮಾಧಾನಗಳು ಲಭ್ಯವಾಗುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಇಬ್ಬರು ಮಕ್ಕಳ ತಂದೆಯಾಗಿ ಮಧ್ಯ ವಯಸ್ಸಿನ ವ್ಯಕ್ತಿ ಪತ್ನಿ–ಪುತ್ರರಿಗೆ ಸರಿಯಾದ ಆಶ್ರಯವನ್ನು ನೀಡದೆ, ಆರು ವರ್ಷಗಳಷ್ಟು ಕಾಲ ವಿದೇಶದಲ್ಲಿ ಪಿ.ಎಚ್.ಡಿಗಾಗಿ ಪ್ರಯತ್ನಿಸುವ ಚಿತ್ರ ವಿಕ್ಷಿಪ್ತ ಮನಸ್ಥಿತಿಯ ವ್ಯಕ್ತಿತ್ವವನ್ನು ತೋರಿಸುತ್ತದೆ. ಡಾಕ್ಟರೇಟ್ ಪದವಿ ಎನ್ನವುದೇ ಪರಮ ಧ್ಯೇಯವಾದ (ವಿದೇಶಿ ವಿಶ್ವವಿದ್ಯಾನಿಲಯದ) ವ್ಯಕ್ತಿಯೋರ್ವನ ಕಥೆ ಇದು. ಇದರಿಂದ ಅವರು ಸಾಧಿಸಿದ್ದು ಏನು, ಕಳೆದುಕೊಂಡದ್ದು ಏನು? ಇತ್ತ ಆರ್ಥಿಕವಾಗಿ ಸಬಲರಾಗದೆ, ಅತ್ತ ಪದವಿಯಿಂದ ಏಕಮೇವ ದ್ವಿತೀಯರಾಗದೆ, ಎಲ್ಲರಂತೆಯೇ ಸಿ.ಎನ್.ಆರ್. ಒಬ್ಬ ಸಾಮಾನ್ಯ ವ್ಯಕ್ತಿಯಾಗಿಯೇ ಉಳಿಯುತ್ತಾರೆ. ಮಂಗಳೂರು ವಿಶ್ವವಿದ್ಯಾನಿಲಯದ ಮುಖ್ಯಸ್ಥರಾದ ಮೇಲೆ ವಿವೇಕ ರೈ ಮತ್ತು ಶ್ರೀನಿವಾಸ ಹಾವನೂರ್ ಅವರ ಬೆಂಬಲದಲ್ಲಿ ತಮ್ಮಲ್ಲಿದ್ದ ವಿಮರ್ಶಕನನ್ನು ಗುರುತಿಸಿಕೊಳ್ಳುತ್ತಾರೆ. ಮುಂದಿನ ಅವರ ಜೀವನ ತೃಪ್ತಿದಾಯಕವಾದದ್ದು. ನಾಡಿನ ಹಿರಿಯ ವಿಮರ್ಶಕರಲ್ಲಿ ಒಬ್ಬರೆಂದು ಅವರ ವ್ಯಕ್ತಿತ್ವ ಘನತೆಯನ್ನು ಪಡೆಯುತ್ತದೆ. (ವಿದೇಶಿ ಡಿಗ್ರಿಯಿಂದಲ್ಲ)

ಪು.ತಿ.ನ ಅವರಿಗೆ ಏಕೆ ಜ್ಞಾನಪೀಠ ಪ್ರಶಸ್ತಿ ದೊರೆಯಲಿಲ್ಲ ಎಂಬ ಕನ್ನಡಿಗರ ನೋವಿಗೆ ಗ್ರಂಥದ ಕಡೆಯ ಭಾಗದಲ್ಲಿ ಒಂದು ಸಮಜಾಯಿಷಿ ದೊರೆಯುತ್ತದೆ. ಗಿರಡ್ಡಿ, ಸಿ.ಎನ್.ಆರ್.,ಬಿ.ವಿ.ಅಶೋಕ ಅವರ ಸಮಿತಿ ಪು.ತಿ.ನ ಅವರ ಸಾಹಿತಿಕ ಸಾಧನೆಯನ್ನು ಪೀಠದ ಆಯ್ಕೆ ಸಮಿತಿಗೆ ಮನದಟ್ಟು ಮಾಡಿಕೊಡುವಲ್ಲಿ ಸೋತ ಹಿನ್ನೆಲೆಯಲ್ಲಿ ಪಟ್ಟಿಯಲ್ಲಿ ಎರಡನೇ ಹೆಸರಾಗಿದ್ದ ಅನಂತಮೂರ್ತಿಯವರಿಗೆ ದೊರೆಯುವಂತಾದ ಪ್ರಸಂಗವನ್ನು ಪ್ರಸ್ತಾಪಿಸಿದ್ದಾರೆ. ಒಟ್ಟಿನಲ್ಲಿ 'ನೆರಳುಗಳ ಬೆನ್ನು ಹತ್ತಿ' ಪರಿಣತ ಮನಸ್ಸಿನ ಪರಿಣತ ಬರಹ.

* * *

ಪರಿಸರ ವಿನಾಶರಹಿತ ಸರ್ವಹಿತ ಅರ್ಥಶಾಸ್ತ್ರ

- ಭರತ್ ಡೋಗ್ರ

ಅಗಾಧವಾಗಿ ಬೆಳೆಯುತ್ತಿರುವ ಬಡತನದೊಂದಿಗೆ ಅವ್ಯಾಹತವಾಗಿ ನಡೆಯುತ್ತಿರುವ ಪರಿಸರ ವಿನಾಶದ ಪ್ರಚಲಿತ ಅರ್ಥವ್ಯವಸ್ಥೆಗೆ ಪರ್ಯಾಯವಾದ ಅರ್ಥನೀತಿಯನ್ನು ರೂಪಿಸುವುದು ನಮ್ಮ ಕಾಲದ ತುರ್ತು ಅಗತ್ಯ.

ಎಲ್ಲ ಕುಟುಂಬಗಳು ಒಂದು ಮೂಲಭೂತ ಹಕ್ಕನ್ನು ಹೊಂದಿರುವಂತೆಯೇ ಮೂಲಭೂತ ಕರ್ತವ್ಯವನ್ನು ಹೊಂದಿರುವಂತೆ ಒತ್ತಾಯಿಸಬೇಕಿದೆ.

ಎಲ್ಲ ಕುಟುಂಬಗಳ ಮೂಲಭೂತ ಅಗತ್ಯಗಳನ್ನು ಪೂರೈಸಲೇಬೇಕು. ಬೇರೆ ಮಾತುಗಳಲ್ಲಿ ಹೇಳುವುದಾದರೆ ಪ್ರತಿಯೊಬ್ಬರು ಕುಡಿಯುವುದಕ್ಕೆ ಸ್ವಚ್ಛವಾದ ನೀರನ್ನು ಪಡೆಯಬೇಕು, ಸಾಕಷ್ಟು ಆರೋಗ್ಯದಾಯಕ, ಪೌಷ್ಟಿಕ ಆಹಾರ ಪಡೆಯಬೇಕು, ಮೂಲಭೂತ ಆರೋಗ್ಯ ಮತ್ತು ಶಿಕ್ಷಣ ಸಿಗುವಂತಾಗಬೇಕು ಮತ್ತು ಎಲ್ಲ ಪ್ರಕಾರದ ಹವಾಮಾನಗಳಿಂದ ರಕ್ಷಣೆಯಾಗುವಂತಹ ಬಟ್ಟೆ ಬರೆ ಹಾಗೂ ಮನೆ ದೊರೆಯಬೇಕು.

ಈ ಎಲ್ಲ ಮೂಲಭೂತ ಅಗತ್ಯಗಳನ್ನು ಪೂರೈಸಿಕೊಳ್ಳಲು ಅದರ ಆರೋಗ್ಯ ಕೆಡುವಂಥ ರೀತಿಯಲ್ಲಿ ಶ್ರಮ ಮಾಡಲು ಬಲವಂತ ಮಾಡಬಾರದು.

ಮೇಲ್ಕಾಣಿಸಿದ ಈ ಎಲ್ಲ ಮೂಲಭೂತ ಅಗತ್ಯಗಳನ್ನು ಪೂರೈಸಿಕೊಂಡಾದ ಮೇಲೆ ಪ್ರತಿಯೊಂದು ಕುಟುಂಬವು ಸುಖಜೀವನಕ್ಕೆ ಅಗತ್ಯವಾಗಬಹುದಾದ ಸಣ್ಣ ಪುಟ್ಟ ಮತ್ತು ದುಬಾರಿಯಲ್ಲದ ಪದಾರ್ಥಗಳನ್ನು ಖರೀದಿಸಿ ತನ್ನ ಜೀವನಕ್ಕೆ ನೆಮ್ಮದಿ ಮತ್ತು ಸೊಗಸನ್ನು ತರಲು ಸ್ವತಂತ್ರವಿರಬೇಕು.

ಸಾಮಾಜಿಕವಾಗಿ ಅಪಾಯವಾಗದ ತೀರ ಅಗತ್ಯವಾದ ವಿಶೇಷ ಅಗತ್ಯಗಳನ್ನೂ ಕೂಡ ಪೂರೈಸಿಕೊಳ್ಳಲು ಸ್ವತಂತ್ರವಿರಬೇಕು.

ಜೀವನದ ಅಗತ್ಯವಾದ ಬೇಡಿಕೆಗಳನ್ನು ಪೂರೈಸಿಕೊಂಡಾದ ಮೇಲೆ ಕುಟುಂಬವು ಸ್ವಯಂ ಪ್ರೇರಿತವಾಗಿ ಮತ್ತು ಸಂತೋಷ ಪೂರ್ವಕವಾಗಿ ಹೆಚ್ಚು ಹೆಚ್ಚು ಆಸೆ ಪಡುವುದನ್ನು ನಿಲ್ಲಿಸಬೇಕು.

ವಿಶೇಷವಾಗಿ ಯಾವ ವಸ್ತುಗಳು ವ್ಯಕ್ತಿಗತ ಮತ್ತು ಸಾಮಾಜಿಕ ಆರೋಗ್ಯ ಹಾಗೂ ಪರಿಸರವನ್ನು ಹಾಳು ಮಾಡುತ್ತದೊ ಅಂತಹವುಗಳನ್ನು ಖರೀದಿಸಕೂಡದು.

ಜೀವನದ ಮೂಲಭೂತ ಅಗತ್ಯ ಪೂರೈಸಿಕೊಂಡಾದ ಮೇಲೆ ಕುಟುಂಬಕ್ಕೆ ಉಳಿಯಬಹುದಾದ ಆದಾಯ ಮತ್ತು ಶ್ರೀಮಂತಿಕೆಯನ್ನು ಸ್ವಯಂ ಪ್ರೇರಣೆಯಿಂದ ಮತ್ತು ಸಂತೋಷದಿಂದ ಇದರ ಹೆಚ್ಚು ಅಗತ್ಯವಿರುವ ಜನರಿಗಾಗಿ ಅಥವಾ ಪ್ರಾಮಾಣಿಕವಾಗಿ ಇದೆಲ್ಲವನ್ನೂ ಉಪಯೋಗಿಸಲು ಸಾಧ್ಯವಾಗುವುದಾದರೆ

ಅದನ್ನು ಒರ್ವ ಧರ್ಮದರ್ಶಿಗಾಗಿ ಸಮಾಜದ ದುರ್ಬಲ ವರ್ಗಗಳಿಗೋಸ್ಕರ ಅಥವಾ ಅಂಥದೇ ಕೆಲಸ ಕಾರ್ಯಗಳಿಗಾಗಿ ಅಥವಾ ಪರಿಸರದ ರಕ್ಷಣೆಗಾಗಿ, ಪ್ರಾಣಿಗಳ ದಯೆಗಾಗಿ ಉಪಯೋಗಿಸಬಹುದು.

ಸುವ್ಯವಸ್ಥಿತ ಅರ್ಥನೀತಿಯ ಅಡಿಪಾಯ ಹಾಕಲು ಈ ಮೌಲ್ಯಾಧಾರಿತ ಪದ್ಧತಿಯನ್ನು ಎಷ್ಟು ಸಾಧ್ಯವೋ ಅಷ್ಟು ವ್ಯಾಪಕವಾಗಿ ಜನರಲ್ಲಿ ಪಸರಿಸಬೇಕು.

ಹೆಚ್ಚಾಗಿರುವ ಶ್ರೀಮಂತಿಕೆಯನ್ನು ಸ್ವಯಂ ಪ್ರೇರಣೆಯಿಂದ ಸಾಮಾಜಿಕ ಹಿತ ಕಾರ್ಯಕ್ರಮಗಳಿಗಾಗಿ ವಿನಿಯೋಗಿಸಬೇಕೆಂದು ಹೇಳಿದರೆ ಸರ್ಕಾರ ಕಪ್ಪುಹಣದ ವ್ಯವಹಾರದ ಮೇಲೆ ನಿಯಂತ್ರಣವಿಡುವ ತನ್ನ ಜವಾಬ್ದಾರಿಯಿಂದ ದೂರ ಸರಿಯಬೇಕೆಂದು ಅರ್ಥವಲ್ಲ. ಸರ್ಕಾರದ ಈ ಅಧಿಕಾರವನ್ನು ಒಪ್ಪುತ್ತಲೇ ಸ್ವಯಂ ಸ್ಫೂರ್ತಿಯ ತ್ಯಾಗದ ಅಗತ್ಯವನ್ನು ಒತ್ತಿ ಹೇಳಬೇಕು. ಅದರಿಂದಾಗಿ ಸಮಾಜದಲ್ಲಿ ವ್ಯಾಪಕವಾಗಿ ಈ ಮೌಲ್ಯವು ಸ್ಥಾಪಿತಗೊಳ್ಳುವುದು.

ಈ ಮೌಲ್ಯಗಳ ಪ್ರಕಾರ ವಸ್ತುಸ್ಥಿತಿಗಳ ಮೇಲೆ ಮತ್ತು ತರ್ಕಬದ್ಧವಾಗಿರಬೇಕೆ ಹೊರತು ಮಂತ್ರಜಾಲವಾಗಿ ಮತ್ತು ಒಂದು ಮೂಢ ತತ್ವವಾಗಿ ಇರಕೂಡದು. ಪರಿಸರವನ್ನು ಉಳಿಸುವುದಕ್ಕಾಗಿ ನಮ್ಮ ಬೇಡಿಕೆಗಳನ್ನು ಒಂದು ಮಿತಿಯಲ್ಲಿ ಇರಿಸಬೇಕಾದುದು ಅಗತ್ಯ. ನಮ್ಮ ಮಕ್ಕಳಿಗಾಗಿ, ಮೊಮ್ಮಕ್ಕಳಿಗಾಗಿ ನಾವು ಕೊಡಬಹುದಾದ ಉತ್ತಮವಾದ ಕಾಣಿಕೆ ಏನೆಂದರೆ ಸ್ವಚ್ಛ ಮತ್ತು ಸುರಕ್ಷಿತ ಪರಿಸರ. ಜನಸಾಮಾನ್ಯರ ಮನಸ್ಸನ್ನು ತಟ್ಟಬಹುದಾದ ಈ ವಿಷಯಗಳಿಗೆ ಒತ್ತು ಕೊಡುವುದು ಅಗತ್ಯ. ಪದಾರ್ಥಗಳನ್ನು ಕಡಿಮೆ ಉಪಯೋಗಿಸಿ ಎಂದು ಜನರಿಗೆ ಮನವರಿಕೆ ಮಾಡಿಕೊಡುವುದು ಕಷ್ಟವೆಂದು ಸಾಮಾನ್ಯವಾಗಿ ತಿಳಿಯಲಾಗುತ್ತದೆ. ಅನೇಕ ಜನರಲ್ಲಿ ಸರಳವಾದ ಜೀವನ ನಡೆಸುವುದರ ಬಗ್ಗೆ, ಉಪಭೋಗ ಜೀವನ ಶೈಲಿಯ ಬಗ್ಗೆ ಇರುವ ತಾತ್ಸಾರವನ್ನು ಸಾಮಾನ್ಯವಾಗಿ ಪೂರ್ಣತಃ ಉಪೇಕ್ಷಿಸಲಾಗುತ್ತದೆ. ೧೯೯೬ರ ಆಗಸ್ಟ ೧೩ರರ Times Of India ದಲ್ಲಿ ಒಂದು ವರದಿ ಪ್ರಕಟವಾಗಿತ್ತು. ಅದರ ಪ್ರಕಾರ ಅಮೇರಿಕಾ ದೇಶದಲ್ಲಿ ಉಪಭೋಗ ವೃತ್ತಿಯ ಪರಾಕಾಷ್ಠತೆಯ ಕ್ಷೇತ್ರದಲ್ಲಿ ಕೂಡ ಅನೇಕ ಜನರು ಉಪಭೋಗ ವೃತ್ತಿಯ ಮೌಲ್ಯಗಳನ್ನು ಪ್ರಶ್ನಿಸುತ್ತಿದ್ದಾರೆ. ಕಳೆದ ಬೇಸಿಗೆಯಲ್ಲಿ "ಮರ್ಕ್ ಫ್ಯಾಮಿಲಿ ಫಂಡ್" ಎಂಬ ಸಂಸ್ಥೆಯು ಉಪಭೋಗ ಸಂಸ್ಕೃತಿ, ಭೌತಿಕತೆ ಮತ್ತು ಪರಿಸರದ ಬಗ್ಗೆ ಜನಾಭಿಪ್ರಾಯ ಸಂಗ್ರಹಿಸಲು ದೇಶಾದ್ಯಂತ ಸಮೀಕ್ಷೆಯೊಂದನ್ನು ನಡೆಸಿತು. ಆರ್ಥಿಕ ಭದ್ರತೆ ಮತ್ತು ವೃತ್ತಿ ಯಶಸ್ಸು ಈ ಮುಂತಾದವುಗಳ ಬಗ್ಗೆ ಬಹಳ ಕಾಲದಿಂದ ಹುದುಗಿಕೊಂಡಿದ್ದ ಮೌಲ್ಯಗಳನ್ನು ಅಮೇರಿಕನ್ನರು ಪ್ರಶ್ನಿಸುತ್ತಿದ್ದಾರೆ ಎಂಬುದನ್ನು ಕಂಡುಹಿಡಿಯಿತು. ೯೧%ರಷ್ಟು ಸಂದರ್ಶಿಸಲ್ಪಟ್ಟ ಜನರು ಹೇಳಿದ್ದೇನೆಂದರೆ 'ಈಗ ಖರೀದಿಸಿ, ನಂತರ ಹಣ ಕೊಡಿ' ಎಂಬ ಮನೋಧರ್ಮ ನಾವು ನಮಗಾಗಿ ಅಗತ್ಯವಿರುವುದಕ್ಕಿಂತ ಹೆಚ್ಚಾಗಿ ಉಪಭೋಗಿಸುವಂತೆ ಮಡುತ್ತದೆ". ಇಲ್ಲಿ ಗಮನಿಸಬೇಕಾದ ವಿಶೇಷ ಸಂಗತಿ ಏನೆಂದರೆ ಕಳೆದ ಐದು ವರ್ಷಗಳಲ್ಲಿ ಕಡಿಮೆ ಹಣ ಸಂಪಾದಿಸಲು ಕ್ರಮ ಕೈಗೊಂಡಿದ್ದೀರಿ ಎಂದು ಕೇಳಲಾಗಿ ೨೮%ರಷ್ಟು ಜನರು ಹೌದು ಎಂದು ಹೇಳಿದರು. ಈ ಒಂದು ಹೊಸ ಸಂಗತಿ ತಿಳಿದು ನಮಗೆ ಆಘಾತವಾಯಿತೆಂದು ಮರ್ಕ್ ಫ್ಯಾಮಿಲಿ

ಫಂಡ್‌ನ ಕಾರ್ಯನಿರ್ವಹಣಾ ನಿರ್ದೇಶಕ ಬೆಟ್‌ಸೀ ಟೇಲರ್ ಹೇಳುತ್ತಾರೆ.

ಸಮೀಕ್ಷೆಗೆ ಗುರಿಮಾಡಲಾಗಿದ್ದ ಜನಸಮೂಹ ತಮ್ಮ ಜೀವನವನ್ನು ಸರಳಗೊಳಿಸಿಕೊಳ್ಳುವ ಬಗ್ಗೆ ಹಪಹಪಿಸುತ್ತಿದ್ದರು. ಒಮ್ಮೆ ಮಾತನಾಡಲು ಪ್ರಾರಂಭಿಸಿದರೆ ಅನೇಕರು ಮಾತು ನಿಲ್ಲಿಸಲು ಸಿದ್ಧರಿರಲಿಲ್ಲ. ಇದಕ್ಕೆ ಅವರು ಕೊಟ್ಟ ಮೊದಲನೆಯ ಕಾರಣವೇನೆಂದರೇ ಸಮತೋಲಿತ ಜೀವನ ಸಾಗಿಸಬೇಕೆಂಬ ತಮ್ಮ ಇಚ್ಛೆ ಎಂದು ಹೇಳಿದರು.

೧೯೭೦ರ ದಶಕಗಳ ಪ್ರಾರಂಭದಲ್ಲಿ ಬ್ರಿಟೀಷ್ ಸಾಮಾಜಿಕ ಸಂಶೋಧನ ಸಮಿತಿ ನಡೆಸಿದ ಸಮೀಕ್ಷೆಯ ಪ್ರಕಾರ ಜನರು ತಾವು ಸಕಾರಣವಾಗಿ ಉಪಯೋಗಿಸುತ್ತಿದ್ದ ಉಪಭೋಗ ವಸ್ತುಗಳಿಗಿಂತ ಸುಖಕರ ಗೃಹ ಜೀವನ ಮತ್ತು ಸಂತೃಪ್ತ ಮನೋಸ್ಥಿತಿ ಹೆಚ್ಚು ಮಹತ್ವದ್ದೆಂದು ಹೇಳಿದರು.

೧೯೯೫ರ ಅಕ್ಟೋಬರ್ ೨೬ರ The Daily Telegraph ಪತ್ರಿಕೆಯಲ್ಲಿ ಒಂದು ಲೇಖನದಲ್ಲಿ ನಿಕೋಲಾ ಟೀರರ್ ಬರೆಯುತ್ತಾರೆ "ಎರಡು ಮಹಾನ್ ಯುದ್ಧಗಳ ಕಾಲದ ತಲೆಮಾರಿನ ಮಕ್ಕಳಲ್ಲಿ ಬದುಕಿನ ಭಾರವನ್ನು ಕಡಿಮೆಗೊಳಿಸುತ್ತವೆಂದು ಹೇಳಿಕೊಳ್ಳುವ ಅನೇಕ ಸಂಶೋಧನೆಗಳು ತೋರುವಂತೆ ಉಪಯೋಗಕಾರಿಯಾಗಿಲ್ಲ. ಬದಲಿಗೆ ಅವು ನಮ್ಮ ಕಾರ್ಯಭಾರವನ್ನು ಹೆಚ್ಚಿಸಬಹುದು ಅಥವಾ ತಾವು ಹೃದಯಕ್ಕೆ ಹತ್ತಿರವಾಗಿರುವ ಪದಾರ್ಥಗಳನ್ನು ನಾಶ ಮಾಡುತ್ತವೆ. ಉದಾಹರಣೆಗೆ ವಾಷಿಂಗ್‌ಮೆಷಿನನ್ನೆ ತೆಗೆದುಕೊಳ್ಳಿ. ಇಂಗ್ಲೆಂಡಿನ ಹತ್ತು ಮನೆಗಳಲ್ಲಿ ಎಂಟು ಮನೆಗಳು ಈ ಯಂತ್ರವನ್ನು ಹೊಂದಿರುತ್ತವೆ. ಫ್ಯಾಷನ್ನಿಗೆ ತುತ್ತಾದ ಮಕ್ಕಳು ಸ್ವಚ್ಛವಾಗಿರುವ ಬಟ್ಟೆಯನ್ನು ಇನ್ನೊಂದು ಸ್ವಚ್ಛಬಟ್ಟೆ ಹಾಕಿಕೊಳ್ಳುವುದರಿಂದ ಗೃಹಿಣಿಯರು ಎಷ್ಟೊಂದು ಬಾರಿ ಪ್ರತಿದಿನ ಯಂತ್ರದೊಳಗೆ ನೀರು ತುಂಬಿ ನಂತರ ಅದನ್ನು ಖಾಲಿ ಮಾಡಬೇಕಗುತ್ತದೆಂಬುದನ್ನು ಊಹಿಸಿ. ಯಂತ್ರದಲ್ಲಿಯ ಕೊಳೆ ನೀರನ್ನು ಖಾಲಿಮಾಡುವ ಕೆಲಸ ಹೆಚ್ಚಾಗಿ ಗೃಹಿಣಿಯ ಮೇಲೆಯೇ ಬೀಳುತ್ತದೆ. ೫೦ ವರ್ಷಗಳ ಹಿಂದೆ ಬಟ್ಟೆ ಒಗೆಯುವ ಕೆಲಸದಲ್ಲಿ ಕುಟುಂಬದ ಎಲ್ಲ ಸದಸ್ಯರೂ ಭಾಗಿಯಾಗುತ್ತಿದ್ದರು. ಈ ಮಧ್ಯೆ ಟೀವಿ ಮತ್ತು ಇತರ ವಿದ್ಯುನ್ಮಾನ ವಸ್ತುಗಳು ಅನೇಕ ಮನೆಗಳಲ್ಲಿ ಪ್ರವೇಶಿಸಿವೆ. ಅವು ಕುಟುಂಬದ ಸದಸ್ಯರೆಲ್ಲರೂ ಒಟ್ಟು ಸೇರಿ ಊಟ ಮಾಡುವುದನ್ನು ತಪ್ಪಿಸಿದೆ. ಏಕೆಂದರೆ ಪ್ರತಿಯೊಬ್ಬ ಸದಸ್ಯ ತನಗಿಷ್ಟ ಬಂದಾಗ ಊಟಮಾಡುತ್ತಾನೆ ತಮ್ಮ ತಮ್ಮ ಕೋಣೆಗಳಲ್ಲಿ ದೂರದರ್ಶನ ಮತ್ತು ಸ್ವಂತ ಕಂಪ್ಯೂಟರ್‌ಗಳನ್ನು ಹೊಂದಿರುವ ಮಕ್ಕಳು ತಮ್ಮ ಏಕಾಂತದ ಕಾರಣದಿಂದಾಗಿ ಸಹನೆ ಮತ್ತು ಆಟದ ವಿಷಯಕ್ಕೆ ಬೇಕಾದ ಮಹತ್ವದ ಪಾಠಗಳನ್ನು ಬಹುಶಃ ಕಳೆದುಕೊಳ್ಳುತ್ತಾರೆ.

ಆ ಡೈಲಿ ಟೆಲಿಗ್ರಾಫ್‌ದಲ್ಲಿಯ ಲೇಖನ ಒಂದು ಉದಾಹರಣೆ ಕೊಡುತ್ತದೆ. ಆರು ಜನ ಸದಸ್ಯರುಳ್ಳ ಇಂಗ್ಲೀಷ್ ಕುಟುಂಬ ಒಂಭತ್ತು ಟೀವಿ ಸೆಟ್‌ಗಳನ್ನು ಹೊಂದಿರುತ್ತದೆ. ಮೂರು ದಿನಗಳ ಕಾಲ ಎಲ್ಲ ಟೀವಿಗಳನ್ನು ಆರಿಸಿಬಿಡಬೇಕೆಂದು ಆ ಕುಟುಂಬಕ್ಕೆ ಹೇಳಲಾಯಿತು. ಆ ಕುಟುಂಬದ ಹದಿನೇಳು ವರ್ಷದ ಬಾಲಕ ಈ ಸಲಹೆಯನ್ನು ಕೇಳಿ ಗಾಬರಿಗೊಂಡ ಮತ್ತು ಈ ಪ್ರಯೋಗದಲ್ಲಿ ಪಾಲ್ಗೊಳ್ಳಲು

ನಿರಾಕರಿಸಿದ. ಆದರೆ ಇನ್ನು ಉಳಿದ ಮೂರು ಮಕ್ಕಳಲ್ಲಿ ಸನ್ನಡತೆಯ ಲಕ್ಷಣಗಳು ಕಂಡು ಬಂದವು. ಅಲ್ಪ ವಿಷಯಕ್ಕೆ ಜಗಳಾಡುವುದಕ್ಕಿಂತ ಹೊರಗೆ ಹೋಗಿ ಜೊತೆ ಸೇರಿ ಆಡುವುದನ್ನು ಇಷ್ಟಪಟ್ಟಂತೆ ಕಂಡಿತು. ಆದರೂ ತಾವು ಏನೋ ಕಳೆದುಕೊಂಡಂತೆ ಅವರಿಗೆ ಅನಿಸುತ್ತಿತ್ತು. ಆ ಮಕ್ಕಳ ತಾಯಿ ಕರೋಲ್ ಆಗ ಹೇಳಿದ್ದೇನೆಂದರೆ ಯಾವೆಲ್ಲ ಗೃಹಕೃತ್ಯಗಳನ್ನು ಸುಮ್ಮನೆ ಮುಂದೂಡುತ್ತಾ ಬಂದಿದ್ದೇವೊ ಅವನ್ನೆಲ್ಲಾ ಈ ಸಂದರ್ಭದಲ್ಲಿ ಮಾಡಿದೆವು. ಮೋಟಾರ್ ಬೈಕ್‌ಗಳನ್ನು ರಿಪೇರಿ ಮಾಡಿಸಿದೆವು, ಪುಸ್ತಕಗಳನ್ನು ಇಟ್ಟಿದ್ದ ಹಲಿಗೆಗಳನ್ನು ಸ್ವಚ್ಛಮಾಡಿದೆವು, ಕೋಣೆಗಳನ್ನು ಸ್ವಚ್ಛಗೊಳಿಸಿದೆವು. ತನಿಯ ಮತ್ತು ಆಸ್ಲಿ ಒಟ್ಟಿಗೆ ಸೇರಿ ಆಟವಾಡಲು ಪ್ರಾರಂಭಿಸಿದರು. ಕಥೆ ಪುಸ್ತಕಗಳನ್ನು ಓದಿದರು. ಅವರ ತಂದೆ ಡೇವಿಡ್ ಮನೆಯಲ್ಲಿ ಉಂಟಾದ ಶಾಂತಿಯಿಂದ ಪ್ರಭಾವಿತರಾದರು. ತಮ್ಮ ಮನೋರಂಜನೆಯ ಮಾರ್ಗಗಳನ್ನು ತಾವೇ ಕಂಡುಕೊಳ್ಳುವುದು ಮಕ್ಕಳಿಗೆ ಒಳ್ಳೆಯದಾಯಿತು. ಒಂದು ವೇಳೆ ನನ್ನನ್ನು ಅಪರಾಧಿಯನ್ನಾಗಿ ಮಾಡದೇ ಹೋದರೆ ಈ ಎಲ್ಲ ಟೀವಿಗಳನ್ನು ಎಸೆದು ಬಿಡುವೆ ಎಂದರು.

ಇಂಥ ಉದಾಹರಣೆಗಳು ಹೇಳುವುದೇನೆಂದರೆ, ಸಾಕಷ್ಟು ಪ್ರಯತ್ನ ಮಾಡಿದಲ್ಲಿ ತಮ್ಮ ಉಪಭೋಗತನವನ್ನು ಸ್ವಯಂ ಪ್ರೇರಣೆಯಿಂದ ಕಡಿಮೆ ಮಾಡಬಹುದೆಂದು ಅನೇಕರ ಮನ ಒಲಿಸಲು ಸಾಧ್ಯವಿದೆ. ಚುನಾವಣೆಯಲ್ಲಿ ಸೋಲಬೇಕೆಂದರೆ ಜೀವನ ಪದ್ಧತಿಯ ಬದಲಾವಣೆಯ ಬಗ್ಗೆ ಮಾತನಾಡುವುದು, ಅಸಂಗ್ರಹ ವೃತ್ತಿಯನ್ನು ಅನುಸರಿಸುವುದು, ಜೀವನ ಮಟ್ಟವನ್ನು ಇಳಿಸುವುದು ಮುಂತಾದ ಮಾತುಗಳನ್ನಾಡಿದರೆ ಸಾಕು ಎಂಬುದಾಗಿ ಪಶ್ಚಿಮ ದೇಶಗಳಲ್ಲಿಯ ರಾಜಕಾರಣಿಗಳು ತಿಳಿಯುತ್ತಾರೆ. ಆದರೆ ಈ ತಿಳುವಳಿಕೆ ತಪ್ಪೆಂದು ನಾನು ಭಾವಿಸುತ್ತೇನೆ ಎಂಬುದಾಗಿ ಓರೆನ್ ಸಿ ಬ್ರೂಕ್ ಹೇಳುತ್ತಾರೆ. ಅವರು ಮುಂದುವರೆದು ಹೇಳುವುದೇನೆಂದರೆ ನಮ್ಮ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಹಣ ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ಮಾನವ ಸಂಪನ್ಮೂಲ ಮತ್ತು ಈ ಸರಳ ಪಾಠವನ್ನು ಪಶ್ಚಿಮದವರು ಕಲಿಯಬೇಕು. ಅದರಿಂದಾಗಿ ಪ್ರತಿಯೊಂದರ ಬೆಲೆ ಗೊತ್ತಾಗುವುದು. ಹಾಗೂ ಅಸಂಗ್ರಹದ ನಿಜವಾದ ಬೆಲೆಯನ್ನು ತಿಳಿಯುವುದು. ಪಶ್ಚಿಮದಲ್ಲಿರುವ ಜನರನ್ನು ಈ ಸತ್ಯದ ಬಗ್ಗೆ ಎಚ್ಚರಿಸಿದರೆ ಅವರು ಎಷ್ಟೊಂದು ಅದ್ಭುತ ರೀತಿಯಲ್ಲಿ ತಮ್ಮ ಉಪಭೋಗ ಪ್ರವೃತ್ತಿಯಿಂದ ಬಿಡುಗಡೆ ಹೊಂದುವರೆಂಬುದನ್ನು ಊಹಿಸಿಕೊಳ್ಳಿ. ಒಂದು ಸಲ ಇದು ನೆರವೇರಿತೆಂದರೆ ಅವರು ಉದಾರಿಗಳಾಗಿ ಜಗತ್ತಿನ ಬಡ ಜನರೊಂದಿಗೆ ಪಾಲ್ಗೊಳ್ಳುವರು.

(ಸಾಭಾರ : ಜನತಾ; ಅನು : ಸುಕೌ)

* * *

ಗಾಂಧೀಜಿ ಮತ್ತು ಶಾಂತಿ

– ಸುರೇಂದ್ರ ಕೌಲಗಿ

ಪ್ರಸ್ತುತ ಲೋಕಸಭಾ ಚುನಾಚಣೆಯಲ್ಲಿ ಪ್ರತಿನಿಧಿಯ ಆಯ್ಕೆ ತುಂಬಾ ಸಂಕೀರ್ಣವಾಗಿದೆ. ಎಂಥಾ ರಾಜಕೀಯ ವಿಶ್ಲೇಷಕರಿಗೂ, ರಾಜ್ಯಶಾಸ್ತ್ರಜ್ಞರಿಗೂ ಸವಾಲನ್ನೆಸೆಯುವ ಚುನಾವಣೆ ಇದಾಗಿದೆ. ಇದುವರೆಗಿನ ಎಲ್ಲ ಲೋಕಸಭಾ ಚುನಾವಣೆಗಳಿಗಿಂತ ೨೦೧೪ರ ಲೋಕಸಭಾ ಚುನಾವಣೆ ಪ್ರಜ್ಞಾವಂತ ಮತದಾರರಿಗೆ ಆಯ್ಕೆಯ ವಿಷಯದಲ್ಲಿ ಸವಾಲನ್ನೆಸೆಯುವಂಥ ಚುನಾವಣೆಯಾಗಿದೆ. ಕಾರಣ ಮತದಾರರ ಮುಂದೆ ಪ್ರಮುಖ ರಾಜಕೀಯ ಪಕ್ಷಗಳ ಸ್ಪಷ್ಟ ಧೋರಣೆಗಳು ಮಂಡಿತವಾಗದೇ ಇರುವುದು. ಕಳೆದ ೧೦ ವರ್ಷಗಳ ಯು.ಪಿ.ಯೆ ಆಡಳಿತದ ಕಹಿ ಸಿಹಿ ಅನುಭವಗಳು ಆ ಪಕ್ಷದ ಮುಂದಿನ ಕಾರ್ಯಕ್ರಮಗಳನ್ನು ಅರ್ಥೈಸಿಕೊಳ್ಳಲು ಸಾಕಾಗುವುದಿಲ್ಲ. ಮುಂದಿನ ಐದು ವರ್ಷಗಳಲ್ಲಿ ಹಳೆಯ ಧೋರಣೆಯನ್ನೇ ಅನುಸರಿಸುತ್ತದೆ ಎಂದು ಹೇಳಲಾಗುವುದಿಲ್ಲ. ಯು.ಪಿ.ಯೆ ಸರ್ಕಾರದ ಆಡಳಿತ ಮುಗಿದು ಚುನಾವಣೆಯ ಫಲಿತಾಂಶ ಬರುವ ವೇಳೆಗೆ ಮೊದಲಿದ್ದ ಅದರ ವಿಚಾರಗಳು ಸಾಕಷ್ಟು ಬದಲಾಗಿರಲು ಸಾಧ್ಯ. ಚುನಾವಣೆಯ ಕಾವಿನಲ್ಲಿ ಬೆಂದ ಅದು ಮೊದಲಿನಂತೆಯೇ ಇರಲು ಸಾಧ್ಯವಾಗಲಾರದು. ಇದುವರೆಗಿನ ತನ್ನ ಅನುಭವದ ಬೆಳಕಿನಲ್ಲಿ ಅದು ಕೈಗೊಳ್ಳಬಹುದಾದ ಆಡಳಿತಾತ್ಮಕ ತೀರ್ಮಾನಗಳು ಮೊದಲಿನಂತಿರಲು ಸಾಧ್ಯವಿಲ್ಲ. ಪರಿಸ್ಥಿತಿ ಹೀಗಿರುವಾಗ ಯು.ಪಿ.ಯೆ ಪಕ್ಷದ ಹಳೆಯ ಧೋರಣೆ ಮತ್ತು ಕಾರ್ಯ ಪದ್ಧತಿಯನ್ನು ನೋಡಿ ಕಾಂಗ್ರೆಸ್ ಪಕ್ಷಕ್ಕೆ ಮತ ಹಾಕುವುದು ಎಷ್ಟೊಂದು ಸಮಂಜಸ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಆ ಪಕ್ಷದ ನಾಯಕತ್ವದಲ್ಲಿಯೂ ಕೂಡ ದೊಡ್ಡ ಬದಲಾವಣೆಯಾಗಲಿರುವುದರಿಂದ ಆ ಪಕ್ಷ ತನ್ನ ಮೊದಲಿನ ಧೋರಣೆಯನ್ನೇ ಮುಂದುವರಿಸುತ್ತದೆಂದು ಹೇಳಲು ಸಾಧ್ಯವಿಲ್ಲ. ಆದ್ದರಿಂದ ಕಾಂಗ್ರೆಸ್ ಪಕ್ಷಕ್ಕೆ ಮತಕೊಡುವುದೆಂದರೆ ಅನಿಶ್ಚಿತತೆಯ ಪರವಾಗಿ ಮತ ಚಲಾಯಿಸಿದಂತಾಗುತ್ತದೆ.

ಇನ್ನು ಎರಡನೆಯ ಬಲಿಷ್ಠ ಪಕ್ಷವಾದ ಬಿ.ಜೆ.ಪಿ ಕೋಮುವಾದದ ಪರವಾಗಿ ಇರುವಂತೆ ಅನಿಸುತ್ತದೆ. ಬಹು ಜನಾಂಗೀಯ ದೇಶವಾದ ಭಾರತದಲ್ಲಿ ಕೋಮುವಾದದ ಯಾವುದೇ ಪಕ್ಷಕ್ಕೆ ಮತ ಹಾಕುವುದು ದೇಶದ ಹಿತಕ್ಕೆ ವಿರೋಧವಾಗುತ್ತದೆ. ಈಗ ದೇಶಕ್ಕೆ ಬೇಕಿರುವುದು ಕೋಮು ಸೌಹಾರ್ದತೆಯ ವಾತಾವರಣ. ಬಿ.ಜೆ.ಪಿ ಅಧಿಕಾರಕ್ಕೆ ಬಂದರೆ ರಾಮ ಮಂದಿರ ಕಟ್ಟುವ

ಕೆಲಸಕ್ಕೆ ಕೈ ಹಾಕುವುದು ನಿಶ್ಚಿತ. ಹಾಗೇನಾದರೂ ಅದು ಮಾಡ ಹೊರಟಲ್ಲಿ ಹಿಂದುಗಳಿಗೆ ಅದೆಷ್ಟೆ ಪ್ರಿಯವಾದ ಕೆಲಸವಾದರೂ ಅದರ ಐತಿಹಾಸಿಕ ಹಿನ್ನೆಲೆಯ ಕಾರಣದಿಂದ ಕೋಮುಗಲಭೆಗಳಿಗೆ ಕಾರಣವಾದಲ್ಲಿ ಅಧಿಕಾರಕ್ಕೆ ಬಂದ ಮೇಲೆ ಬಿ.ಜೆ.ಪಿ ತಾನು ಮಾಡಬಯಸಿರುವ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಲು ಬಹಳ ಪ್ರಯಾಸ ಮಾಡಬೇಕಾಗಬಹುದು ಮತ್ತು ಆ ಪ್ರಯಾಸದೊಂದಿಗೆ ಇನ್ನೂ ಹಲವಾರು ಸಮಸ್ಯೆಗಳು ಉಂಟಾಗಬಹುದು: ಯಾವ ಭರವಸೆಗಳನ್ನು ಕೊಟ್ಟು ಅಧಿಕಾರಕ್ಕೆ ಬಂದಿರುತ್ತದೊ ಆ ಭರವಸೆಗಳನ್ನು ಪೂರೈಸಲು ಸಾಧ್ಯವಾಗದೇ ಇರಬಹುದು. ಆಗ ಬಿ.ಜೆ.ಪಿ ಗೆ ಕೊಟ್ಟ ಮತ ವ್ಯರ್ಥವಾಗಬಹುದು. ಈ ನಿಟ್ಟಿನಲ್ಲಿ ಯೋಚನೆ ಮಾಡುತ್ತಾ ಹೋದ ಹಾಗೆ ಬಿ.ಜೆ.ಪಿ ಗೆ ಮತ ಹಾಕಬೇಕೆಂಬ ವಿಚಾರಕ್ಕೆ ಹಿನ್ನಡೆಯಾಗುತ್ತದೆ.

ಬಿ.ಜೆ.ಪಿ ಮತ್ತು ಕಾಂಗ್ರೆಸ್ ಪಕ್ಷಗಳನ್ನು ಬಿಟ್ಟು ಮೂರನೆಯ ಪಕ್ಷಕ್ಕೆ ಮತಹಾಕಬೇಕೆಂದರೆ ಅದೂ ಕೂಡ ಸುಲಭವೆನಿಸುವುದಿಲ್ಲ. ಏಕೆಂದರೆ ಇಡೀ ರಾಷ್ಟ್ರಮಟ್ಟದ ಪಕ್ಷ ಬೇರೊಂದಿಲ್ಲವಾಗಿದೆ. ಈಗ ತಾನೆ ಹುಟ್ಟಿದ ಆಮ್ ಆದ್ಮಿ ಪಕ್ಷ ರಾಷ್ಟ್ರೀಯ ಪಕ್ಷವಾಗಲು ಹೆಣಗಾಡುತ್ತಿದೆ. ೪೦೦ಕ್ಕೂ ಮಿಕ್ಕಿ ಲೋಕಸಭಾ ಕ್ಷೇತ್ರಗಳಿಗೆ ತನ್ನ ಅಭ್ಯರ್ಥಿಗಳನ್ನು ಚುನಾವಣಾ ಕಣಕ್ಕೆ ಇಳಿಸಿದೆಯಾದರೂ ಚುನಾವಣಾ ಫಲಿತಾಂಶದ ನಂತರವೇ ಅದು ನಿಜಾರ್ಥದಲ್ಲಿ ರಾಷ್ಟ್ರೀಯ ಪಕ್ಷ ಹೌದೇ ಅಥವಾ ಅಲ್ಲವೇ ಎಂಬುದು ತೀರ್ಮಾನವಾಗುತ್ತದೆ. ಸದ್ಯಕ್ಕಂತೂ ಆ ಪಕ್ಷದ ಸಂಘಟನೆ ರಾಷ್ಟ್ರಮಟ್ಟದಲ್ಲಿ ಇಲ್ಲವೆಂದೆ ಹೇಳಬಹುದಾದಷ್ಟು ಇದೆ. ದೇಶದ ಬಹು ಸಂಖ್ಯಾತ ಮತದಾರರು ವಾಸಿಸುವ ಗ್ರಾಮಗಳವರೆಗೆ ಆ ಪಕ್ಷ ತಲುಪಿಲ್ಲ. ಅವರಿಗೆ ಆ ಪಕ್ಷದ ಹೆಸರೂ ಗೊತ್ತಿಲ್ಲ, ಧ್ಯೇಯೋದ್ದೇಶಗಳೂ ಗೊತ್ತಿಲ್ಲ ಮತ್ತು ನಾಯಕರೂ ಗೊತ್ತಿಲ್ಲ. ಆ ಪಕ್ಷದ ಪರವಾಗಿ ಚುನಾವಣೆಗೆ ನಿಂತ ಅಭ್ಯರ್ಥಿಯು ತನ್ನ ಕ್ಷೇತ್ರದ ಬಹುಪಾಲು ಮತದಾರರನ್ನು ಸಂಪರ್ಕಿಸಲೂ ಕೂಡ ಸಾಧ್ಯವಾಗುತ್ತಿಲ್ಲ. ಆ ಪಕ್ಷ ಇದುವರೆಗೆ ನಡೆದು ಬಂದ ದಾರಿಯನ್ನು ನೋಡಿದವರು ಅದನ್ನು ಸರಿಯಾಗಿ ಅರ್ಥೈಸಿಕೊಳ್ಳಲಾರದೆ ಹೋಗಿದ್ದಾರೆ. ಆ ಪಕ್ಷದ ಮುಖಂಡರ ಅಪಕ್ವತೆಯನ್ನೆ ದೊಡ್ಡದನ್ನಾಗಿ ಮಾಡುತ್ತಿದ್ದಾರೆ. ಈ ಎಲ್ಲಾ ಮುಂತಾದ ಕಾರಣಗಳಿಂದಾಗಿ ಆಮ್ ಆದ್ಮಿ ಪಕ್ಷ ಬಿ.ಜೆ.ಪಿ ಮತ್ತು ಕಾಂಗ್ರೆಸ್ಸಿಗೆ ಪರ್ಯಾಯವಾದ ಪಕ್ಷವಾಗಿ ಹೊರಹೊಮ್ಮುತ್ತದೆಂದು ಹೇಳುವುದು ಕಷ್ಟ. ಆದ್ದರಿಂದ ಆ ಪಕ್ಷಕ್ಕೆ ಮತ ಹಾಕುವುದು ಎಷ್ಟು ಸಮಂಜಸ ಎಂಬ ವಿಚಾರ ಮತದಾರನಲ್ಲಿ ಮೂಡುವುದು ಸಹಜ.

ಕೇಂದ್ರದಲ್ಲಿ ಸರ್ಕಾರ ರಚಿಸುವಲ್ಲಿ ತಮ್ಮ ಪಾತ್ರ ತುಂಬಾ ಮಹತ್ವದ್ದಾಗಿರುತ್ತದೆ ಎಂದು ಹೇಳಿಕೊಳ್ಳುವ ಬಹುಜನ ಸಮಾಜವಾದಿ ಪಕ್ಷ, ಸಮಾಜವಾದಿ ಪಕ್ಷ, ತೃಣಮೂಲ ಕಾಂಗ್ರೆಸ್ ಮತ್ತು ಎ.ಐ.ಡಿ.ಎಂ.ಕೆ ಮತ್ತು

ಡಿ.ಎಂ.ಕೆ ಪಕ್ಷಗಳು ಯಾವ ದೃಷ್ಟಿಯಿಂದ ನೋಡಿದರೂ ಅವು ಸದ್ಯಕ್ಕೆ ಪ್ರಾದೇಶಿಕ ಪಕ್ಷಗಳಾಗಿಯೇ ಚುನಾಚಣೆಯಲ್ಲಿ ಸ್ಪರ್ಧಿಸುತ್ತಿವೆ. ಅಲ್ಲದೆ ಅವುಗಳ ಪ್ರಣಾಳಿಕೆಗಳು ಕೂಡ ಆಯಾ ಪ್ರದೇಶಗಳ ಸಮಸ್ಯೆಗಳ ಪರಿಹಾರಕ್ಕೆ ಸೀಮಿತಗೊಂಡಿವೆ. ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಆ ಪ್ರಾದೇಶಿಕ ಪಕ್ಷಗಳ ಆಭ್ಯರ್ಥಿಗೆ ಮತ ಹಾಕುವುದೆಂದರೆ ವ್ಯರ್ಥವೆ.

ಚುನಾವಣೆಯ ನಂತರ ಗೆದ್ದು ಬಂದ ಪಕ್ಷಗಳು ಸರ್ಕಾರ ರಚಿಸುವುದಕ್ಕಾಗಿ ಚುನಾವಣಾ ಕಾಲದಲ್ಲಿಯ ತಮ್ಮ ಎಲ್ಲ ಪ್ರಕಾರದ ಮತಭೇದಗಳನ್ನು ಬಿಸಾಡಿ ಒಂದಾಗಿ ಸರ್ಕಾರ ರಚಿಸಲು ಪ್ರಯತ್ನಿಸುವುದು ಕೂಡ ತಪ್ಪೆಂದು ಹೇಳಲು ಸುಪ್ರೀಂಕೋರ್ಟ್ ನಿರಾಕರಿಸಿದೆ. ಸಮ್ಮಿಶ್ರ ಸರ್ಕಾರ ರಚಿಸುವುದು ರಾಜಕೀಯ ವಿಚಾರವಾಗಿರುವುದರಿಂದ ಅದನ್ನು ತಡೆಯುವುದು ಕೋರ್ಟಿನ ಅಧಿಕಾರದ ವ್ಯಾಪ್ತಿಯಲ್ಲಿ ಬರುವುದಿಲ್ಲವೆಂದು ತಿಳಿಸಿದೆ. ಸದ್ಯದ ಚುನಾವಣಾ ಕಣದ ಅವಲೋಕನೆಯ ಪ್ರಕಾರ ಯಾವ ಒಂದು ಪಕ್ಷಕ್ಕೂ ಬಹು ಮತ ಬರುವ ಸಾಧ್ಯತೆ ಇಲ್ಲ. ಸಮ್ಮಿಶ್ರ ಸರ್ಕಾರವೇ ಗತಿ. ರಚಿತವಾದ ಸಮ್ಮಿಶ್ರ ಸರ್ಕಾರ ಯಾವ ಪಕ್ಷದ ಪ್ರಣಾಳಿಕೆಯ ಭರವಸೆಗಳನ್ನು ಈಡೇರಿಸುತ್ತದೆ ಎಂಬ ಜಿಜ್ಞಾಸೆ ಹುಟ್ಟುತ್ತದೆ. ಚುನಾವಣಾ ಕಾಲದಲ್ಲಿ ಯಾವ ಉದ್ದೇಶದಿಂದ ಯಾವ ಪಕ್ಷಕ್ಕೆ ಮತವನ್ನು ಚಲಾಯಿಸಲಾಯಿತೋ ಆ ಮತದ ಉದ್ದೇಶ ಈಡೇರಿದಂತಾಗುವುದಿಲ್ಲ. ಮತದಾರನಿಗೆ ಅನ್ಯಾಯವಾದಂತಾಗುತ್ತದೆ.

ರಾಜ್ಯದ ವಿಚಾರವಂತರು ಕೂಡ ಮತ ಚಲಾಯಿಸುವ ಬಗ್ಗೆ ಭ್ರಮೆಯಲ್ಲಿ ಇರುವಂತೆ ತೋರುತ್ತದೆ. ಹಿರಿಯ ಚಿಂತಕ ಯು.ಆರ್. ಅನಂತಮೂರ್ತಿಯವರು ತಮ್ಮ ಎಲ್ಲ ಸಹಾನುಭೂತಿ ಆಮ್ ಆದ್ಮಿ ಪಕ್ಷಕ್ಕೆ ಇದೆಯೆಂಬ ಭಾವನೆಯನ್ನು ತಮ್ಮ ಇತ್ತೀಚೆಗಿನ ಲೇಖನದಲ್ಲಿ ವ್ಯಕ್ತಪಡಿಸಿದ್ದಾರೆ. ಮುಂದೆ ಅವರೆ ಬೆಂಗಳೂರು ದಕ್ಷಿಣ ಕ್ಷೇತ್ರದಿಂದ ಆಮ್ ಆದ್ಮಿ ಪಕ್ಷದಿಂದ ಅಭ್ಯರ್ಥಿ ಸ್ಪರ್ಧಿಸಿದ್ದರೂ ಕೂಡ ಕಾಂಗ್ರೆಸ್ಸಿನ ಅಭ್ಯರ್ಥಿಯ ಪರವಾಗಿ ಪ್ರಚಾರಮಾಡಿದ್ದಾರೆ.

ಚುನಾವಣೆಗೆ ಮುನ್ನ ಎಲ್ಲ ಪ್ರಗತಿಪರ ಮತ್ತು ಜಾತ್ಯಾತೀತ ಪಕ್ಷಗಳು ಒಟ್ಟುಗೂಡಿ ತೃತೀಯ ರಂಗವನ್ನು ರಚಿಸಲು ಪ್ರಯತ್ನಿಸಿ ವಿಫಲವಾದವು. ಈಗ ಚುನಾವಣೆಯ ನಂತರ ಸಮಾನ ಮನಸ್ಕ ಪಕ್ಷಗಳೆಲ್ಲಾ ಸೇರಿ ತೃತೀಯರಂಗವನ್ನು ರಚಿಸುವುದಾಗಿಯೂ ಮತ್ತು ಸರ್ಕಾರವನ್ನು ರಚಿಸುವುದಾಗಿಯೂ ಹೇಳುತ್ತಿವೆ. ಇಂಥ ಸಂದಿಗ್ಧ ರಾಜಕೀಯ ಪರಿಸ್ಥಿತಿಯಲ್ಲಿ ಮತದಾರನ ಮತದಾನದ ಸಂಕಷ್ಟ ಹೆಚ್ಚುವುದರಲ್ಲಿ ಸಂದೇಹವಿಲ್ಲ. ಈ ಸಂದಿಗ್ಧ ರಾಜಕೀಯ ಪರಿಸ್ಥಿತಿಗೆ ನಮ್ಮನ್ನು ನಾವೇ ಶಪಿಸಿಕೊಳ್ಳಬೇಕಾಗಿದೆ.

* * *

ಸರ್ವೋದಯ ಪಕ್ಷದ ನಿರ್ಧಾರ ಸೂಕ್ತವೇ?

ದೇವನೂರು ಮಹದೇವರ "ಬಿ.ಜೆ.ಪಿ ತನ್ನ ಆತ್ಮಹತ್ಯೆಗೆ ತಾನೇ ಸಜ್ಜಾಗುತ್ತಿದೆಯೇ?" (ಪ್ರ.೧೦.ಏಪ್ರಿಲ್) ಎಂಬ ಲೇಖನ ಚಿಂತನೆಗೆ ಅವಕಾಶ ಮಾಡಿಕೊಟ್ಟಿದೆ. ಲೇಖನದ ಶೀರ್ಷಿಕೆಯಲ್ಲಿ ಬಿ.ಜೆ.ಪಿ ಪಕ್ಕಕ್ಕೆ ಹಿತ ಚಿಂತನೆಯೂ ಇರುವಂತೆ ಭಾಸವಾಗುತ್ತದೆ. ಅದೇನೆ ಇರಲಿ ಅದರಲ್ಲಿಯ ವಿಚಾರಗಳು ಪ್ರಬುದ್ಧವಾಗಿವೆ. ಲೇಖನ ಬರೆದ ದೇವನೂರರಿಗೆ ಸಮಾಜದಲ್ಲಿ ಎರಡು ಸ್ಥಾನಗಳಿವೆ ಮೊದಲನೆಯದು ಸಾಹಿತಿಯಾಗಿ ಮತ್ತು ಚಿಂತಕರಾಗಿ ಎರಡನೆಯದು ಕರ್ನಾಟಕ ಸರ್ವೋದಯ ಪಕ್ಷದ ಗೌರವಾಧ್ಯಕ್ಷರಾಗಿ. ಅವರು ತಮ್ಮ ಲೇಖನದಲ್ಲಿ ಮೋದಿ ಮತ್ತು ಬಿ.ಜೆ.ಪಿಯ ಬಗ್ಗೆ ಯಾವೆಲ್ಲಾ ವಿಮರ್ಶಾತ್ಮಕ ಮಾತುಗಳನ್ನು ಹೇಳಿದ್ದಾರೊ ಅವೆಲ್ಲಾ ಕಾಂಗ್ರೆಸ್ ಪಕ್ಷಕ್ಕೂ ಒಂದಲ್ಲ ಒಂದು ಅರ್ಥದಲ್ಲಿ ಹೆಚ್ಚು ಅಥವಾ ಕಡಿಮೆ ಅನ್ವಯಿಸುತ್ತವೆ. ಭ್ರಷ್ಟಾಚಾರ ಮತ್ತು ಕೋಮುವಾದದ ಆಕ್ಷೇಪಣೆಗೆ ಎರಡೂ ಪಕ್ಷಗಳು ಗುರಿಯಾಗಿವೆ. ಇಂಥ ಈ ಎರಡೂ ಪಕ್ಷಗಳನ್ನು ಅಧಿಕಾರದ ಕೇಂದ್ರಬಿಂದುವಿನಿಂದ ದೂರ ಇಡಬೇಕು, ಭ್ರಷ್ಟಾಚಾರ ಮುಕ್ತ ಕೋಮುವಾದ ರಹಿತ ಹಾಗೂ ಸಂವಿಧಾನದ ಆಶೋತ್ತರಗಳನ್ನು ನೆರವೇರಿಸಲು ಸಾಧ್ಯವಾಗುವಂತಹ ಮೂರನೆಯ ಪಕ್ಷವನ್ನು ಅರವಿಂದ ಕೇಜ್ರಿವಾಲ್ ಮತ್ತು ಸಮಾನ ಮನಸ್ಕರರು ಹುಟ್ಟು ಹಾಕಿದ್ದಾರೆ. ಅದುವೆ ಸರ್ವ ಸಾಮಾನ್ಯರ ಆಮ್ ಆದ್ಮಿ ಪಕ್ಷ. ಹಳೆಯ ಹಳಿಸಿದ ವ್ಯವಸ್ಥೆಗೆ ಬದಲಾಗಿ ಹೊಸ ಮತ್ತು ನೂತನ ವ್ಯವಸ್ಥೆಯನ್ನು ತರಲು ಪ್ರಯತ್ನಿಸುತ್ತಿರುವ ಆಮ್ ಆದ್ಮಿ ಪಕ್ಷಕ್ಕೆ ದೇಶದ ಎಲ್ಲ ಪ್ರಗತಿಪರರೂ ಪರಿವರ್ತನೆಯ ಪರವಾಗಿರುವವರೂ ಬೆಂಬಲಿಸಬೇಕಾದುದು ಅಗತ್ಯ, ಕರ್ತವ್ಯವೂ ಹೌದು. ಆದರೆ ಮಹದೇವರ ಕರ್ನಾಟಕ ಸರ್ವೋದಯ ಪಕ್ಷ ಆಮ್ ಆದ್ಮಿ ಪಕ್ಷದ ಅಭ್ಯರ್ಥಿಗಳನ್ನು ಸಮರ್ಥಿಸುವ ಬದಲಾಗಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳನ್ನು ಸಮರ್ಥಿಸುವ ಕ್ರಮ ಸರ್ವೋದಯ ಪಕ್ಷದ ಕ್ರಾಂತಿಕಾರಿ ಧೋರಣೆಗೆ ಸೂಕ್ತವೇ? ಆ ಪಕ್ಷದಲ್ಲಿ ಈ ಬಗ್ಗೆ ಭಿನ್ನಾಭಿಪ್ರಾಯದ ಹೊಗೆ ಎದ್ದಿದೆ. ಆದರೆ ಆ ಪಕ್ಷದ ಅಧಿಕೃತ ನಿಲುವೇನೆಂಬುದು ಸ್ಪಷ್ಟವಾಗಿಲ್ಲ. ಆಮ್ ಆದ್ಮಿ ಪಕ್ಷಕ್ಕೆ ಹೆಚ್ಚು ಮತ ಬೀಳಲಾರವೆಂಬ ಕಾರಣದಿಂದಾಗಿ ತಮ್ಮ ಪಕ್ಷದ ಸಹಾನುಭೂತಿಯುಳ್ಳ ಮತದಾರರ ಮತ ವ್ಯರ್ಥವಾಗಬಾರದೆಂದು ಕಾಂಗ್ರೆಸ್ಸಿಗೆ ಬೆಂಬಲಿಸುವ ನೀತಿ ಸರಿಯಲ್ಲ. ಚುನಾನಣೆಯ ಸಂದರ್ಭದಲ್ಲಿಯೇ ಒಂದು ರಾಜಕೀಯ ಪಕ್ಷ ಬೆಳೆಯಲು ಅವಕಾಶವಿರುತ್ತದೆ. ಪ್ರತಿಯೊಂದು ಚುನಾನಣೆಯಲ್ಲಿಯೂ ಸ್ಪರ್ಧಿಸುತ್ತಾ, ಸೋಲುತ್ತಾ – ಗೆಲುತ್ತಾ ಬೆಳೆಯುತ್ತದೆ. ಲೋಕಸಭಾ ಚುನಾವಣೆಯ ಸ್ವಲ್ಪ ಕಾಲ ಮೊದಲು ಹುಟ್ಟಿದ ಆಮ್ ಆದ್ಮಿ ಪಕ್ಷಕ್ಕೆ ಈ ಚುನಾವಣೆ ಬೆಳವಣಿಗೆಯ ಅವಕಾಶ ತಂದುಕೊಟ್ಟಿದೆ. ರೈತ ಸಂಘಟನೆಯ ರಾಜಕೀಯ ಅಂಗವಾದ ಕರ್ನಾಟಕ ಸರ್ವೋದಯ ಪಕ್ಷ ಆಮ್ ಆದ್ಮಿ ಪಕ್ಷಕ್ಕೆ ಬೆಂಬಲಕೊಡಬೇಕು. ಅದಕ್ಕಲ್ಲವಾದರೆ ದಲಿತ ಸಂಘರ್ಷ ಸಮಿತಿಗೊ ಅಥವಾ ಜೆ.ಡಿ.ಎಸ್ ಗೊ ಬೆಂಬಲಕೊಡಬಹುದಾಗಿತ್ತು. 'ಎದೆಗೆ ಬಿದ್ದ ಅಕ್ಷರ'ದ ಒಳ ದನಿಯನ್ನು ಕೇಳಬೇಕಾಗಿತ್ತು.

– ಸುರೇಂದ್ರ ಕೌಲಗಿ

ಜನಪದ ಸೇವಾ ಟ್ರಸ್ಟ್ ಸಮಾಚಾರ

ಹೊಸ ಜೀವನ ದಾರಿ ಕೇಂದ್ರದಲ್ಲಿ ಆಗಾಗ್ಗೆ ನಡೆಯುತ್ತಿರುವ ವಿದ್ಯಾರ್ಥಿಗಳ ಶಿಬಿರಗಳು ಹೆಚ್ಚು ಅರ್ಥಯುಕ್ತ ಮತ್ತು ಉಪಯುಕ್ತ ರೀತಿಯಲ್ಲಿ ನಡೆಯಬೇಕಾದಲ್ಲಿ ಯಾವ ರೀತಿಯ ವಿಷಯಗಳ ಬಗ್ಗೆ ಉಪನ್ಯಾಸಗಳು ನಡೆಯಬೇಕೆಂದು ಚರ್ಚಿಸುವುದಕ್ಕಾಗಿ ಹಾಗೂ ಸಾಧ್ಯವಾದರೆ ಒಂದು ವಿಷಯ ಆಯ್ಕೆ ಮಾಡಿ ಅದರ ವಿಷಯವಾಗಿ ಪಠ್ಯಕ್ರಮ ಸಿದ್ಧಪಡಿಸುವ ಅಂಗವಾಗಿ ಜಿಲ್ಲೆಯ ಒಂದು ಕಾಲೇಜಿನ ಹದಿನಾರು ವಿದ್ಯಾರ್ಥಿಗಳು ಎರಡು ದಿನ ಕೇಂದ್ರದಲ್ಲಿ ಇದ್ದುಕೊಂಡು ಚರ್ಚೆನಡೆಸಿದರು. ಸ್ಥೂಲವಾದ ವಿಷಯ ಪಟ್ಟಿ ತಯಾರಿಸಲಾಯಿತು.

ಮೈಸೂರು ನಗರದಲ್ಲಿರುವ ವಿವಿಧ ವಯೋಮಾನದ ಅರವತ್ತು ವಿದ್ಯಾರ್ಥಿಗಳು ಬೇಸಿಗೆ ಶಿಬಿರ ನಡೆಸಿದರು. ಮ್ಯಾನ್ ಸಂಸ್ಥೆಯ ಮನು, ಪರಿಸರ ಮಿತ್ರ ಮೋಹನ್, ಸುಘೋಷ್ ಕೌಲಗಿ ಶಿಬಿರ ನಡೆಸಿಕೊಟ್ಟರು. ಶಿಬಿರಕ್ಕೆ ಗೌರಿ ಲಂಕೇಶ್, ಲೋಕೇಶ್ ಮೊಸಳೆ ಹಾಗೂ ರಂಗಾಯಣದ ನಿರ್ದೇಶಕರಾದ ಜನ್ನಿ ಶಿಬಿರಕ್ಕೆ ಭೇಟಿಕೊಟ್ಟರು.

ಬೆಂಗಳೂರು ನಗರದಲ್ಲಿಯ ನಗೆಕೂಟದ ಐವತ್ತು ಜನ ಸದಸ್ಯರು ಟ್ರಸ್ಟಿಗೆ ಭೇಟಿಕೊಟ್ಟರು. ತಂಡದ ನೇತೃತ್ವವನ್ನು ಶ್ರೀರಾಮರಾಜ ಅರಸ್‌ರವರು ವಹಿಸಿದ್ದರು. ಅವರಿಗೆಲ್ಲ ಟ್ರಸ್ಟಿನ ಕಾರ್ಯಗಳನ್ನು ಪರಿಚಯ ಮಾಡಿಕೊಡಲಾಯಿತು. ಹಲವರು ಜನಪದ ವಿಚಾರಕ್ಕೆ ಚಂದಾದಾರರಾದರು

ಟ್ರಸ್ಟಿನ ಧರ್ಮದರ್ಶಿಯಾದ ಶ್ರೀ.ರಮೇಶ್.ಹೆಚ್.ಎನ್ ಮತ್ತು ಶ್ರೀಮತಿ ಶೈಲಜಾ ರಮೇಶ್ ಮತ್ತು ಮಕ್ಕಳು ಟ್ರಸ್ಟಿಗೆ ಭೇಟಿ ಕೊಟ್ಟರು.

ತುಮಕೂರು ನಗರದ ಹತ್ತಿರವಿರುವ ತೋವಿನಕೆರೆ ಎಂಬ ಗ್ರಾಮದಲ್ಲಿ ನಾಲ್ಕು ದಿನಗಳ ಅಲ್ಪಾವಧಿಯ ಬೇಸಿಗೆ ಶಿಬಿರ ನಡೆಸಲಾಯಿತು. ಗ್ರಾಮದ ಸುಮಾರು ಅರವತ್ತು ಮಕ್ಕಳು ಶಿಬಿರದಲ್ಲಿ ಭಾಗವಹಿಸಿದ್ದರು. ಆ ಗ್ರಾಮದಲ್ಲಿ ಮಕ್ಕಳಿಗಾಗಿ ಬೇಸಿಗೆ ಶಿಬಿರ ನಡೆದುದು ಇದೇ ಮೊದಲಬಾರಿ. ಗ್ರಾಮಸ್ಥರು ಮತ್ತು ಮಕ್ಕಳು ಉತ್ಸಾಹದಿಂದ ಶಿಬಿರ ಯಶಸ್ವಿಯಾಗಿ ನಡೆಯುವಂತೆ ಸಹಕರಿಸಿದರು. ಗ್ರಾಮದ 'ಹಳ್ಳಿ-ಸಿರಿ" ಎಂಬ ಮಹಿಳಾ ಸ್ವಸಹಾಯ ಗುಂಪಿನ ಸದಸ್ಯರು ಶಿಬಿರವನ್ನು ಆಯೋಜಿಸಿದ್ದರು. ಶಿಬಿರದ ಆಯೋಜನೆ ಮತ್ತು ಯಶಸ್ಸಿಗೆ ಕಾರಣರಾದವರು ಅದೇ ಗ್ರಾಮದ ಪದ್ಮರಾಜ್ ಮತ್ತು ಅವರ ಮಿತ್ರರು. ಜನಪದ ಸೇವಾ ಟ್ರಸ್ಟ್ ಪರವಾಗಿ ಸುಘೋಷ್ ಕೌಲಗಿಯವರು ಶಿಬಿರವನ್ನು ನಡೆಸಿಕೊಟ್ಟರು. ಅವರೊಂದಿಗೆ ಮೇಲುಕೋಟೆಯ ಯುವಕರಾದ ಸುರೇಶ, ಹೇಮಂತ, ಉದಯ, ಶರತ್, ನಾರಾಯಣ ಹಾಗೂ ಮೈಸೂರಿನ ದೀಪಕ್ ಶಿಬಿರ ಯಶಸ್ವಿಯಾಗಿ ನಡೆಯುವುದಕ್ಕೆ ಕಾರಣರಾದರು.

ಜನಪದ ನಿಲಯದ ಅಂತರಂಗದಲ್ಲಿ.. ೧೨೨

– ಸುರೇಂದ್ರ ಕೌಲಗಿ



ನಾನೊಂದು ಕನಸು ಕಂಡೆ. ಟ್ರಸ್ಟ್ ಕಾರ್ಯನಿಮಿತ್ತ ಮೈಸೂರಿಗೆ ಹೋಗುತ್ತಿದ್ದೆ. ನಾನಿದ್ದ ಬಸ್ಸಿಗೆ ಮೇಲುಕೋಟೆಯ ನಿವಾಸಿಗಳಿಬ್ಬರು ಹತ್ತಿದರು ಮತ್ತು ನಾನು ಕೂತಿದ್ದ ಸೀಟಿನ ಮುಂಭಾಗದ ಸೀಟಿನಲ್ಲಿ ಕುಳಿತು ತಮ್ಮ ತಮ್ಮ ಹೆಣ್ಣು ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಮಾತನಾಡುತ್ತಿದ್ದರು. ಅವರು ಗಟ್ಟಿಯಾಗಿಯೇ ಮಾತನಾಡುತ್ತಿದ್ದರಿಂದ ಮಾತುಗಳು ಸ್ಪಷ್ಟವಾಗಿ ಕೇಳಿಸುತ್ತಿದ್ದವು. ಅದೇ ತಾನೆ ಎಸ್.ಎಲ್.ಸಿ. ಫಲಿತಾಂಶ ಬಂದಿತ್ತು. ಆ ಪರೀಕ್ಷೆಯಲ್ಲಿ ಅವರ ಹೆಣ್ಣು ಮಕ್ಕಳು ತೇರ್ಗಡೆಯಾಗಿದ್ದರು. ಮಕ್ಕಳ ಮುಂದಿನ ವಿದ್ಯಾಭ್ಯಾಸದ ಬಗ್ಗೆ ಮಾತನಾಡಿಕೊಳ್ಳುತ್ತ ಮೇಲುಕೋಟೆಯಲ್ಲಿಯೇ ಮುಂದಿನ ಶಿಕ್ಷಣದ ವ್ಯವಸ್ಥೆ ಇದ್ದಿದ್ದರೆ ಓದಿಸಬಹುದಾಗಿತ್ತು. ಈಗ ಅದು ಇಲ್ಲವಾಗಿರುವುದರಿಂದ ಹೆಣ್ಣುಮಕ್ಕಳನ್ನು ಪಾಂಡವಪುರ, ಮೈಸೂರಿಗೆ ಕಳುಹಿಸುವುದು ಕಷ್ಟವಾಗಿರುವುದರಿಂದ ಹೆಣ್ಣು ಮಕ್ಕಳ ಶಿಕ್ಷಣ ಎಸ್.ಎಸ್.ಎಲ್.ಸಿ ಗೆ ನಿಲ್ಲಿಸಬೇಕಾಗಿ ಬರುತ್ತಿದೆ ಎಂಬ ಅಳಲು ಅವರ ಮಾತಿನಲ್ಲಿತ್ತು. ಅವರ ಅಳಲನ್ನು ಕೇಳಿಸಿಕೊಂಡ ನನಗೆ ಹೌದಲ್ಲ, ಮೇಲುಕೋಟೆಯಲ್ಲಿ ಕೊನೆಯ ಪಕ್ಷ ಪಿ.ಯು.ಸಿ ವರೆಗಿನ ಕಾಲೇಜಿನ ಅಗತ್ಯವಿದೆಯೆಂದು ಅನಿಸಿತು. ಅಂಥ ಕಾಲೇಜು ಮೇಲುಕೋಟೆಯಲ್ಲಿ ಸ್ಥಾಪಿತವಾದರೆ ಅನೇಕ ಹೆಣ್ಣುಮಕ್ಕಳ ಭವಿಷ್ಯಕ್ಕೆ ಅನುಕೂಲವಾಗುತ್ತದೆ ಎಂಬ ವಿಚಾರ ಮನಸ್ಸಿನಲ್ಲಿ ಮೂಡಿತು. ತಕ್ಷಣ ಆ ವಿಚಾರದೊಂದಿಗೆ ಇನ್ನೊಂದು ಮಹತ್ತರವಾದ ವಿಚಾರ ಸೇರಿಕೊಂಡಿತು. ನಾನೊಬ್ಬ ಗಾಂಧೀ ವಿಚಾರದ ಗ್ರಾಮ ಸೇವಕನಾದುದರಿಂದ, ಗ್ರಾಮ ಸೇವೆಗೆ ಯುವ ಬಲ ಅಗತ್ಯವಾದುದರಿಂದ ಒಂದು ವೇಳೆ ಕಾಲೇಜು ಸ್ಥಾಪಿಸಲು ಸಾಧ್ಯವಾಗುವುದಾದರೆ ದೊಡ್ಡ ಯುವಶಕ್ತಿಯೊಂದು ದೊರೆಯಲು ಸಾಧ್ಯವಾಗುವುದು ಹಾಗೂ ಗ್ರಾಮದ ಪುನರ್ ನಿರ್ಮಾಣಕ್ಕೆ ಬಲ ಬರುವುದೆಂದು ಅನಿಸಿತು. ಆ ಘಳಿಗೆಯಿಂದಲೇ ಪಿ.ಯು.ಸಿ ಕಾಲೇಜನ್ನು ಮೇಲುಕೋಟೆಯಲ್ಲಿ ಸ್ಥಾಪಿಸುವ ಕನಸನ್ನು ಕಾಣತೊಡಗಿದೆ. ಅದಕ್ಕಾಗಿ ಏನೆಲ್ಲಾ ಪ್ರಯತ್ನ ಮಾಡಬೇಕೆಂಬುದರ ಬಗ್ಗೆ ಲೆಕ್ಕಹಾಕತೊಡಗಿದೆ. ಆ ಕನಸನ್ನು ನನಸನ್ನಾಗಿ ಮಾಡಲು ಪ್ರಯತ್ನಿಸಲಾರಂಬಿಸಿದೆ. ಆ ವಿಚಾರಗಳೆಲ್ಲವೂ 'ಮನಸ್ಸಿನಲ್ಲಿ ಮಂಡಿಗೆ ತಿಂದರೆ, ಗೋಧಿ ಲೆಕ್ಕ ಕೊಡುವವರಾರು' ಎಂಬ ಗಾದೆಯಂತಿದ್ದವು. ಆದರೂ ಕೂಡ ಪ್ರಯತ್ನ ಮುಂದುವರಿಯಿತು, ಕನಸು ಬಣ್ಣ ಪಡೆಯತೊಡಗಿತು. ಇಂಥ ಕೆಲಸ ಸಿದ್ಧವಾಗಬೇಕಾದರೆ ರಾಜಕೀಯ ಬಲ ಬೇಕಾಗುತ್ತದೆಂಬ ಸಲಹೆ ಕೆಲವು ಮೂಲಗಳಿಂದ ಕೇಳಿಬಂತು. ಆ ಬಗ್ಗೆ ಯೋಚನೆ ಮಾಡ ತೊಡಗಿದ್ದಾಗ ಪಾಂಡವಪುರ ವಿಧಾನಸಭಾ ಕ್ಷೇತ್ರದ ಪ್ರತಿನಿಧಿ ಶ್ರೀ.ಕೆ.ಕೆಂಪೇಗೌಡರ ನೆನಪಾಯಿತು. ಅವರ ಪರಿಚಯ ನನಗೆ ಸ್ವಲ್ಪವಿತ್ತು. ತಾಲ್ಲೂಕು ಬೋರ್ಡ್ ಆದ್ಯಕ್ಷರಾಗಿದ್ದ ಬಿ.ಕೆ.ಕೆಂಚೇಗೌಡರ ಒಡನಾಟದಲ್ಲಿದ್ದಾಗ ಪಂಚಾಯಿತಿಯ ಸದಸ್ಯರಾಗಿದ್ದ ಕೆಂಪೇಗೌಡರ ಪರಿಚಯವಾಗಿತ್ತು. ನಿಕಟತೆ ಅಷ್ಟಾಗಿ ಬಂದಿರಲಿಲ್ಲ. ಈಗ ಅವರನ್ನು ಕಂಡು ಮಾತನಾಡಬೇಕೆಂಬ ಯೋಚನೆ ಬಂದಿತು. ಅದರಂತೆ ಅವರನ್ನು ಭೇಟಿಮಾಡಿ ಮೇಲುಕೋಟೆಯಲ್ಲಿ ಪಿ.ಯು.ಸಿ ಕಾಲೇಜಿನ ಅಗತ್ಯದ ಮನವರಿಕೆ ಮಾಡಿಕೊಟ್ಟೆ. ಅವರು ತಾಲ್ಲೂಕಿನ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದ ಪ್ರತಿನಿಧಿಯಾಗಿದ್ದರಿಂದ ಅವರು ನನ್ನೀ ವಿಚಾರವನ್ನು ಸಮರ್ಥಿಸಿ ತಮ್ಮ ಕೈಲಾದಷ್ಟು ಪ್ರಯತ್ನಿಸುವುದಾಗಿ ಭರವಸೆ ಕೊಟ್ಟರು. ಅವರು ಮೇಲುಕೋಟೆಗೆ ಆಗಾಗ್ಗೆ ಬಂದಾಗ ಈ ವಿಷಯವನ್ನು ಪ್ರಸ್ತಾಪಿಸುತ್ತಲೇ ಇದ್ದೆ. ಅವರ

ಸಲಹೆಯ ಪ್ರಕಾರ ಹಲವಾರು ಬಾರಿ ಬೆಂಗಳೂರಿಗೆ ಹೋಗಿ ವಿಧಾನಸೌಧದಲ್ಲಿ ಅವರನ್ನು ಕಾಣುತ್ತಿದ್ದೆ. ಅವರಿಗೆ ಜನಪದ ಸೇವಾ ಟ್ರಸ್ಟಿನ ಧ್ಯೇಯೋದ್ದೇಶಗಳು ಚೆನ್ನಾಗಿ ಗೊತ್ತಿದ್ದವು; ನನ್ನ ಬಗ್ಗೆ ಅವರಲ್ಲಿ ಸದಭಿಪ್ರಾಯವಿತ್ತು. ಹೀಗಾಗಿ ಅವರು ಟ್ರಸ್ಟಿಗೆ ಸರ್ಕಾರದಿಂದ ಪಿ.ಯು.ಸಿ ಕಾಲೇಜನ್ನು ಮಂಜೂರು ಮಾಡಿಸಲು ತಮ್ಮ ಎಲ್ಲ ಪ್ರಭಾವವನ್ನು ಬೀರಿದರು. ಅದರ ಪರಿಣಾಮವಾಗಿ ಸರ್ಕಾರಿಯ ಅನುದಾನಕ್ಕೆ ಒಳಪಡುವ ರೀತಿಯಲ್ಲಿ ಕಾಲೇಜಿನ ಮಂಜೂರಾತಿ ಆಯಿತು. ಮಂಜೂರಾತಿಗೆ ಮುನ್ನ ಶಿಕ್ಷಣ ಇಲಾಖೆಯವರು ಕೇಳಿದ ಪೂರ್ವಭಾವಿ ವಿವರಗಳನ್ನು ಕೊಡಲಾಯಿತು. ಜನಪದ ಸೇವಾ ಟ್ರಸ್ಟ್ ಸ್ಥಾಪನೆಯಿಂದಾಗಿ ಕೆಲವು ಮೂಲಭೂತ ಸೌಕರ್ಯಗಳು ಉಂಟಾಗಿದ್ದವು. ಆ ಮೂಲಭೂತ ಸೌಕರ್ಯಗಳನ್ನು ಉಂಟುಮಾಡುವುದಕ್ಕೆ ಪ್ರಧಾನ ಪ್ರೇರಣೆ ಶಾರೀರಿಕ ಅಂಗವಿಕಲ ಮಕ್ಕಳ ಕೇಂದ್ರವಾಗಿದ್ದ ಕರುಣಾಗೃಹ. ಅದು ಸ್ಥಾಪನೆಯಾದ ೧೯೬೩ನೇ ಇಸವಿಯಿಂದ ನಿಧಾನವಾಗಿ ಕೆಲವು ಸೌಕರ್ಯಗಳು ಉಂಟಾಗಿದ್ದವು. ಅವುಗಳಲ್ಲಿ ಪ್ರಮುಖವಾದವು ಸುಭದ್ರ ಕಟ್ಟಡ, ಮೈದಾನ, ಪುಸ್ತಕಾಲಯ ಮತ್ತು ಆರ್ಥಿಕ ಭದ್ರತೆ. ಇವುಗಳನ್ನು ಆಧರಿಸಿಯೇ ಇಲಾಖೆಗೆ ವಿವರಗಳನ್ನು ಕೊಡಲಾಯಿತು. ಕಾಲೇಜು ಮಂಜೂರು ಆದ ಮೇಲೆ ಅದನ್ನು ಪ್ರಾರಂಭಿಸಬೇಕಾಯಿತು. ಕಾಲೇಜಿಗೆ ತಕ್ಕುದಾದ ಬೆಂಚುಗಳ ರಚನೆ ಇನ್ನು ಆಗಿರಲಿಲ್ಲ. ಕಸ್ತೂರ ಬಾ ಸಂಕ್ಷಿಪ್ತ ಶಿಕ್ಷಣ ಶಾಲೆಯ ವಿದ್ಯಾರ್ಥಿನಿಯರಿಗಾಗಿ ಮಾಡಿಸಲಾಗಿದ್ದ ಮೂರು ನಾಲ್ಕು ಬೆಂಚುಗಳನ್ನು ಉಪಯೋಗಿಸಲು ಪ್ರಾರಂಭಿಸಲಾಯಿತು. ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿರಲಿಲ್ಲ. ಮೇಲುಕೋಟೆಯ ನಾಲ್ಕೈದು ಹುಡುಗಿಯರು ಕಾಲೇಜಿಗೆ ಸೇರಿಕೊಂಡರು. ತರಗತಿಯನ್ನು ಕರುಣಾಗೃಹದ ಹಾಲ್‌ನಲ್ಲಿ ಆ ಬೆಂಚುಗಳನ್ನು ಇಟ್ಟು ತರಗತಿ ಪ್ರಾರಂಭಿಸಲಾಯಿತು. ಉದ್ಘಾಟನೆಗೆ ಯಾರನ್ನೂ ಕರೆದಿರಲಿಲ್ಲ. ಪ್ರವೇಶ ಪಡೆದಿದ್ದ ವಿದ್ಯಾರ್ಥಿನಿಯರನ್ನು ಕೂರಿಸಿ ದೀಪವನ್ನು ಪ್ರಾರ್ಥನೆಯೊಂದಿಗೆ ಬೆಳಗಿಸಿ ಉದ್ಘಾಟಿಸಲಾಯಿತು. ಪ್ರಾರಂಭದ ದಿನಗಳಲ್ಲಿ ಟ್ರಸ್ಟಿನ ಕಾರ್ಯದರ್ಶಿಯವರೆ ಇಂಗ್ಲೀಷ್, ಸಮಾಜಶಾಸ್ತ್ರ ಮತ್ತು ಅರ್ಥಶಾಸ್ತ್ರ ಇತ್ಯಾದಿಗಳ ವಿಷಯಗಳ ಪಾಠವನ್ನು ಮಾಡುತ್ತಿದ್ದರು. ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸುವುದಕ್ಕಾಗಿ ಸುತ್ತಮುತ್ತಲಿನ ಹಳ್ಳಿಗಳಿಗೆ ಹೋಗಬೇಕೆಂದು ಯೋಚನೆ ಮಾಡಲಾಯಿತು. ಈ ಕೆಲಸಕ್ಕಾಗಿ ಸ್ಥಳೀಯ ಹೈಸ್ಕೂಲ್‌ನ ಮುಖ್ಯೋಪಾಧ್ಯಾಯರಾಗಿದ್ದ ಶ್ರೀ.ವಿ.ವೆಂಕಟರಾಮೇಗೌಡ ಮತ್ತು ಇತರ ಅಧ್ಯಾಪಕರ ನೆರವನ್ನು ಪಡೆಯಲಾಯಿತು. ಆಗ ಟ್ರಸ್ಟಿನ ಉಪಯೋಗದಲ್ಲಿದ್ದ ಜೀಪನ್ನು ತೆಗೆದುಕೊಂಡು ಸ್ನೇಹಿತರ ಜೊತೆಗೆ ಹಲವಾರು ಹಳ್ಳಿಗಳಿಗೆ ಹೋಗಿ ಪಾಲಕರ ಮನವಲಿಸಿ ಇನ್ನು ಕೆಲವು ವಿದ್ಯಾರ್ಥಿಗಳನ್ನು ಸೇರಿಸಲಾಯಿತು.

ಕಾಲೇಜಿಗೆ ಅಗತ್ಯವಾದ ಸಿಬ್ಬಂದಿಯ ಹುಡುಕಾಟ ಪ್ರಾರಂಭವಾಯಿತು. ಆಗ ಮೇಲುಕೋಟೆಯ ಸಂಬಂಧವಿದ್ದ ನಿವೃತ್ತ ಪ್ರೊ.ಆಗಿದ್ದ ಶ್ರೀನಿವಾಸನ್ ಎಂಬುವವರನ್ನು ಪ್ರಾಂಶುಪಾಲರನ್ನಾಗಿ ನಿಯುಕ್ತಿಮಾಡಲಾಯಿತು. ಅವರು ಬಹು ಶ್ರದ್ಧೆಯಿಂದ ಕೆಲಸ ನಿರ್ವಹಿಸುತ್ತಿದ್ದರು ಮತ್ತು ಕಾಲೇಜಿನ ಬೆಳವಣಿಗೆಯ ಬಗ್ಗೆ ಆಲೋಚಿಸುತ್ತಿದ್ದರು. ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾದುದರಿಂದ ತರಗತಿಗಳಿಗಾಗಿ ಹೆಚ್ಚಿನ ಸ್ಥಳಾವಕಾಶ ಅಗತ್ಯವಾಯಿತು. ಮೇಲುಕೋಟೆಯಲ್ಲಿರುವ ಪರಕಾಲ ಮಠದೊಂದಿಗೆ ಟ್ರಸ್ಟಿನ ಸಂಬಂಧ ಬಂದಿತ್ತು. ಅಂದಿನ ಪರಕಾಲ ಮಠದ ಸ್ವಾಮಿಯವರ ಕೃಪೆಯಿಂದ ಕರುಣಾಗೃಹಕ್ಕೆ ಒಂದು ಹಳೆಯ ಕಟ್ಟಡ ಸಿಕ್ಕಿತ್ತು ಹಾಗೂ ಬಯಲು ಪ್ರದೇಶ ಸಿಕ್ಕಿತ್ತು. ಸಹಾಯ ಮನೋಭಾವದ ಮಠದ ಶ್ರೀಗಳ ಬಳಿಗೆ ಹೋಗಿ ಕಾಲೇಜಿಗಾಗಿ ಸ್ಥಳಾವಕಾಶ ಕೋರಲಾಯಿತು. ಪ್ರಾಂಶುಪಾಲರಾಗಿದ್ದ ಶ್ರೀನಿವಾಸನ್ ಕೂಡ ಸ್ವಾಮೀಜಿಯವರಿಗೆ ಕಾಲೇಜಿನ ಅಗತ್ಯದ ಬಗ್ಗೆ ಮನವರಿಕೆ ಮಾಡಿಕೊಟ್ಟು ಮಠದ ಆವರಣದಲ್ಲಿ ಕಾಲೇಜು ನಡೆಸಲು ಸ್ಥಳಾವಕಾಶ ಪಡೆಯಲು ನೆರವಾದರು.

ಖಾದಿ ವಿಚಾರ

ಸ್ವಾತಂತ್ರ್ಯದ ಸಂಗ್ರಾಮ ಮತ್ತು ಚರಕ

ಚರಕ ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡುವ ಗಾಂಧೀ ಸೇನೆಯ ಆಯುಧವಾಗಿತ್ತು. ಆ ಆಯುಧ ಯಾರನ್ನೂ ಹೊಡೆಯುವುದಕ್ಕಲ್ಲ, ಬದಲಿಗೆ ತನ್ನ ಅಸ್ತಿತ್ವದ ರಕ್ಷಣೆಗಾಗಿ ಸಿದ್ಧವಾಗಿರುತ್ತದೆ. ಶತ್ರುವನ್ನು ಹೊಡೆಯುವುದಕ್ಕಾಗಿರದೆ ಅವನ ಹೃದಯ-ಪರಿವರ್ತನೆಗಾಗಿ ಇದ್ದಂತ ಜಗತ್ತಿನ ಮೊದಲನೆಯ ಆಯುಧವಾಗಿದೆ. ಆತ್ಮಶಕ್ತಿಯಿಂದ ಸಂಚರಿತವಾಗುವ ಹಾಗೂ ಸ್ವಮದ್ದಿನಿಂದ ನಡೆಯುವಂಥ ಮೊದಲ ಅಪ್ರತಿಮ ಆಯುಧ ಇದಾಗಿದೆ. ಚರಕಗಳಿಂದ ತಯಾರಾಗುವ ನೂಲಿನ ಲಡಿಗಳೇ ಗುಂಡುಗಳಾಗಿರುತ್ತವೆ ಮತ್ತು ಅವುಗಳ ಮೂಲಕ ಸ್ವರಾಜ್ಯ ಗೆಲ್ಲಲಾಯಿತು. ಚರಕ ಅಹಿಂಸೆಯ ಆಯುಧ.

"ಚರಕ ನಡೆಸುವೆವು, ಸ್ವರಾಜ್ಯ ಪಡೆಯುವೆವು" ಈ ಗೀತೆ ಸ್ವಾತಂತ್ರ್ಯದ ಹೋರಾಟದ ಕಾಲದಲ್ಲಿ ಮನೆಮನೆಗಳಲ್ಲಿ ಹಾಡಲಾಗುತ್ತಿತ್ತು. ಎಲ್ಲಿಯೇ ಚರಕ ನಡೆಯುತ್ತಿದ್ದರೂ ಅಲ್ಲಿ ಈ ಗೀತೆಯ ಧ್ವನಿ ಕೇಳಿಬರುತ್ತಿತ್ತು. ಚರಕಾದಿಂದ ಸ್ವರಾಜ್ಯ ಪ್ರಾಪ್ತವಾಗುವುದು ಎಂಬ ಕಲ್ಪನೆ ಆ ಸಮಯದಲ್ಲೂ ಕೂಡ ಮತ್ತು ಈಗಲೂ ಕೂಡ ಯಾವುದೇ ಭಾರತೀಯನಿಗೆ ಕಲ್ಪನೆಮಾಡಿಕೊಳ್ಳುವುದು ಆಶ್ಚರ್ಯಕಾರಕವಾಗಿತ್ತು. ಆದರೆ ಗಾಂದೀಜಿಗಲ್ಲ. ಭಾರತದ ಭೂಮಿಯ ಮೇಲೆ ಹೆಜ್ಜೆ ಇಟ್ಟಂದಿನಿಂದ ತಮ್ಮ ಅಂತಿಮ ಸಮಯದವರೆಗೆ ಚರಕಾ ನಡೆಸಿ , ಸ್ವರಾಜ್ಯ ಪಡೆಯಿರಿ ಎಂದು ಹೇಳುವ ಏಕೈಕ ವ್ಯಕ್ತಿಯಾಗಿದ್ದರು ಗಾಂಧೀಜಿ. ಈ ಮಾತಿನ ಅರ್ಥವನ್ನು ತಿಳಿಯುವುದಕ್ಕಾಗಿ ನಾವು ಚರಕಾದ ಇಡೀ ಜೀವನ ವೃತ್ತಾಂತವನ್ನು ತಿಳಿಯಬೇಕಾಗುವುದು. ಗಾಂಧೀಜಿ ಯಾವ ರೀತಿ ಚರಕಾವನ್ನು ಕೇವಲ ಸ್ವರಾಜ್ಯ ಪ್ರಾಪ್ತಿಯ ಆಯುಧವನ್ನಾಗಿ ಮಾಡಿದರಷ್ಟೇ ಅಲ್ಲ. ಸ್ವರಾಜ್ಯ ಉಳಿದುಕೊಂಡು ಬರುವ ಸಾಧನವನ್ನಾಗಿಯೂ ಹೇಗೆ ಮಾಡಿದರು ಎಂಬುದನ್ನು ಕೂಡ ನಾವು ತಿಳಿಯಬೇಕಾಗಿದೆ.

ನಮ್ಮ ಗುಲಾಮಿಯ ಕಾರಣಕ್ಕೆ ಅತ್ಯಂತ ದೊಡ್ಡ ಕಾರಣ ನಮ್ಮ ಬಟ್ಟೆ ಉದ್ಯೋಗದ ಸರ್ವನಾಶ. ಇಂಗ್ಲೀಷರ ರಾಜ್ಯಭಾರ ನಮ್ಮ ನೇಕಾರರ ಬೆರಳುಗಳನ್ನು ಕತ್ತರಿಸಿತು. ಲಂಗ್‌ಷಾಯರ್ ಮತ್ತು ಮ್ಯಾಂಚಸ್ಟರ್‌ಗಳಲ್ಲಿಯ ಗಿರಣಿಗಳಲ್ಲಿ ತಯಾರಾದ ಬಟ್ಟೆಯನ್ನು ಭಾರತದಲ್ಲಿ ತುಂಬಿ ಬಿಟ್ಟಿತ್ತು. ನಮ್ಮ ದರಿದ್ರತೆಯ ಅತಿ ದೊಡ್ಡ ಕಾರಣ ಇದೇ. ಬಟ್ಟೆಯನ್ನು ನೇಯುವುದಕ್ಕಾಗಿ ಪ್ರಯೋಗಕ್ಕೆ ಬಂದ ಮಗ್ಗ ಪಾರಂಪರಿಕವಾಗಿ ಭೂಮಿಯಲ್ಲಿ ಚಿಕ್ಕದೊಂದು ಗುಂಡಿಯನ್ನು ತೆಗೆದು ಸ್ಥಾಪಿಸಲಾಗುತ್ತದೆ. ಈ ಕಾರಣದಿಂದಾಗಿ ಸ್ಥಳೀಯ ಭಾಷೆಯಲ್ಲಿ ಗುಂಡಿಮಗ್ಗ ಎಂದು ಕರೆಯಲಾಗುತ್ತದೆ. ಇಡೀ ದೇಶದಲ್ಲಿ ಸರಿ ಸುಮಾರು ಈ ಪದ್ಧತಿಯಿಂದಲೇ ನೇಯ್ಗೆ ಆಗುತ್ತಿತ್ತು. ಎರಡನೆಯದಾಗಿ ಅದರ ಸ್ವರೂಪ ಅಸಮಾನವಾಗಿರುತ್ತಿತ್ತು. ಆದ್ದರಿಂದ ಅದರಲ್ಲಿ ಒರಟುತನ ಇರುತ್ತದೆ. ಆ ಕಾರಣಕ್ಕಾಗಿ ಈ ಬಟ್ಟೆಗೆ ಖದ್ದರ್ ಎಂಬ ಹೆಸರಿನಿಂದ ಕರೆಯಲಾಗುತ್ತದೆ. ಬಹುಶಃ ಖದ್ದರ್ ಮತ್ತು ಖಡ್ಡಿ(ಗುಂಡಿ)ಯ ಸಂಯುಕ್ತ ಅರ್ಥದಲ್ಲಿ ಖಾದಿ ಶಬ್ದದ ಉತ್ಪತ್ತಿಯಾಗಿರಬಹುದು.

ಸರ್ವೋದಯ ಆಂದೋಲನದ ಮುನ್ನಡೆ

ಅಖಿಲ ಭಾರತ ಸರ್ವೋದಯ ಮಂಡಲದ ೮೨ನೇ ಅಧಿವೇಶನ ೨೦೧೪ ಮಾರ್ಚ್ ೨ರಂದು ಗಾಂಧೀಜಿಯವರ ಸೇವಾಗ್ರಾಮ ಆಶ್ರಮದಲ್ಲಿ ನೆರವೇರಿತು. ಅಧಿವೇಶನದ ವಿಶೇಷ ಅತಿಥಿ ಡಾ॥ ಅಭಯ ಬಂಗ್‌ರವರು "ದೇಶದ ಹಾಗೂ ಜಗತ್ತಿನ ಇಂದಿನ ಪರಿಸ್ಥಿತಿ ಮತ್ತು ನಮ್ಮ ಹೊಣೆಗಾರಿಕೆ ಕುರಿತು ಮಾತನಾಡಿದರು". ಶ್ರೀ.ವಿಜಯ್ ಜಾವಂದಿಯಾರವರು ರೈತರ ಸಮಸ್ಯೆ ಮತ್ತು ಸರ್ವೋದಯ ಆಂದೋಲನದ ವಿಷಯದ ಬಗ್ಗೆ ಮಾತನಾಡಿದರು. ತಮ್ಮ ವಿಚಾರ ಪೂರ್ಣ ಭಾಷಣಗಳ ಮೂಲಕ ಈ ಇಬ್ಬರು ಮಹನೀಯರು ಉಪಸ್ಥಿತರಿದ್ದ ಲೋಕಸೇವಕರಿಗೆ ಹೊಸ ಶಕ್ತಿ ಅಲೆಯನ್ನು ಉಂಟುಮಾಡಿದರು. ಅಧಿವೇಶನದ ಎರಡನೆಯ ದಿನ ಶ್ರೀ. ಮಹಾದೇವ ವಿದ್ರೋಹಿ ಅವರನ್ನು ಅಖಿಲ ಭಾರತ ಸರ್ವೋದಯ ಮಂಡಲದ ೨೨ನೇ ಅಧ್ಯಕ್ಷರನ್ನಾಗಿ ಅಯ್ಕೆಮಾಡಲಾಯಿತು.

ಶ್ರೀ.ವಿದ್ರೋಹಿಯವರು ೧೯೬೯ರಲ್ಲಿ ತರುಣ ಶಾಂತಿ ಸೇನೆಯ ಓರ್ವ ಸೈನಿಕನ ರೂಪದಲ್ಲಿ ಸರ್ವೋದಯ ಆಂದೋಲನದಲ್ಲಿ ಪ್ರವೇಶ ಮಾಡಿದ್ದರು. ಅಂದಿನಿಂದ ಇಂದಿನವರೆಗೆ ಅವರು ಸಾಮಾಜಿಕ ಚಟುವಟಿಕೆಗಳ ವಿಭಿನ್ನ ಸಂಘಟನೆಗಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ. ೧೯೭೪-೭೫ ರಲ್ಲಿ ವಿದ್ಯಾರ್ಥಿ ಆಂದೋಲನ ಮತ್ತು ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಅವರನ್ನು ನಾಲ್ಕು ಬಾರಿ ಬಂಧಿಸಲಾಗಿತ್ತು. ಆ ಕಾರಣದಿಂದಾಗಿ ಬಹಳ ಕಾಲದವರೆಗೆ ಜೈಲಿನಲ್ಲಿ ಇರಬೇಕಾಯಿತು. ಈ ಮೊದಲು ಅವರು ಸರ್ವಸೇವಾ ಸಂಘದ ಹಿರಿಯ ಕಾರ್ಯದರ್ಶಿಯಾಗಿ ಹಾಗೂ ಧರ್ಮದರ್ಶಿಮಂಡಲಿಯ ವ್ಯವಸ್ಥಾಪಕ ಧರ್ಮದರ್ಶಿಯಾಗಿ ಜವಾಬ್ದಾರಿಯನ್ನು ನಿರ್ವಹಿಸಿದ್ದಾರೆ. ೨೦೧೧ರಲ್ಲಿ ಅವರು ಜಯಪ್ರಕಾಶ್ ನಾರಾಯಣ್ ಪ್ರಶಸ್ತಿಯಿಂದ ಸನ್ಮಾನಿಸಲ್ಪಟ್ಟಿದ್ದಾರೆ.

ಶ್ರೀ ವಿದ್ರೋಹಿಯವರು ಅಧ್ಯಕ್ಷರಾಗಿ ಆಯ್ಕೆಗೊಂಡ ನಂತರ ದೇಶದೆಲ್ಲೆಡೆಯ ಸಾಮಾಜಿಕ ಸಂಘಟನೆಗಳು ಅವರಿಗೆ ಶುಭವನ್ನು ಕೋರಿದರು ಮತ್ತು ಸರ್ವೋದಯ ಆಂದೋಲನದಲ್ಲಿ ಒಂದು ಹೊಸ ಯುಗ ಪ್ರಾರಂಭವಾಯಿತೆಂದು ಹೇಳಿದರು. ಅವರ ನೇತೃತ್ವದಲ್ಲಿ ಸರ್ವಸೇವಾ ಸಂಘ ಎಲ್ಲ ಪರಿವರ್ತನಾ ಶೀಲ ಶಕ್ತಿಗಳನ್ನು ಒಗ್ಗೂಡಿಸಿಕೊಂಡು ಹೊಸ ಮತ್ತು ಸಶಕ್ತ ಆಂದೋಲನದ ಸೂತ್ರದಾರಿಯಾಗುವರೆಂದು ಆಶಿಸಲಾಯಿತು. ಅಧಿವೇಶನದ ನಂತರ ಪತ್ರಕಾರರೊಂದಿಗೆ ಮಹಾದೇವ ವಿದ್ರೋಹಿಯವರು ಹೇಳಿದ್ದೇನೆಂದರೆ ಸರ್ವ ಸೇವಾ ಸಂಘ ಆರ್ಥಿಕ ಅಸಮಾನತೆಯ ವಿರುದ್ಧ ತನ್ನ ಚಳುವಳಿಯನ್ನು ತೀರ್ವಗೊಳಿಸುವುದು.ಈ ಚಳುವಳಿಯ ಮೊದಲ ಹೆಜ್ಜೆಯಾಗಿ ಮುಖೇಷ್ ಅಂಬಾನಿಯವರ "ಐಟೀಲಿಯಾ" ಮಹಲಿನ ವಿರುದ್ಧ ಸತ್ಯಾಗ್ರಹ ಮಾಡುವುದು. ಭೂದಾನದ ರೈತರನ್ನು ಸಂಘಟಿಸುವುದು ಮತ್ತು ಗೋವಧೆ ನಿಷೇಧ ಆಂದೋಲನಕ್ಕೆ ತೀವ್ರತೆಯನ್ನು ತರುವುದು.

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತ-ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ ೧೫ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ-ಅಂಚೆ

KA / SK / MND / 470 / 2012-2014
Regd. no. KAR / KAN / 2000 / 3820



ಶ್ರೀಮತಿ/ ಶ್ರೀ...

....

....

–570023

JANAPADA VICHARA
Kannada Monthly Digest Edited Printed and Published by Surendra Koulagi at Janapada Seva Trust Melkote,
Dist- Mandya – 571431. Phone : 08236 316344 / 299854
e-mail : janapada@yahoo.com - web : janapada.net
Printed at Sanketh Mudrana, Melkote.